# ಶಾಶ್ವತ ಯೌಗಿಕ ಬೇಸಾಯ

## ನೂತನಯುಗಕ್ಕಾಗಿ ನೂತನ ಸೂತ್ರ

**ಗ್ರಾಮೀಣ ವಿಕಾಸ ವಿಭಾಗ, ರಾಜಯೋಗ ಎಜ್ಯುಕೇಶನ್ ಆ್ಯಂಡ್ ರಿಸರ್ಚ ಪೌಂಡೇಶನ್**

**ಮತ್ತು**

**ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ,**

**ಅಬುಪರ್ವತ, ರಾಜಸ್ಥಾನ, ಭಾರತ.**

ಮೇ, 2010

**ಮುದ್ರಕರು** :
ಓಂಶಾಂತಿ ಪ್ರೆಸ್, ಜ್ಞಾನಾಮೃತ ಭವನ್
ಶಾಂತಿವನ, ಅಬೂ ರೋಡ್ – 307 510
ಫೋನ್:– 228125, 228124

**ಪ್ರಕಾಶಕರು** :
© **ಹಕ್ಕುಗಳನ್ನು ಕಾದಿರಿಸಲಾಗಿದೆ** – ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯ, ಅಬುಪರ್ವತ, ರಾಜಸ್ಥಾನ, ಭಾರತ.
ಪ್ರಕಾಶಕರ ಅನುಮತಿ ಇಲ್ಲದೆ ಪುಸ್ತಕದ ಯಾವುದೇ ಭಾಗವನ್ನು ಮುದ್ರಿಸುವಂತಿಲ್ಲ.

# ಅಂತರಂಗದ ಅಂಗಳದಲ್ಲಿ


1. ಶಾಶ್ವತ ಯೌಗಿಕ ಬೇಸಾಯಕ್ಕೆ ಪ್ರೇರಣೆ ನೀಡಿದವರು ........ 4
2. ಶುಭ ಪ್ರೇರಣೆಯ ಸಂದೇಶ........ 5
3. ಶುಭ ಭಾವನೆಯ ಸಂದೇಶ ........ 6
4. ಶುಭ ಕಾಮನೆಯ ಸಂದೇಶ........ 7
5. ಪ್ರಸ್ತಾವನೆ ........
6. ಈಶ್ವರೀಯ ಪ್ರೇರಣೆ – ವೃತ್ತಿಯ ಮುಖಾಂತರ ಪ್ರಕೃತಿಯನ್ನು ಪರಿವರ್ತಿಸಿ ........ 10
7. ಶಾಶ್ವತ ಯೌಗಿಕ ಬೇಸಾಯ ಯೋಜನೆಯ ಅವಶ್ಯಕತೆ........ 12
8. ಯೋಗದ ಪ್ರಯೋಗದ ವಿಧಿ ಹಾಗೂ ಅದರ ಪರಿಣಾಮ........ 19
9. ಜಮಿನನ್ನು ಶಕ್ತಿಶಾಲಿ ಮಾಡಲು – ಸೇಂದ್ರೀಯ ಮತ್ತು ಜೈವಿಕ ಗೊಬ್ಬರ ತಯಾರ ಮಾಡುವ ವಿಧಾನ ........
10. ಬೆಳೆಯ ಸಂರಕ್ಷಣೆ........ 31
11. ಜಮೀನಕ್ಕಾಗಿ ಸೂಕ್ಷ್ಮವಾದ ವಾತಾವರಣ (ಪರ್ಯಾವರಣ)........ 45
12. ಶಾಶ್ವತ ಯೌಗಿಕ ಬೇಸಾಯ ಮಾಡುವ ರೈತರಿಗೆ ಸಲಹೆಗಳು ಮತ್ತು ನಿಯಮಗಳು35
13. ಬೇರೆ ಬೇರೆ ಬೆಳೆಗಳಿಗಾಗಿ ಲಕ್ಷ್ಯವಹಿಸಬೇಕಾದ ಯೋಗ್ಯ ಅನುಭವಯುಕ್ತ ಮಾತುಗಳು ........
14. ಶಾಶ್ವತ ಯೌಗಿಕ ಬೇಸಾಯದಿಂದ ಉತ್ಪಾದನೆ ಮಾಡಿರುವ ಕೆಲ ಬೆಳೆಗಳಲ್ಲಿ ತತ್ವಗಳ ತುಲನಾತ್ಮಕ ಅಧ್ಯಯನ ........
15. ಶಾಶ್ವತ ಯೌಗಿಕ ಬೇಸಾಯವನ್ನು ಮಾಡಿರುವ ಕೆಲ ರೈತರ ಅನುಭವ
    - ಬ್ರಹ್ಮಾಕುಮಾರ ತುಳಸಿ ಅಣ್ಣನವರು . . . .. . . . . . . . . .
    - ಬ್ರಹ್ಮಾಕುಮಾರ ಬಾಳಾಸಾಹೇಬ ಅಣ್ಣನವರು . . . . . . . . . ..
    - ಬ್ರಹ್ಮಾಕುಮಾರ ಭೋಲಾನಾಥ ಅಣ್ಣನವರು . . . . . . . . . . .

# ಶಾಶ್ವತ ಯೌಗಿಕ ಬೇಸಾಯಕ್ಕೆ ಪ್ರೇರಣೆ ನೀಡಿದವರು

2008 ಫೆಬ್ರವರಿ 18 ರಂದು ಪರಮಕೃಷಿಕ, ಪರಮಪಿತ ಪರಮಾತ್ಮನು ಹಾಗೂ ವಿಶ್ವಕರ್ಮ ಅವ್ಯಕ್ತ ಪಿತಾಶ್ರೀ ಬ್ರಹ್ಮಾರವರು ಗೌರವಾನ್ವಿತರಾದ ಪೂಜ್ಯ ಹೃದಯಮೋಹಿನಿ ದಾದೀಜೀಯವರ ಮಾಧ್ಯಮದ ಮುಖಾಂತರ "ಗ್ರಾಮೀಣ ವಿಕಾಸ ವಿಭಾಗ"ದ ಬ್ರಹ್ಮಾಕುಮಾರ ಸಹೋದರ, ಬ್ರಹಾಕುಮಾರಿ ಸಹೋದರಿಯರಿಗೆ "ಶಾಶ್ವತ ಯೌಗಿಕ ಕೃಷಿಯ" ಸಂದರ್ಭದಲ್ಲಿ ಪ್ರೇರಣೆಯನ್ನೀಯುತ್ತ ಹೀಗೆ ನುಡಿದರು.....

*"ಯಾವುದಾದರೂ ನವೀನತೆಯನ್ನು ಮಾಡಿ ತೋರಿಸುತ್ತಿರುವಿರಲ್ಲವೇ? ಯಾವುದಾದರೂ ನವೀನತೆಯನ್ನು ಕೈಗೊಂಡಿರುವಿರಾ? ಯಾರಾದರೂ ಹೇಳಿ! " (ರಾಜಯೋಗಿನಿ ಬ್ರ. ಕು. ಮೋಹಿನಿ, ಅಧ್ಯಕ್ಷರು, ಗ್ರಾಮೀಣ ವಿಕಾಸ ವಿಭಾಗ, ಯೋಗದ ಪ್ರಯೋಗದ ಜೊತೆಗೆ ಜೈವಿಕ ಕೃಷಿಯನ್ನು ಆರಂಭಿಸಲು ಯೋಜನೆಯನ್ನು ಕೈಗೊಂಡಿದ್ದೇವೆ ಎಂದು ವಿವರಿಸಿದರು)" ಒಳ್ಳೆಯದು, ಏಕೆಂದರೆ ಇಂದಿನ ಬೆಳೆಯಿಂದ ಸಿಗುತ್ತಿರುವ ಉತ್ಪಾದನೆಗಳಿಂದಲೂ ಅನೇಕ ಸಮಸ್ಯೆಗಳಿವೆ, ಆದ್ದರಿಂದ ಉತ್ತಮವಾದ ಕಾರ್ಯವನ್ನು ನಿರ್ವಹಿಸುತ್ತಿರುವಿರಿ. ಒಂದು, ಸಹಜ ರಾಜಯೋಗದ ಅಭ್ಯಾಸದಿಂದ ತಮಗೂ ಲಾಭವಾಗುತ್ತದೆ. ಎರಡನೇಯದಾಗಿ, ಜನರಿಂದಲೂ ಆಶೀರ್ವಾದವು ಸಿಗುತ್ತದೆ. ಆದುದರಿಂದ ಅತ್ಯುತ್ತಮವಾದ ಕಾರ್ಯವನ್ನು ಮಾಡುತ್ತಿರುವಿರಿ. ಉತ್ಸಾಹ ಉಲ್ಲಾಸದಿಂದ ಮುನ್ನಡೆಯುತ್ತಿರುವಿರಿ ಮತ್ತು ಮುಂದೆಯೂ ಮುನ್ನಡೆಯುತ್ತಾ ಹೋಗಿರಿ. ಶುಭಾಶಯಗಳು, ಒಳ್ಳೆಯದು..... "*

# ಶುಭ ಪ್ರೇರಣೆಯ ಸಂದೇಶ


ರಾಜಯೋಗಿನಿ ದಾದೀ ಜಾನಕೀಜೀ, ಪ್ರಧಾನ ಪ್ರಶಾಸಕರು
ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ, ಅಬುಪರ್ವತ.

ಜಗತ್ತಿನ ನಾಟಕದ ಆದಿಯಾದ ಸುವರ್ಣಯುಗದಲ್ಲಿ ಪ್ರತಿಯೊಬ್ಬ ಮಾನವನು ಸರ್ವಗುಣಗಳಿಂದ ಸಂಪನ್ನನು, ಹದಿನಾರು ಕಲೆಗಳಿಂದ ಸಂಪೂರ್ಣನಾಗಿ ದೇವತಾ ಸ್ವರೂಪದಲ್ಲಿದ್ದನು. ಅಲ್ಲಿ ಸಂಪೂರ್ಣ ಆರೋಗ್ಯ, ಸಮೃದ್ಧಿ, ಅಪಾರವಾದ ಸುಖ, ಶಾಂತಿ ಹಾಗೂ ದಿವ್ಯ ಸಂಸ್ಕೃತಿಯಿಂದ ಸಂಪನ್ನವಾದ ಜೀವನ ಶೈಲಿ ಅವರದ್ದಾಗಿತ್ತು. ಅಂದಿನ ಸಾತ್ವಿಕ ವ್ಯವಸಾಯದಿಂದ ಸ್ವಾದಿಷ್ಟ, ಶುದ್ಧ ಹಾಗೂ ಪೌಷ್ಟಿಕ ಆಹಾರ, ಫಲ–ಪುಷ್ಪಗಳು, ಕಾಯಿ ಪಲ್ಯಗಳು ಸಹಜವಾಗಿ ಸಿಗುತ್ತಿದ್ದವು. ಅಂತಹ ನೂತನವಾದ ಯುಗವನ್ನು ಪರಮಪಿತ ಪರಮಾತ್ಮನು ಇದೀಗ ನಿರ್ಮಿಸುತ್ತಿದ್ದಾನೆ.

ಅಂತಹ ಪರಿವಾರ್ತನಾಶೀಲವಾದ ಸಮಯದಲ್ಲಿ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಹಯೋಗಿ ಸಂಸ್ಥೆಯಾದ ರಾಜಯೋಗ ಎಜುಕೇಶನ್ ಅಂಡ್ ರೀಸರ್ಚ್ ಫೌಂಡೇಶನ್ (R.E.R.F.) ದ ಗ್ರಾಮೀಣ ವಿಕಾಸ ವಿಭಾಗದ ಮುಖಾಂತರ ಈಶ್ವರನ ಜ್ಞಾನ ಹಾಗೂ ರಾಜಯೋಗದ ಆಧಾರದ ಮೇಲೆ "ಶಾಶ್ವತ ಯೌಗಿಕ ಬೇಸಾಯದ ಯೋಜನೆ. ನೂತನ ಯುಗಕ್ಕಾಗಿ ನೂತನ ಸೂತ್ರ"ವನ್ನು ಮುಂದಿಡುತ್ತಿದ್ದಾರೆ, ಇಂದು ಇದು ವಿಶೇಷವಾಗಿ ಭಾರತ ಹಾಗೂ ಸಂಪೂರ್ಣ ವಿಶ್ವದ ರೈತಾಪಿ ಸಹೋದರ ಸಹೋದರಿಯರಿಗಾಗಿ ಮಾರ್ಗದರ್ಶನ ಹಾಗೂ ಸಹಕಾರಿಯಾಗುತ್ತದೆ. ಈ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಗ್ರಾಮೀಣ ವಿಕಾಸದ ಎಲ್ಲಾ ಕಾರ್ಯಕರ್ತರನ್ನು ನಾನು ತುಂಬು ಹೃದಯದಿಂದ ಹಾರ್ದಿಕವಾಗಿ ಅಭಿನಂದಿಸುತ್ತೇನೆ ಹಾಗೂ ಈ ನೂತನವಾದ ಯೋಜನೆಯನ್ನು ಸಫಲಗೊಳಿಸುತ್ತಿರುವ ತಮ್ಮಗಳಿಗೆ ಕೋಟಿ ಕೋಟಿ ಶುಭ ಪ್ರೇರಣೆಯನ್ನೀಯುತ್ತಾ ಸರ್ವರಿಗೂ ಶುಭಾಶಯಗಳನ್ನು ನೀಡುತ್ತಿದ್ದೇನೆ. ಸಫಲತೆಯು ತಮ್ಮ ಜನ್ಮ ಸಿದ್ಧವಾದ ಅಧಿಕಾರವಾಗಿದೆ. ತಮ್ಮೆಲರಿಗೂ ಶುಭ ಕಾಮನೆಯನ್ನೀಯುತ್ತಿದ್ದೇನೆ.

ಈಶ್ವರೀಯ ಸೇವೆಯಲ್ಲಿ.

B.K. Janki

(ಬ್ರಹ್ಮಾಕುಮಾರಿ ಜಾನಕಿ)

## ಶುಭ ಭಾವನೆಯ ಸಂದೇಶ



**ರಾಜಯೋಗಿನಿ ದಾದಿ ಹೃದಯಮೋಹಿನಿ**
**ಉಪ ಮುಖ್ಯ ಆಡಳಿತಾಧಿಕಾರಿಗಳು**
**ಆಬು ಪರ್ವತ**

ಇಂದು ಕೃಷಿಕ ಸಹೋದರ ಸಹೋದರಿಯರ ಜೀವನದಲ್ಲಿ ಆಧ್ಯಾತ್ಮಿಕತೆ ಹಾಗೂ ವ್ಯವಸಾಯದ ಪದ್ಧತಿಯಲ್ಲಿ ಪ್ರಕೃತಿಯ ಐದು ತತ್ವಗಳು ಸತೋ ಪ್ರಧಾನವಾಗುವುದರ ಜೊತೆ ಜೊತೆಗೆ ಸಿಗುವ ಬೀಜ, ಗೊಬ್ಬರ ಹಾಗೂ ಸಾಧನ ಸಾಮಗ್ರಿಗಳೂ ಕೂಡಾ ಸಾತ್ವಿಕವಾಗಬೇಕಾದದ್ದು ಅತೀ ಅಗತ್ಯ. ಏಕೆಂದರೆ ಇಂದು ರೈತ ಸಹೋದರರು ಕೃಷಿ ಕ್ಷೇತ್ರದಲ್ಲಿ ಅನೇಕ ಪರಿಸ್ಥಿತಿಗಳನ್ನು ಹಾಗೂ ಸಮಸ್ಯೆಗಳನ್ನೂ ಎದುರಿಸುತ್ತಿದ್ದಾರೆ. ಇದರ ಫಲವಾಗಿ ವ್ಯವಸಾಯದಿಂದ ಬರುವಂತಹ ಉತ್ಪನ್ನಗಳಲ್ಲಿ ಎಷ್ಟು ಶುದ್ಧತೆ ಹಾಗೂ ಪೌಷ್ಠಿಕತೆ ಇರಬೇಕಾಗಿತ್ತೋ ಅಷ್ಟು ಸ್ವಾದಿಷ್ಟತೆ ಪ್ರಾಪ್ತಿಯಾಗುತ್ತಿಲ್ಲ. ಇದರ ಫಲವಾಗಿ ಅನೇಕ ಬಗೆಯ ಮಾನಸಿಕ ಹಾಗೂ ದೈಹಿಕ ರೋಗಗಳು ಹೆಚ್ಚಾಗುತ್ತಿವೆ.

ಇಂತಹ ಕಷ್ಟದ ಸಮಯದಲ್ಲಿ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಸಹಯೋಗಿ ಸಂಸ್ಥೆಯಾದ ರಾಜಯೋಗ ಎಜುಕೇಶನ್ ಅಂಡ್ ರಿಸರ್ಚ್ ಫೌಂಡೇಶನ್ (R.E.R.F.) ದ ಗ್ರಾಮೀಣ ವಿಕಾಸ ವಿಭಾಗದ ಮೂಲಕ "ಶಾಶ್ವತ ಯೌಗಿಕ ಬೇಸಾಯದ ಯೋಜನೆ – ನೂತನ ಯುಗಕ್ಕಾಗಿ ನೂತನ ಸೂತ್ರ."ವನ್ನು ಸಾದರ ಪಡಿಸುತ್ತಿದೆ. ಇದರ ಮುಖಾಂತರ ರಾಷ್ಟೀಯ ಹಾಗೂ ಅಂತರ್‌ರಾಷ್ಟ್ರೀಯ ರೈತಾಪಿ ಸಹೋದರ ಸಹೋದರಿಯರ ಎಲ್ಲಾ ಕಾರಣಗಳಿಗೂ ಸಹಜವಾದ ಹಾಗೂ ಯೋಗ್ಯವಾದ ಸಮಾಧಾನವು ಸಿಗಲಿದೆ. ಆದರೆ ನಮಗಂತೂ ಪೂರ್ಣ ವಿಶ್ವಾಸವಿದೆ – ರಾಜಯೋಗದ ಆಧಾರದ ಮೇಲಿನ ವ್ಯವಸಾಯದ ಸಂಸ್ಕೃತಿಗೆ ನೂತನ ಯುಗದ ನಿರ್ಮಾಣಕ್ಕೆ ಮಹತ್ವ ಪೂರ್ಣವಾದ ಸಹಕಾರವು ದೊರೆಯುವುದು. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಸಿದ್ದಪಡಿಸಿರುವ ಈ ಪಠ್ಯ ಕ್ರಮದಿಂದ ಕೃಷಿಕ ಸಹೋದರ ಸಹೋದರಿಯರಿಗೆ ಹೊಸ ಮಾರ್ಗದರ್ಶನವು ದೊರೆಯಲಿದೆ. ಈ ಪುಸ್ತಕದ ಪ್ರಕಾಶನದ ಬಗ್ಗೆ ನಾನು ನನ್ನ ಹಾರ್ದಿಕ ಶುಭ ಭಾವನೆಗಳನ್ನು ಹಾರೈಸುತ್ತೇನೆ

ಈಶ್ವರೀಯ ಸೇವೆಯಲ್ಲಿ.

Hirdaya Mohini

(ಬ್ರಹ್ಮಾಕುಮಾರಿ ಹೃದಯಮೋಹಿನಿ)

# ಶುಭಕಾಮನೆಯ ಸಂದೇಶ

ಭಾರತ ಕೃಷಿ ಪ್ರಧಾನ ದೇಶ, ಸುಮಾರು 70 ಭಾಗದಷ್ಟು ಜನರು ಕೃಷಿಕರಾಗಿದ್ದಾರೆ. ಕೃಷಿಯ ಆಧಾರದ ಮೇಲೆ ದೇಶದ ಆರ್ಥಿಕ ಸ್ಥಿತಿಯು ನಿಂತಿದೆ. ರೈತರನ್ನು **'ಅನ್ನದಾತ'** ಎಂದು ಕರೆಯುತ್ತಾರೆ. ಅವರ ಆಸಕ್ತಿ ಹಾಗೂ ಕಠಿಣವಾದ ಪರಿಶ್ರಮದಿಂದ ಉತ್ತಮವಾದ ಆಹಾರ, ಹಣ್ಣು, ಹೂ ಹಾಗೂ ತರಕಾರಿಗಳು ಲಭಿಸುತ್ತಿವೆ. ಇವೇ ಪ್ರತಿಯೊಬ್ಬ ಮಾನವನ ಮುಖ್ಯ ಬೇಡಿಕೆಗಳಾಗಿವೆ. ಪ್ರಾಚೀನ ಕಾಲದಿಂದಲೂ ಮಾನವನ ಜೀವನದಲ್ಲಿ ವ್ಯವಸಾಯವು ಕೇಂದ್ರ ಸ್ಥಾನವನ್ನು ಹೊಂದಿದೆ. ಇದರ ಆಧಾರದ ಮೇಲೆಯೇ ಭಾರತೀಯ ಹಬ್ಬಗಳು, ಉತ್ಸವಗಳು ನಡೆಯುತ್ತಿವೆ. ಕೃಷಿಯಿಂದಲೇ ಭಾರತೀಯ ಸಂಸ್ಕೃತಿಯ ಉಗಮ (Agriculture is an ancient culture) ವಾಗಿದೆ. ಆದುದರಿಂದಲೇ ಬಹುಷ: ಆಂಗ್ಲ ಭಾಷೆಯಲ್ಲಿ (Agri) ಮುಖ್ಯ ಸಂಸ್ಕೃತಿ ಎನಿಸಿಕೊಂಡಿದೆ. ಅನ್ನದಂತೆ ಮನಸ್ಸು ಎಂದು ಹೇಳುತ್ತಾರೆ. ದೇಹ ಮತ್ತು ಮನಸ್ಸುಗಳೆರಡರ ಆರೋಗ್ಯಕ್ಕೂ ಆಧಾರ ಆಹಾರವಾಗಿದೆ. ಆರೋಗ್ಯಕ್ಕಾಗಿ ಶುದ್ಧವಾದ, ಸಾತ್ವಿಕವಾದ ಆಹಾರ, ಹಣ್ಣು, ತರಕಾರಿ, ಹಾಲುಗಳ ಉತ್ಪಾದನೆ ಅತೀ ಅಗತ್ಯ.



ರಾಜಯೋಗಿನಿ ಬಿ.ಕೆ.ಮೋಹಿನೀಜೀ, ಅಧ್ಯಕ್ಷರು
ಗ್ರಾಮೀಣ ವಿಕಾಸ ವಿಭಾಗ, ಅಬುಪರ್ವತ.

ಗ್ರಾಮೀಣ ವಿಕಾಸ ವಿಭಾಗದಲ್ಲಿರುವ ಕೆಲವು ರೈತ ಸಹೋದರರು ಪರಮಾತ್ಮನ ಪ್ರೇರಣೆಯಿಂದ ಪ್ರೇರೇಪಿತರಾಗಿ ತಮ್ಮ ಹೊಲಗಳ ಮೇಲೆ ಸಕಾರಾತ್ಮಕ ಚಿಂತನೆ ಹಾಗೂ ಯೋಗದ ಪ್ರಯೋಗವನ್ನು ನಡೆಸಿದ್ದಾರೆ. ಇದರಿಂದ ಅವರುಗಳಿಗೆ ಉತ್ತಮವಾದ ಸಫಲತೆಯು ದೊರೆತಿದೆ. ಅವರ ಅನುಭವಗಳು ಹಾಗೂ ಕೃಷಿ ತಜ್ಞರ ಮಾರ್ಗದರ್ಶನಕ್ಕನುಸಾರವಾಗಿ ಈ ಗ್ರಾಮೀಣ ವಿಭಾಗದಿಂದ ಶಾಶ್ವತ ಯೌಗಿಕ ಬೇಸಾಯ – ನೂತನ ಯುಗಕ್ಕೆ ನೂತನ ಸೂತ್ರ ಎಂಬ ಪುಸ್ತಕವನ್ನು ಬಿಡುಗಡೆ ಮಾಡುತ್ತಿದ್ದೇವೆ. ಇದರಲ್ಲಿ ಯೋಗದ ಪ್ರಯೋಗವನ್ನು ಮಾಡಲು ವಿಧಿಗಳು, ಸೈಂದ್ರಿಯ ಹಾಗೂ ಜೈವಿಕ ಗೊಬ್ಬರಗಳ ತಯಾರಿಕೆ ಮತ್ತು ಬೆಳೆಗಳ ರಕ್ಷಣೆಗಾಗಿ ಬೇಕಾದ ಬಗೆ ಬಗೆಯ ಉಪಾಯಗಳನ್ನು ತುಂಬಾ ಸಹಜವಾಗಿ ಮುಂದಿಟ್ಟಿದ್ದಾರೆ. ಇಂತಹ ಯೌಗಿಕ ಕೃಷಿ ಮಾಡುವ ರೈತ ಸಹೋದರ ಸಹೋದರಿಯರಿಗಾಗಿ ಒಂದು ನಿಯಮಾವಳಿಗಳನ್ನು ಹಾಗೂ ಆ ನಿಯಮಗಳನ್ನು ಪಾಲಿಸುತ್ತಿರುವ ರೈತರ ಅನುಭವಗಳನ್ನು ಕೂಡ ಈ ಪುಸ್ತಕದಲ್ಲಿ ನಮೂದಿಸಿದ್ದೇವೆ.

ಈ ಪುಸ್ತಕವನ್ನು ಗಮನವಿಟ್ಟು ಅಭ್ಯಾಸ ಮಾಡಿ. ಇಲ್ಲಿರುವ ವಿಧಿ ವಿಧಾನಗಳನ್ನು ಹಾಗೇನಾದರೂ ಕೃಷಿ ಸಹೋದರ ಸಹೋದರಿಯರ ನಿಶ್ಚಯಾತ್ಮಕ ಬುದ್ಧಿಯಿಂದ, ಭಾವನೆ ಮತ್ತು ವಿವೇಚನೆಗಳೆರಡನ್ನೂ ಸಮತೋಲನೆಯಲ್ಲಿಟ್ಟುಕೊಂಡು ವ್ಯವಸಾಯವನ್ನು ಮಾಡಿದ್ದಾದರೆ ಅವರಿಗೆ ಶೇ. 100 ರಷ್ಟು ಸಫಲತೆಯು ಸಿಗುವುದೆಂಬ ಪೂರ್ಣವಾದ ಭರವಸೆಯೂ ನಮಗಿದೆ.

ಶುಭ ಕಾಮನೆಗಳೊಂದಿಗೆ,

ಈಶ್ವರೀಯ ಸೇವೆಯಲ್ಲಿ

बी. के. मोहिनी

(ಬ್ರಹ್ಮಾಕುಮಾರಿ ಮೋಹಿನಿ)

# ಪ್ರಸ್ತಾವನೆ

ಈ ಭೂಮಿಯಲ್ಲಿ ಆದಿಕಾಲವಾದ ಸತ್ಯ(ಕೃತ)ಯುಗವು ಆರಂಭವಾದಾಗ ಪ್ರಕೃತಿಯು ಸಂಪೂರ್ಣ ಸತೋಪ್ರದಾನವಾಗಿತ್ತು ಅಂದಿನ ವ್ಯವಸಾಯದಿಂದ ಸಾತ್ವಿಕ ಆಹಾರ, ಹಣ್ಣು, ಹೂ, ತರಕಾರಿಗಳು ಪ್ರಾಪ್ತಿಯಾಗುತ್ತಿದ್ದವು. ಅದರಿಂದ ಎಲ್ಲರ ದೇಹವು ಸಂಪೂರ್ಣ ಆರೋಗ್ಯಕರವಾಗಿತ್ತು. ಪ್ರತಿಯೊಬ್ಬ ಮಾನವನ ಮನಸ್ಸು ಮತ್ತು ದೇಹವು ಶುದ್ಧ ಹಾಗೂ ದಿವ್ಯ ಗುಣಗಳಿಂದ ಸಂಪನ್ನವಾಗಿದ್ದರಿಂದ ಅವರನ್ನು ದೇವೀ ದೇವತೆಗಳೆಂದು ಕರೆಯಲಾಗುತ್ತಿತ್ತು. ಪರಸ್ಪರ ಅವರಲ್ಲಿ ಸ್ನೇಹ, ಸಹಕಾರ, ಸದ್ಭಾವನೆ, ಸುಖ, ಶಾಂತಿ, ಪವಿತ್ರತೆಯು ತುಂಬಿದ್ದರಿಂದ ಭಾರತವು ಸುಖ, ಶಾಂತಿ, ಧನ – ಧಾನ್ಯಗಳಿಂದ ಸಂಪನ್ನವಾದ ಸುವರ್ಣ ಯುಗವಾಗಿತ್ತು. ಸೃಷ್ಟಿ ಚಕ್ರದ ನಿಯಮಕ್ಕನುಸಾರವಾಗಿ ನಿಧಾನವಾಗಿ ಮನುಷ್ಯಾತ್ಮನ ಜೊತೆ ಜೊತೆಗೆ ಪ್ರಕೃತಿಯ ಐದೂ ತತ್ವಗಳೂ ಕೂಡಾ ಸತೋಪ್ರಧಾನ ಸ್ಥಿತಿಯಿಂದ ಸತೋ, ರಜೋ, ತಮೋಸ್ಥಿತಿಗೆ ಬರಲಾರಂಭಿಸಿದವು. ಇದರಿಂದ ಆತ್ಮ ಮತ್ತು ಪ್ರಕೃತಿ ಎರಡರ ಶಕ್ತಿಯು ಕ್ಷೀಣಿಸಲಾರಂಭಿಸಿತು. ಮಧ್ಯಕಾಲದಲ್ಲಿ ಆತ್ಮನು ತನ್ನ ಮೂಲವಾದ ಪವಿತ್ರ ಸ್ವರೂಪವನ್ನು ಮರೆತು ದೇಹದ ಅಭಿಮಾನಕ್ಕೆ ಒಳಗಾದನು. ಆಗ ಆತ್ಮಗಳಲ್ಲಿ ವಿಕಾರಗಳು ಪ್ರವೇಶಿಸಲಾರಂಭಿಸಿದವು. ಇದರ ಪರಿಣಾಮವಾಗಿ ಜನಸಂಖ್ಯೆಯು ಕಾಲಕಳೆದಂತೆಯೇ ಹೆಚ್ಚುತ್ತಾ ಹೋಯಿತು. ಜೊತೆಗೆ ಅವಶ್ಯಕತೆಗಳು ಕೂಡ ಹೆಚ್ಚುತ್ತ ಹೋದವು. ಸ್ವಾರ್ಥ ಬುದ್ದಿಯು ಮಾನವನನ್ನು ಎಷ್ಟು ಆವರಿಸಿಕೊಂಡಿತು ಎಂದರೆ ಮನುಷ್ಯಾತ್ಮನು ಪ್ರಕೃತಿಯನ್ನು ಶೋಷಣೆ ಮಾಡಲಾರಂಬಿಸಿದನು. ಎರಡನೆ ಮಾಹಾಯುದ್ಧದ ಸಮಯದಲ್ಲಿ ವ್ಯವಸಾಯ ಉತ್ಪನ್ನಗಳನ್ನು ಹೆಚ್ಚಿಸುವ ಸಲುವಾಗಿ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ಬಳಸಲಾರಂಬಿಸಿದರು. ಇಂದು ಹೆಚ್ಚು ಆಹಾರವನ್ನು ಉತ್ಪಾದಿಸುವ ದುರಾಸೆಯಿಂದ ಅನೇಕಾನೇಕ ನೂತನ ವಿಧಾನಗಳನ್ನೆಲ್ಲ ಅನುಸರಿಸಲಾರಂಭಿಸಿದನು. ಜನಸಂಖ್ಯೆಯು ಹೆಚ್ಚಾದಂತೆಲ್ಲಾ ಆಹಾರಧಾನ್ಯಗಳ ಉತ್ಪಾದನೆಗೆ ಹೆಚ್ಚು ಒತ್ತು ಕೊಡಲಾಯಿತು. ಇದರ ಪರಿಣಾಮವಾಗಿ ಭೂ ಮಾತೆಯ ಶಕ್ತಿಯು ಕ್ಷೀಣಿಸಲಾರಂಭಿಸಿತು. ಫಲವತ್ತಾದ ಭೂಮಿಯು ಬಂಜರು ಭೂಮಿಯಂತೆ ಪರಿವರ್ತನೆಯಾಯಿತು. ಪ್ರಕೃತಿಯ ಎಲ್ಲಾ ತತ್ವಗಳು ತಮ್ಮ ಸಮತೋಲನೆಯನ್ನು ಕಳೆದುಕೊಂಡವು. ಲೋಭ ಹಾಗೂ ಹಿಂಸಕ ವೃತ್ತಿಯಿಂದ ಬೆಳದ ಆಹಾರ ಪದಾರ್ಥಗಳು ಎಲ್ಲರ ಮನೋವೃತ್ತಿಯನ್ನು ಹಿಂಸಾತ್ಮಕವನ್ನಾಗಿಸಿದವು. ಮನಸ್ಸು ಮತ್ತು ಬುದ್ಧಿಯಲ್ಲಿ ಅನೇಕ ಬಗೆಯ ಹೊಸ ಹೊಸ ರೋಗಗಳು ಅತಿಕ್ರಮಿಸಿಕೊಂಡವು. ತತ್ವಗಳ ಅಸಮತೋಲನೆಯಿಂದ ಕ್ಷಾಮ, ಭೂಕಂಪ, ಸುನಾಮಿ ಮತ್ತು ಕೆಲವು ಕಡೆ ಪ್ರವಾಹದ ರೂಪವನ್ನು ತಾಳಿತು. ಪ್ರಕೃತಿಯ ವಿಪತ್ತುಗಳ ಜೊತೆ ಜೊತೆಗೆ ಬೆಳೆಯಲ್ಲಿ ಅನೇಕ ಬಗೆಯ ಕೀಟಗಳು ಹಾಗೂ ರೋಗಗಳು ತಮ್ಮ ಪ್ರಭಾವವನ್ನು ಬೀರಲಾರಂಬಿಸಿದವು. ಇವೆಲ್ಲವೂ ಮನುಷ್ಯಾತ್ಮನ ದೂಷಿತ ಕರ್ಮಗಳು ಹಾಗೂ ಸ್ವಾರ್ಥ ವೃತ್ತಿಗಳ ಪರಿಣಾಮವಾಗಿದೆ.

'ವಿಶ್ವ ಆಹಾರ ಮತ್ತು ಕೃಷಿಯ ಸಂಘಟನೆ 1988' ರೋಮನ ನಿರ್ಣಯವು ಶಾಶ್ವತ ಗ್ರಾಮವಿಕಾಸವನ್ನು ಮಾಡುವುದಕ್ಕಾಗಿ ನೈಸರ್ಗಿಕ ಸಾಧನ ಸಾಮಗ್ರಿಗಳನ್ನು ಯೋಗ್ಯವಾಗಿ ಬಳಸಿಕೊಳ್ಳುವುದು ಅತ್ಯಾವಶ್ಯಕವೆಂದು ಸಾರಿತು. ಮಾನವನ ಮೂಲ ಅವಶ್ಯಕತೆಗಳಾದ ಆಹಾರ, ವಸ್ತ್ರ, ವಸತಿಗಳನ್ನು ಸಹಜವಾಗಿ ಪಡೆದುಕೊಳ್ಳಲು ಮಾನವನು ಜಾಗೃತನಾಗಬೇಕಾಗಿದೆ. ಏಕೆಂದರೆ ಮುಂಬರಲಿರುವ ಹೊಸ ಪೀಳಿಗೆಯು ಸುಖ ಶಾಂತಿಯಿಂದ ಬಾಳುವಂತಾಗಬೇಕು. ಇದನ್ನು ಪೂರೈಸಲು ನೆಲ, ಜಲ, ವನಸ್ಪತಿ, ಪಶು, ಪಕ್ಷಿ ಹಾಗೂ ಜೈವಿಕ ವೈವಿಧ್ಯತೆಯನ್ನು ಯೋಗ್ಯವಾಗಿ ಬಳಸಿಕೊಂಡು ಶಾಶ್ವತ ಕೃಷಿ ಉತ್ಪಾದನೆಮಾಡಿ ಪರ್ಯಾವರಣವನ್ನು ಸಮತೋಲನೆಯಲ್ಲಿಟ್ಟುಕೊಳ್ಳುವುದು ತುಂಬಾ ಅಗತ್ಯ. ಅದುದರಿಂದ ಆರ್ಥಿಕ ಹಾಗೂ ಸಾಮಾಜಿಕ ದೃಷ್ಟಿಯಿಂದ 'ತಂತ್ರ ಜ್ಞಾನ'ವನ್ನು ಅಭಿವೃದ್ಧಿ ಪಡಿಸುವುದು ಅತೀ ಅಗತ್ಯ.

ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದರ ಜೊತೆಗೆ ಅದನ್ನು ಯಾರು? ಹೇಗೆ ಬೆಳೆಸಿದರು? ಈ ಮಾತು ಆರೋಗ್ಯಕರವಾದ ಜೀವನಕ್ಕೆ ತುಂಬಾ ಮಹತ್ವವುಳ್ಳದ್ದಾಗಿದೆ. ಆದುದರಿಂದ ಈಗ ಸಮಯದ ಕರೆಗನುಸಾರವಾಗಿ ತಮ್ಮ ಶಾಶ್ವತವಾದ ಸ್ವರೂಪವನ್ನು ಅರಿತುಕೊಂಡು ಯೌಗಿಕ ಸಾಧನೆಯನ್ನು ಅರ್ಥ ಮಾಡಿಕೊಂಡು, ಅದನ್ನು ಸ್ವೀಕರಿಸಿ ಶಾಶ್ವತ ಯೌಗಿಕ ಕೃಷಿಯ ಪ್ರಯೋಗ ಮತ್ತು ಪ್ರಸಾರ ಮಾಡಬೇಕಾಗಿದೆ. ಇದರಿಂದ ನಾವು ಮತ್ತೆ ಆ ಸುವರ್ಣಯುಗಕ್ಕೆ ಪ್ರತ್ಯಕ್ಷವಾದ ರೂಪವನ್ನು ನೀಡಬಹುದು.

ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ಜೊತೆಗೆ ಅದರ ಸಹಯೋಗಿ ಸಂಸ್ಥೆಯಾದ ರಾಜಯೋಗ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆಯ ಗ್ರಾಮೀಣ ವಿಕಾಸ ವಿಭಾಗವು ಸುಮಾರು ಎರಡು ವರ್ಷಗಳಿಂದಲೂ ಭಾರತ ದೇಶದ ಕೃಷಿಕ ಸಹೋದರ ಸಹೋದರಿಯರಿಗೆ ಶಾಶ್ವತ ಯೌಗಿಕ ಬೇಸಾಯ ಎಂಬ ವಿಷಯದ ಬಗ್ಗೆ

ಜಾಗೃತಗೊಳಿಸಲಾಗುತ್ತಿದೆ. ಮಹಾರಾಷ್ಟ್ರ ಹಾಗೂ ಗುಜರಾತಿನಲ್ಲಿ ಈ ಸಂಸ್ಥೆಯಲ್ಲಿ ಅಭ್ಯಾಸ ಮಾಡುತ್ತಿರುವ ಕೆಲವು ರಾಜಯೋಗಿ ರೈತ ಸಹೋದರ ಸಹೋದರಿಯರು ತಾವು ಬೆಳೆದ ಬೆಳೆಯ ಮೇಲೆ ರಾಜಯೋಗದ ಶಕ್ತಿಯ ಪ್ರಯೋಗವನ್ನು ಮಾಡಿದ್ದಾರೆ. ಜೊತೆ ಜೊತೆಗೆ ಕೆಲವು  ಜೈವಿಕ ಗೊಬ್ಬರವನ್ನು ಹೊಸ ರೀತಿಯಲ್ಲಿ ತಯಾರಿಸಿ, ಬೆಳೆಯನ್ನು ಚೆನ್ನಾಗಿ ಬೆಳೆಸುತ್ತಿದ್ದಾರೆ. ಇದರ ಪರಿಣಾಮವಾಗಿ ಅವರು ಕಡಿಮೆ ಖರ್ಚಿನಲ್ಲಿ ಅತ್ಯುತ್ತಮವಾದ ಬೆಳೆಯನ್ನು ಬೆಳೆಯುತ್ತಿದ್ದಾರೆ. ಇದೊಂದು ಹೊಸ ಯುಗಕ್ಕಾಗಿ ಹೊಸದಾದ ಹೆಜ್ಜೆಯಾಗಿದೆ.

ಪರಮಪಿತ ಪರಮಾತ್ಮನು ಈ ಸೃಷ್ಟಿಯ – ಆದಿ – ಮಧ್ಯ – ಅಂತ್ಯವನ್ನರಿತವನು, ಜ್ಞಾನಸಾಗರ, ಸುಖ, ಶಾಂತಿದಾತನೂ ಹೌದು. ಆತನು ತನ್ನ ಮಕ್ಕಳಿಗೆ ಪುನ: ರಾಜಯೋಗವನ್ನು ಕಲಿಸಿ, ಅವರ ಮನೋವೃತ್ತಿಯಲ್ಲಿ ¥Àª ÀÄ£ÉÃÀ ÃÀßvÀðÀ£ÉC ª ÀÄ±ÀQÛ À Áz Àª ÀÄUÀÄz ÀÄ£À» ÃÁz É- *“ಮಕ್ಕಳೇ, ತಮ್ಮ ಸ್ವರೂಪವನ್ನು ಅರಿತುಕೊಳ್ಳಿರಿ, ಸ್ವಧರ್ಮದಲ್ಲಿ ಸ್ಥಿತರಾಗಿ, ಜ್ಞಾನಸೂರ್ಯ ಪಿತ ಪರಮಾತ್ಮನ ಜೊತೆ ತಮ್ಮ ಬುದ್ಧಿಯ ಸಂಬಂಧವನ್ನು ಜೋಡಿಸಿ. ಆಗ ನನ್ನ ಶಕ್ತಿಗಳು ತಮ್ಮ ವಿಚಾರಗಳನ್ನು ಶಕ್ತಿಶಾಲಿಯನ್ನಾಗಿ ಮಾಡುತ್ತವೆ. ಮತ್ತು ತಮ್ಮ ಶುದ್ಧ, ಶ್ರೇಷ್ಠ ಸಂಕಲ್ಪಗಳು ಎಲ್ಲಾ ಸಿದ್ಧಿಗಳನ್ನು ಈಡೇರಿಸುತ್ತವೆ. ಅಸಾಧ್ಯವಾದದ್ದು ಸಾಧ್ಯವಾಗಿಬಿಡುತ್ತದೆ. ಇದೇನು ಚಮತ್ಕಾರವಲ್ಲ, ಆದರೆ ಇದು ಆಧ್ಯಾತ್ಮಿಕ ಕೃಷಿ–ವಿಜ್ಞಾನವಾಗಿದೆ. ಇದು ಪರಮಾತ್ಮನ ಶಕ್ತಿ ಹಾಗೂ ಆತ್ಮ ಶಕ್ತಿಯ ಸಂಕಲ್ಪಗಳ ಸರ್ವ ಶ್ರೇಷ್ಠವಾದ ಪ್ರಯೋಗವಾಗಿದೆ. ಅವು ಶುದ್ಧ, ಶ್ರೇಷ್ಠ, ಶಕ್ತಿಶಾಲಿ ಭಾವನೆಗಳ ಪ್ರಕಂಪನದ ಮುಖಾಂತರ ಸಂಪನ್ನವಾಗುತ್ತವೆ.”*

ಆದುದರಿಂದ ಈಗ ಅನ್ನದಾತರಾದ ಕೃಷಿಕರನ್ನು ಜಾಗೃತಗೊಳಿಸುವ ಸಮಯವೇ ಇದಾಗಿದೆ. ಅವರು ತಮ್ಮ ಶ್ರೇಷ್ಠ ಸ್ವಮಾನ (ಆತ್ಮ ಗೌರವ) ಹಾಗೂ ಶಕ್ತಿಗಳನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಪ್ರಪ್ರಥಮವಾಗಿ ಕೃಷಿಕರು ರಾಜಯೋಗದ ವಿಧಿಯನ್ನು ಕಲಿತು ತಮ್ಮ ತಮ್ಮ ಜಮೀನಿನ ಸ್ವಲ್ಪ ಭಾಗವನ್ನು ಆರಿಸಿಕೊಂಡು ಯೋಗದ ಪ್ರಯೋಗವನ್ನು ಮಾಡಿ ಸಫಲತೆಯಿಂದ ಸಂಪನ್ನರಾಗಿ ಅನುಭವಿಮೂರ್ತಿಗಳಾಗಲಿ ಎಂಬ ಶುಭ ಭಾವನೆ ನಮಗಿದೆ. ಅದರಲ್ಲಿ ಇನ್ಯಾವುದೇ ಬಗೆಯ ರಾಸಾಯನಿಕ ಗೊಬ್ಬರ ಅಥವಾ ಕೀಟನಾಶಕ ವಿಷಮಯ ಔಷಧಿಗಳನ್ನು ಪ್ರಯೋಗಿಸದೇ ಮನೆಯಲ್ಲೇ ತಯಾರಿಸಿದ ಜೈವಿಕ ಗೊಬ್ಬರದ ಮುಖಾಂತರ ಬೆಳೆಯನ್ನು ಸಶಕ್ತಗೊಳಿಸಿರಿ ಮತ್ತೆ ಬೆಳೆಗೆ ಯೋಗದ ತರಂಗಗಳನ್ನು ಆತ್ಮದ ಏಳು ಗುಣಗಳನ್ನು, ಏಕಾಗ್ರತೆ ಹಾಗೂ ದೃಢತೆಯಿಂದ ಪ್ರಯೋಗಿಸಿರಿ. ತಮಗೆ ಬೇಕಾದಂತಹ ಶುದ್ಧ ಸಾತ್ವಿಕ ಆಹಾರ, ಹಣ್ಣು ಅಥವಾ ತರಕಾರಿಗಳು ಸಿಗುತ್ತವೆ. ಇದರಲ್ಲಿ ಸಫಲತೆಯನ್ನು ಪಡೆದುಕೊಂಡು ನಂತರ ತಮ್ಮ ಸಂಬಂಧ ಸಂಪರ್ಕದಲ್ಲಿ ಬರುವಂತಹ ರೈತ ಸಹೋದರ ಸಹೋದರಿಯರಿಗೂ ಪ್ರೇರಣೆಯನ್ನು ನೀಡಿರಿ. ಏಕೆಂದರೆ ಪ್ರತಿಯೊಬ್ಬರೂ ಆಧ್ಯಾತ್ಮಿಕ ಶಕ್ತಿಗಳನ್ನು ಅರಿತುಕೊಂಡಾಗ ಸಂಪೂರ್ಣ ವಿಶ್ವ ಹಾಗೂ ಭಾರತ ದೇಶವು ಧನ ಧಾನ್ಯಗಳಿಂದ ಸಂಪನ್ನವಾಗಿ ಭಾರತವು “ವಿಶ್ವ ಗುರು”ವಿನ ಪದವಿಯನ್ನು ಪಡೆದುಕೊಳ್ಳಲಿ ಹಾಗೂ ಪರಮಾತ್ಮನ ಕಾರ್ಯವು ಪ್ರತ್ಯಕ್ಷವಾಗಲಿ.

ಈ ಶುಭ ಭಾವನೆಯಿಂದ ಈ “ಶಾಶ್ವತ ಯೌಗಿಕ ಬೇಸಾಯ” ಎಂಬ ಹೆಸರಿನ ಪುಸ್ತಕವನ್ನು ತಯಾರಿಸಲಾಗಿದೆ. ರೈತ ಸಹೋದರ ಸಹೋದರಿಯರಿಗೆ ಈ ಪುಸ್ತಕದ ಮುಖಾಂತರ ಬೇಸಾಯ ಮಾಡಲು ನೂತನ ವಿಧಾನದ ಬಗ್ಗೆ ಸರಿಯಾದ ಅರಿವು ದೊರೆಯುವಂತಾಗಲಿ ಎಂದು ಆಶಿಸುತ್ತೇವೆ.

ಈ ಶುಭ ಭಾವನೆಯ ಜೊತೆಗೆ, ಈಶ್ವರೀಯ ಸೇವೆಯಲ್ಲಿ,

B.K. Raju
**(ಬಿ.ಕೆ. ರಾಜು)**
ಮುಖ್ಯಾಲಯ ಸಂಘಟಕರು,
ಗ್ರಾಮ ವಿಕಾಸ ವಿಭಾಗ,
ಅಬುಪರ್ವತ,

**(ಬಿ.ಕೆ. ಸರಳಾ)**
ರಾಷ್ಟ್ರೀಯ ಸಂಘಟಕರು,
ಗ್ರಾಮ ವಿಕಾಸ ವಿಭಾಗ
ಅಬುಪರ್ವತ

## ಈಶ್ವರನ ಪ್ರೇರಣೆಗಳು

# ವೃತ್ತಿಯ ಮುಖಾಂತರ ಪ್ರಕೃತಿಯನ್ನು ಪರಿವರ್ತಿಸಿರಿ

1. ಯಾವುದೇ ಕಾರ್ಯದಲ್ಲಿ ಸಫಲರಾಗಲು ಎಲ್ಲದಕ್ಕಿಂತ ಸಹಜವಾದ ಸಾಧನೆ – ವೃತ್ತಿಯ ಮೂಲಕ ತರಂಗಗಳನ್ನು ಹರಿಸುವುದು ಮತ್ತು ತರಂಗಗಳ ಮೂಲಕ ವಾತಾವರಣವನ್ನು ನಿರ್ಮಿಸುವುದು. ಉದಾ:– ವಿಜ್ಞಾನದ ರಾಕೆಟ್ ವೇಗವಾಗಿ ಹೋಗುತ್ತದೆ. ಹಾಗೆಯೇ ತಮ್ಮ ಆಧ್ಯಾತ್ಮಿಕ ಶುಭ ಭಾವನೆ, ಶುಭ ಕಾಮನೆಯ ವೃತ್ತಿಯು ದೃಷ್ಟಿ ಮತ್ತು ಸೃಷ್ಟಿಯನ್ನು ಪರಿವರ್ತಿಸುತ್ತದೆ. ಒಂದು ಸ್ಥಾನದಲ್ಲಿ ಕುಳಿತಿದ್ದರೂ ಕೂಡ ವೃತ್ತಿಯ ಮುಖಾಂತರ ಸೇವೆಯನ್ನು ಮಾಡಬಹುದು.
2. ತಮ್ಮ ಮನಸ್ಸಿನಲ್ಲಿ ಯಾವುದೇ ಅಶುದ್ಧ ವೃತ್ತಿಯ ತರಂಗಗಳು ಇರುವುದಿಲ್ಲವೆಂದಾಗ ತಮ್ಮ ವೃತ್ತಿಯು ಆತ್ಮೀಯ ಮತ್ತು ಶಕ್ತಿಶಾಲಿಯಾಗಿರುತ್ತದೆ. ತಮ್ಮ ಮನಸ್ಸಿನ ವೃತ್ತಿಯನ್ನು ಸದಾಕಾಲಕ್ಕೆ ಸ್ವಚ್ಛವಾಗಿಟ್ಟುಕೊಳ್ಳಿ. ವ್ಯರ್ಥ ಅಥವಾ ಅಶುದ್ಧ ವೃತ್ತಿಯನ್ನು ಮೊದಲು ಸಕಾರಾತ್ಮಕವಾಗಿ ಮಾಡಿಕೊಳ್ಳಿ. ಮನಸ್ಸಿನಲ್ಲಿ ಯಾವುದೇ ಗೊಂದಲವಿರಬಾರದು. ಆಗ ಮಾತ್ರ ಶುಭ ವೃತ್ತಿಯಿಂದ ಸೇವೆಯನ್ನು ಸಲ್ಲಿಸಬಹುದು.
3. ನಿಮಿತ್ತ ಆತ್ಮರುಗಳು ಒಂದು ಸೆಕೆಂಡ್‌ನಲ್ಲಿ ವ್ಯರ್ಥವನ್ನು ನಾಶ ಮಾಡಿ ಸಮರ್ಥತೆಯ ಪ್ರಭಾವವನ್ನು ವಾತಾವರಣದಲ್ಲಿ ಹರಡಿದ್ದಾದರೆ ಮನಸ್ಸಿನ ಮೂಲಕ ಮಾಡುವ ಸೇವೆಗೆ ಉತ್ತರವು ಪ್ರತ್ಯಕ್ಷವಾಗಿ ಗೋಚರವಾಗುತ್ತದೆ. ಕೇವಲ ವಿಸ್ತಾರವನ್ನು ಸಾರ ರೂಪಕ್ಕೆ ಪರಿವರ್ತಿಸಿಕೊಂಡು ಮನಸ್ಸಿನ ಶಕ್ತಿಗಳನ್ನು ಹೆಚ್ಚಿಸಿಕೊಳ್ಳಿ ಮತ್ತು ಅವುಗಳನ್ನು ಪ್ರಯೋಗ ಮಾಡಿರಿ.
4. ಪ್ರತಿನಿತ್ಯ ದಿನದಲ್ಲಿ ಬೇರೆ ಬೇರೆ ಸಮಯದಲ್ಲಿ ಮನಸ್ಸಿನ ವ್ಯಾಯಾಮವನ್ನು 5 – 5 ನಿಮಿಷಗಳ ಕಾಲಮಾಡಿರಿ. ಈಗೀಗ ಸಾಕಾರಿ, ಈಗೀಗ ಆಕಾರಿ ಮತ್ತು ನಿರಾಕಾರಿ. ಇದರಿಂದ ಮನಸ್ಸು ಶಕ್ತಿಶಾಲಿಯಾಗುತ್ತದೆ ಮತ್ತು ಶಕ್ತಿಶಾಲಿಯಾದ ಮನಸ್ಸಿನ ಮೂಲಕ ಯಾವಾಗ ಮತ್ತು ಹೇಗೆ ಬೇಕೋ ಹಾಗೆ ತಮ್ಮ ಪ್ರಭಾವವನ್ನು ಹರಿಸಬಹುದು.
5. ಈಗ ಸಮಯಕ್ಕನುಸಾರವಾಗಿ ವೃತ್ತಿಯಿಂದ ವಾತಾವರಣವನ್ನು ನಿರ್ಮಿಸುವಂತಹ ತೀವ್ರ ಪುರುಷಾರ್ಥದ (ಸಾಧನೆಯ) ಅಗತ್ಯವಿದೆ. ವೃತ್ತಿ ಮತ್ತು ತರಂಗಗಳಿಂದ ವಾತಾವರಣವಾಗುತ್ತದೆ ಮತ್ತು ವಾತಾವರಣವು ಪರಿವರ್ತಿಸುತ್ತದೆ. ಆದರೆ ವೃತ್ತಿಯನ್ನು ಸದಾಕಾಲಕ್ಕೆ ಶುಭವಾಗಿಟ್ಟುಕೊಳ್ಳಿ. ಯಾವುದೇ ವ್ಯರ್ಥವಾದ ಮಾತು ತಮ್ಮ ಕಿವಿಗೆ ಬಿದ್ದರೂ ಕೂಡಾ ಅದನ್ನು ಮತ್ತೊಂದು ಕಿವಿಯಿಂದ ಬಿಟ್ಟುಬಿಡಬೇಕು. ಆಗ ಮಾತ್ರ ವೃತ್ತಿಯಿಂದ ವಾತಾವರಣವನ್ನು ನಿರ್ಮಿಸುವಂತಹ ಸೇವೆಯನ್ನು ಬಹು ವೇಗವಾಗಿ ಮಾಡಲು ಸಾಧ್ಯವಾಗುತ್ತದೆ.
6. ವಿಶ್ವಪರಿವರ್ತನೆ ಅಥವಾ ಪ್ರಕೃತಿಯನ್ನು ಪರಿವರ್ತಿಸಬೇಕೆಂದಿದ್ದರೆ, ಆಶಿರ್ವಾದ (ಶುಭ ಚಿಂತನೆ) ಎಂಬ ಪದವನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಕೇವಲ ಆಶೀರ್ವಾದ ಕೊಡಿ ಮತ್ತು ಆಶಿರ್ವಾದ ಪಡೆಯಿರಿ.
7. ತಾವು ಪ್ರತಿಯೊಬ್ಬ ಮಾ॥ ಸರ್ವಶಕ್ತಿವಾನರ ಸಂಕಲ್ಪದಲ್ಲಿ ಎಷ್ಟೊಂದು ಶಕ್ತಿ ಇದೆ ಅಂದರೆ ಏನನ್ನು ಬೇಕಾದರೂ ಮಾಡಬಹುದು. ಆದರೆ ಕೇವಲ ದೃಡತೆ ಎಂಬ ಬೀಗದ ಕೈಯನ್ನು ಸಕಾಲದಲ್ಲಿ ಸದಾಕಾಲ ಬಳಸುತ್ತಿರಿ.
8. ಶಾಂತಿಯ ಶಕ್ತಿಯಿಂದ ಕಠಿಣವಾದಂತಹ ಭೂಮಿಯನ್ನು ಪರಿವರ್ತಿಸಬಹುದು. ಸಂಕಲ್ಪವೇ ಸೃಷ್ಠಿಸುತ್ತದೆ. ಆದುದರಿಂದ ಶುಭ ಭಾವನೆಯ ಸಂಕಲ್ಪದಿಂದ ತಮ್ಮ ಏರುವ ಕಲೆಯ ತರಂಗಗಳಿಂದ ಭೂಮಿಯನ್ನು ಪರಿವರ್ತನೆ ಮಾಡುತ್ತಾ ನಡೆಯಿರಿ. ಈ ಶಾಂತಿಯ ಶಕ್ತಿಯು ಸದಾಕಾಲಕ್ಕೆ ತಮ್ಮ ಕೊರಳಿಗೆ ಸಫಲತೆಯ ಮಾಲೆಯನ್ನು ತೊಡಿಸುತ್ತದೆ.
9. ಶಾಂತಿಯ ಶಕ್ತಿಶಾಲಿ ಶುಭ ಭಾವನೆಯ ಪ್ರತ್ಯಕ್ಷವಾದ ಪ್ರಮಾಣವನ್ನು ಮುಂದೆ ಹೋದಂತೆ ಅನುಭವ ಮಾಡುತ್ತಾ ಹೋಗುವಿರಿ. ಕೇವಲ ಇದಕ್ಕಾಗಿ ಏಕಾಗ್ರತೆ ಅಂದರೆ ಆತ್ಮೀಯತೆಯಲ್ಲಿರುವ ಹಾಗೂ ಅಂತರಮುಖಿಗಳಾಗಿರುವ ವ್ರತ ಮಾಡಿರಿ. ಆಗ ನೀವು ಆತ್ಮಗಳು ಜ್ಞಾನ ಸೂರ್ಯನ ಚಮತ್ಕಾರವನ್ನು ತೋರಿಸುವಿರಿ.

10. ಪವಿತ್ರತೆಯಿಂದ ನಾವು ಪ್ರಕೃತಿಯನ್ನು ಪಾವನ ಮಾಡುತ್ತೇವೆಂದು ಪ್ರತಿಜ್ಞೆಯನ್ನು ಮಾಡಿರುವಿರಿ. ಅದಕ್ಕಾಗಿ ಇಡೀ ಜಗತ್ತಿನಲ್ಲಿ (ಸಾಧನೆಗಳಿಂದಾಗಲಿ, ವ್ಯಕ್ತಿಯಿಂದಾಗಲಿ) ಪ್ರತಿಯೊಂದು ಮಗುವು ಸೆಳೆತಗಳಿಂದ ಮುಕ್ತವಾಗಲಿ ಎಂಬುದೇ ತಂದೆಯ ಇಚ್ಛೆಯಾಗಿದೆ.
11. ಯಾವಾಗ ವಾಣಿಯ ಜೊತೆ ಜೊತೆಗೆ ವೃತ್ತಿಯ ಮುಖಾಂತರ ಸೇವೆ ಮಾಡುವಿರೋ ಆಗ ಈ ಡಬಲ್ ಸೇವೆಯಿಂದ ಶಕ್ತಿಶಾಲಿಯಾದ ವಾತಾವರಣವು ನಿರ್ಮಾಣವಾಗುವುದು ಮತ್ತು ಪ್ರಕೃತಿಯು ದಾಸಿಯಾಗುತ್ತಾ ಹೋಗುವುದು. ಆಗ ಅದು ಗೊಂದಲಕ್ಕೆ ಬದಲಾಗಿ ದಾಸಿಯಾಗಿ ಸೇವೆಯನ್ನು ಸಲ್ಲಿಸುತ್ತದೆ.
12. ದಿವ್ಯ ಬುದ್ಧಿಯು ಎಂತಹ ಶ್ರೇಷ್ಠವಾದ ಯಂತ್ರ ಅಂದರೆ ಈ ಯಂತ್ರದಿಂದ ವ್ಯಕ್ತಿಯನ್ನಷ್ಟೇ ಅಲ್ಲ ಪ್ರಕೃತಿಯನ್ನೂ ದಿವ್ಯಗೊಳಿಸಬಹುದು. ವ್ಯಕ್ತಿಯಲ್ಲಿ ದಿವ್ಯತೆ ಬಂದರೆ ಅದು ಪ್ರಕೃತಿಯನ್ನು ತಾನಾಗಿಯೇ ಪ್ರಭಾವಿಸುತ್ತದೆ. ದಿವ್ಯ ಬುದ್ಧಿಯು ಸದಾ ಜಾಗೃತವಾಗಿದ್ದಾದರೆ ಪ್ರಕೃತಿಯನ್ನೂ ಪರಿವರ್ತಿಸಬಹುದು – ಇದು ಪರಮಾತ್ಮನ ವರದಾನವಾಗಿದೆ.
13. ತಾವು ಬ್ರಾಹ್ಮಣ ಆತ್ಮರು ಪುರುಷೋತ್ತಮ ಆತ್ಮಗಳಾಗಿರುವಿರಿ. ಪ್ರಕೃತಿಯು ಪುರುಷೋತ್ತಮ ಆತ್ಮಗಳ ದಾಸಿಯಾಗಿದೆ. ಈಗ ತಾವು ಕೇವಲ ಆತ್ಮಗಳನ್ನು ಮಾತ್ರ ಪರಿವರ್ತಿಸುವುದಲ್ಲ. ಎಷ್ಟೆಷ್ಟು ತಾವು ಶಕ್ತಿಶಾಲಿ ಸತೋ ಪ್ರಧಾನ ವೃತ್ತಿಯವರಾಗುತ್ತೀರೋ ಅಷ್ಟೇ ಪ್ರಕೃತಿ ಮತ್ತು ಮನುಷ್ಯಾತ್ಮರ ವೃತ್ತಿಗಳೆರಡರ ಬದಲಾವಣೆಯಾಗುತ್ತದೆ. ಮನುಷ್ಯಾತ್ಮರನ್ನು ವೃತ್ತಿಯಿಂದ ಬದಲಾಯಿಸಬೇಕು ಮತ್ತು ಪ್ರಕೃತಿಯನ್ನು ತರಂಗಗಳ ಮುಖಾಂತರ ಪರಿವರ್ತಿಸಬೇಕಾಗಿದೆ. ಆದ್ದರಿಂದ ಪರಿವರ್ತನೆ ಮಾಡುವವರ ವೃತ್ತಿಯು ಸದಾಕಾಲ ಶಕ್ತಿಶಾಲಿಯಾಗಿರಬೇಕು, ಸಾಧಾರಣವಾಗಿರಬಾರದು.
14. ತಮ್ಮ ಪವಿತ್ರ ದೃಷ್ಟಿಯಿಂದ ವಿಶ್ವದ ಆತ್ಮಗಳು ಮತ್ತು ಪ್ರಕೃತಿ ಎರಡೂ ಪವಿತ್ರವಾಗುತ್ತವೆ. ತಮ್ಮ ದೃಷ್ಟಿಯಿಂದ ಸೃಷ್ಟಿಯು ಬದಲಾಗುತ್ತದೆ. ತಮ್ಮ ಶ್ರೇಷ್ಠ ಕರ್ಮಗಳಿಂದ ಶ್ರೇಷ್ಠಾಚಾರಿ ಜಗತ್ತು ತಯಾರಾಗುತ್ತದೆ.
15. ತಾವು ಮಕ್ಕಳು ನೆನಪಿನ (ಯೋಗ) ಬಲದಿಂದ ವಿಶ್ವವನ್ನು ಪರಿವರ್ತಿಸುತ್ತಿರುವಿರಿ. ನೆನಪು ಅಂದರೆ ಶಾಂತಿಯ ಶಕ್ತಿ. ಇದರಿಂದ ವ್ಯಕ್ತಿಯು ಬದಲಾಗುತ್ತಾನೆ. ಪ್ರಕೃತಿಯು ಬದಲಾಗುತ್ತದೆ. ಆದ್ದರಿಂದ ವ್ಯಕ್ತಿಗಳನ್ನು ಪರಿವರ್ತಿಸಬೇಕು. ಜೊತೆ ಜೊತೆಗೆ ಪ್ರಕೃತಿಯನ್ನೂ ಕೂಡ ಪರಿವರ್ತಿಸಬೇಕು. ಪ್ರಕೃತಿಗೆ ಬಾಯಿಂದ ಜ್ಞಾನವನ್ನು ತಿಳಿಸಲಾಗುವುದಿಲ್ಲ. ಮನುಷ್ಯರಿಗೆ ಜ್ಞಾನದ ವಿಚಾರಗಳನ್ನು ತಿಳಿಸುವಿರಿ ಆದರೆ ಪ್ರಕೃತಿಯನ್ನು ಯೋಗ ಬಲದಿಂದಲೇ ಬದಲಾಯಿಸಬೇಕಾಗಿದೆ.
16. ತಮ್ಮ ಅಂತರಂಗದಲ್ಲಿ ಕೇವಲ ಒಂದೇ ಸಂಕಲ್ಪವಿರಲಿ – ತಂದೆ (ಭಗವಂತ) ಮತ್ತು ತಾವು ಮಕ್ಕಳು ಈ ಸಂಭಂದವನ್ನೇ ಯೋಗವೆನ್ನುತ್ತಾರೆ. ಯಾವಾಗ ಶಕ್ತಿಶಾಲಿ ಯೋಗದಲ್ಲಿ ಕುಳಿತುಕೊಳ್ಳುವಿರೋ ಆಗ ಎಲ್ಲಾ ಸಂಕಲ್ಪಗಳು ಶಾಂತವಾಗುತ್ತವೆ. ಭಗವಂತನ ಮಿಲನದ ಅನುಭೂತಿಯಿಂದ ಉಳಿದೆಲ್ಲಾ ಸಂಕಲ್ಪಗಳು ಮಾಯವಾಗುತ್ತವೆ. ಸಂಕಲ್ಪಗಳನ್ನು ವಿಸ್ತಾರ ಮಾಡಬಾರದು. ನಿಲ್ಲಿಸು ಎಂದು ಹೇಳುತ್ತಿದ್ದಂತೆ ನಿಲ್ಲಿಸಿಬಿಡಬೇಕು. ಪೂರ್ಣವಾಗಿ ನಿಯಂತ್ರಿಸುವಂತಿರಬೇಕು. ಈಗ ಅಂತಹ ನಿಯಂತ್ರಣ ಶಕ್ತಿಯ ಅಗತ್ಯವಿದೆ.
17. ತಮ್ಮ ಭಾವನೆಯ ಫಲವು ವಿಶ್ವದ ಆತ್ಮಗಳನ್ನು ಪರಿವರ್ತಿಸುತ್ತದೆ ಮತ್ತು ಮುಂದೆ ಹೋದಂತೆ ಪ್ರಕೃತಿಯೂ ಪರಿವರ್ತನೆಯಾಗುತ್ತದೆ. ತಾವು ಆತ್ಮಗಳ ಶ್ರೇಷ್ಠ ಭಾವನೆಯು ಶ್ರೇಷ್ಠವಾದ ಫಲವನ್ನು ಪ್ರಾಪ್ತಿ ಮಾಡಿಸುತ್ತದೆ.
18. ತಾವು ತಮ್ಮ ಶುಭ ಬಾವನೆಯ ಮಹತ್ವವನ್ನು ತಿಳಿದುಕೊಂಡಿರುವಿರಿ. ತಮ್ಮ ಶುಭ ಭಾವನೆಗಳನ್ನು ಸಾಧಾರಣ ರೀತಿಯಲ್ಲಿ ಕಾರ್ಯದಲ್ಲಿ ತರುತ್ತಿರುವಿರೋ ಅಥವಾ ಅದರ ಮಹತ್ವವನ್ನು ಅರಿತುಕೊಂಡು ಮುನ್ನಡೆಯುತ್ತಿರುವಿರೋ? ಜಗತ್ತಿನವರೂ ಕೂಡ ಶುಭಭಾವನೆ ಎಂಬ ಪದವನ್ನು ಬಳಸುತ್ತಾರೆ. ಆದರೆ ತಮ್ಮ ಶುಭ ಭಾವನೆ ಕೇವಲ ಶುಭ

ಅಷ್ಟೇ ಅಲ್ಲ. ಶಕ್ತಿಶಾಲಿಯೂ ಆಗಿದೆ. ಏಕೆಂದರೆ ತಾವು ಸಂಗಮಯುಗಿ ಶ್ರೇಷ್ಠ ಆತ್ಮಗಳಾಗಿರುವಿರಿ. ಈ ಸಂಗಮಯುಗಕ್ಕೆ ಸೃಷ್ಟಿ ನಾಟಕದ ಅನುಸಾರವಾಗಿ ಪ್ರತ್ಯಕ್ಷ ಫಲವು ಪ್ರಾಪ್ತಿಯಾಗುವ ವರದಾನವು ಸಿಕ್ಕಿದೆ. ಕೇವಲ ಇದರ ಮಹತ್ವವನ್ನು ಅರ್ಥ ಮಾಡಿಕೊಂಡು ಇದನ್ನು ಬಳಸಿರಿ.

19. ಉದಾ – ವಿಜ್ಞಾನದ ಸಾಧನೆಗಳು ದೂರದಲ್ಲಿರುವ ಆತ್ಮಗಳನ್ನು ಹತ್ತಿರದಲ್ಲಿರುವಂತೆ ಅನುಭವ ಮಾಡಿಸಲು ನಿಮಿತ್ತವಾಗಿವೆ. ತಮ್ಮ ಮಾತು ಅವರಿಗೆ ಕೇಳುತ್ತದೆ. ಸಂದೇಶವೂ ತಲುಪುತ್ತದೆ. ದೃಶ್ಯವು ಕಾಣಿಸುತ್ತದೆ. ತಮ್ಮ ವಿಜ್ಞಾನದ ಶಕ್ತಿಯು ಸ್ವಲ್ಪ ಕಾಲಕ್ಕಾಗಿ ಹತ್ತಿರದ ಅನುಭವ ಮಾಡಿಸುತ್ತದೆ ಎಂದಾದರೆ ತಮ್ಮ ಶಾಂತಿಯ ಶಕ್ತಿಶಾಲಿ ಶುಭ ಭಾವನೆಗಳು ದೂರದಲ್ಲಿ ಕುಳಿತಿರುವವರಿಗೆ ಹತ್ತಿರದ ಅನುಭವ ಮಾಡಿಸುವುದಿಲ್ಲವೆ? ಅದಕ್ಕಾಗಿ ಕೇವಲ ಶಾಂತಿಯ ಶಕ್ತಿಯನ್ನು ಜಮಾ ಮಾಡಿಕೊಳ್ಳಿ.

20. ಶುಭ ಭಾವನೆ ಅಂದರೆ ಶಕ್ತಿಶಾಲಿ ಸಂಕಲ್ಪ, ಎಲ್ಲಾ ಶಕ್ತಿಗಳಿಗಿಂತ ಸಂಕಲ್ಪದ ಶಕ್ತಿಯ ವೇಗವು ತೀಕ್ಷ್ಣವಾಗಿದೆ. ವಿಜ್ಞಾನವು ಎಷ್ಟೊಂದು ತೀವ್ರಗತಿಯ ಸಾಧನೆಗಳನ್ನು ತಯಾರಿಸಿರುವುದೋ ಅದಕ್ಕಿಂತಲೂ ತೀವ್ರವಾಗಿರುವುದು ಸಂಕಲ್ಪ. ನೀವು ಮಾ॥ ವಿಶ್ವಕಲ್ಯಾಣಕಾರಿ ಆತ್ಮಗಳಗೆ ಈ ಸೂಕ್ಷ್ಮವಾದ ಮನಸಾ ಸೇವೆಯು ಪ್ರತ್ಯಕ್ಷ ಫಲದ ಅನುಭವ ಮಾಡಿಸುತ್ತದೆ. ಇದರಿಂದ ಕಡಿಮೆ ಸಮಯ, ಕಡಿಮೆ ಸಾಧನೆ ಮತ್ತು ಕಡಿಮೆ ಹಣವು ಬೇಕಾಗುತ್ತದೆ. ಅದಕ್ಕಾಗಿ ಕೇವಲ ಮನಸ್ಸು ಮತ್ತು ಬುದ್ಧಿಯನ್ನು ಸದಾ ಕಾಲಕ್ಕೆ ಸ್ವತಂತ್ರವಾಗಿಟ್ಟುಕೊಳ್ಳಿರಿ. "ಏಕಾಂತ ಮತ್ತು ಏಕಾಗ್ರತೆಯ" ಕಡೆಗೆ ವಿಶೇಷವಾದ ಗಮನವಿರಲಿ.

21. ಏಕಾಂತ ಪ್ರಿಯರಾದ ಆತ್ಮಗಳು ಎಷ್ಟು ಶಕ್ತಿಶಾಲಿಯಾಗಿರುತ್ತಾರೆ ಅಂದರೆ – ಮನಸ್ಸು ಮತ್ತು ಬುದ್ಧಿಯನ್ನು ಎಷ್ಟು ಸಮಯ ಬೇಕೋ ಎಲ್ಲಿ ಬೇಕೋ ಅಲ್ಲಿ ಏಕಾಗ್ರಗೊಳಿಸಿ ಪವಾಡದಂತಹ ಕಾರ್ಯವನ್ನು ಮಾಡಬಹುದು. ತಾವು ಪ್ರಕೃತಿಯ ಮಾಲೀಕರೂ ಆಗಿರುವಿರಿ. ತಮ್ಮ ಪರಿವರ್ತನೆಯಿಂದ ಪ್ರಕೃತಿಯು ಪರಿವರ್ತನೆಯಾಗುತ್ತದೆ. ಈಗ ಸತೋಪ್ರಧಾನರಾಗುತ್ತಿರುವಿರಿ. ಆದ್ದರಿಂದ ಪ್ರಕೃತಿಯು ತಮೋದಿಂದ ಸತೋಪ್ರಧಾನವಾಗುತ್ತಿದೆ. ಈ ನಶೆ ಮತ್ತು ಶುಭ ಭಾವನೆಯ ಸಂಕಲ್ಪದ ಮುಖಾಂತರ ಯೋಗದ ಪ್ರಯೋಗವನ್ನು ಮಾಡಿ.

22. ಶುಭ ಭಾವನೆ ಅರ್ಥಾತ್ ಶಕ್ತಿಶಾಲಿ ಸಂಕಲ್ಪ. ಎಲ್ಲ ಶಕ್ತಿಗಳಿಗಿಂತ ಸಂಕಲ್ಪದ ಗತಿ ತೀವ್ರವಾಗಿರುತ್ತದೆ. ವಿಜ್ಞಾನ ಎಷ್ಟೇ ತೀವ್ರಗತಿಯ ಸಾದನಗಳನ್ನು ತಯಾರಿಸಿದ್ದರೂ ಅವೆಲ್ಲವುಗಳಿಂದ ಸಂಕಲ್ಪದ ಗತಿಯೇ ತೀವ್ರವಾಗಿರುತ್ತದೆ. ಆದ್ದರಿಂದ ತಾವು ಮಾಸ್ಟರ ವಿಶ್ವ ಕಲ್ಯಾಣಕಾರಿ ಆತ್ಮಗಳ ಈ ಸೂಕ್ಷ್ಮವಾದ ಮನಸಾ ಸೇವೆ ಪ್ರತ್ಯಕ್ಷ ರೂಪದಲ್ಲಿ ಅನುಭವ ಮಾಡಿಸುತ್ತದೆ. ಇದರಿಂದ ಸಮಯ ಮತ್ತು ಸಾಧನಗಳು ಕಡಿಮೆ ಹತ್ತುತ್ತವೆ. ವೆಚ್ಚವೂ ಕಡಿಮೆ. ಇದಕ್ಕಾಗಿ ಕೇವಲ ಮನ ಮತ್ತು ಬುದ್ಧಿ ಸದಾ ಮುಕ್ತವಾಗಿರಬೇಕು. ಏಕಾಂತ ಮತ್ತು ಏಕಾಗ್ರತೆಯ ಬಗ್ಗೆ ವಿಶೇಷ ಗಮನಹರಿಸಬೇಕು.

23. ಏಕಾಂತ ಪ್ರೀಯ ಆತ್ಮ ಹೀಗೆ ಶಕ್ತಿಶಾಲಿ ಆಗುತ್ತದೆ ತನ್ನ ಸೂಕ್ಷ್ಮ ಶಕ್ತಿಗಳನ್ನು ಮನ ಬುದ್ಧಿಯನ್ನು ಯಾವ ಸಮಯ ಬೇಕೋ ಆ ಸಮಯಕ್ಕೆ ಎಲ್ಲಿ ಬೇಕೋ ಅಲ್ಲಿ ಏಕಾಗ್ರಮಾಡಿ ಅಸಾಧ್ಯವಾದುದನ್ನು ಸಾಧ್ಯ ಮಾಡಿ ತೋರಿಸಬಹುದು. ತಾವು ಪ್ರಕೃತಿಯ ಮಾಲಿಕರಾಗಿದ್ದೀರಿ, ತಮ್ಮ ಪರಿವರ್ತನೆಯಿಂದ ಪ್ರಕೃತಿಯ ಪರಿವರ್ತನೆಯಾಗಬೇಕು. ಈ ಸಮಯದಲ್ಲಿ ತಾವು ಸತೋಪ್ರಧಾನರಾಗುತ್ತಿದ್ದೀರಿ.ಅದರಿಂದ ಪ್ರಕೃತಿಯೂ ಸಹ ತಮೋದಿಂದ ಸತೋದಲ್ಲಿ ಪರಿವರ್ತನೆ ಆಗುತ್ತಲಿದೆ. ಇದೇ ನಶೆ ಮತ್ತು ಶುಭಭಾವನೆಯ ಸಂಕಲ್ಪದ ಮೂಲಕ ಯೋಗದ ಪ್ರಯೋಗ ಮಾಡಿ.

---

# ಶಾಶ್ವತ ಯೌಗಿಕ ಬೇಸಾಯ ಯೋಜನೆಯ ಅವಶ್ಯಕತೆ

ಜಗತ್ತಿನಲ್ಲಿ ಪ್ರತಿಯೊಬ್ಬ ಮಾನವನು ನನ್ನ ಜೀವನವು ಸಾತ್ವಿಕವಾಗಲಿ, ನಾನು ಒಳ್ಳೆಯ ಕಾರ್ಯವನ್ನು ಮಾಡುವಂತಾಗಲಿ, ಜೀವನವು ಶ್ರೇಷ್ಠವಾಗಲಿ ಮತ್ತು ನನ್ನ ಜೀವನದಲ್ಲಿ ಶಾಂತಿ ಇರಲಿ ಎಂದು ಆಶಿಸುತ್ತಾನೆ. ಆದರೆ ಆಸೆ ಇಡುವುದು ಒಂದು ಮಾತು ಮತ್ತು ಆ ಆಸೆಯನ್ನು ಸಾಕಾರಗೊಳಿಸುವ ಸಲುವಾಗಿ ಸಾಧನೆ ಮಾಡುವುದು ಮತ್ತೊಂದು ಮಾತು. ಆದರೆ ಜನರು ಯೋಚಿಸುವುದೇ ಒಂದಾದರೆ, ಕೊನೆಗೆ ಮಾಡುವುದು ಮತ್ತೊಂದು ಆಗಿರುತ್ತದೆನ್ನುವುದನ್ನು ನೋಡಿದ್ದೇವೆ. ಶಾಂತಿ ಬೇಕೆನ್ನುತ್ತಾರೆ, ಆದರೆ ಪರಿಸ್ಥಿತಿಗೆ ವಶರಾಗಿ, ಸಂಸ್ಕಾರಕ್ಕೆ ವಶರಾಗಿ ಅಂತಹ ಕರ್ಮವನ್ನು ಮಾಡಿಬಿಡುತ್ತಾರೆ ಇದರಿಂದ ತಮ್ಮ ಹಾಗೂ ಅನ್ಯರ ಜೀವನದಲ್ಲಿ ಅಶಾಂತಿಯು ಪಸರಿಸುತ್ತದೆ. ಸ್ನೇಹ ಹಾಗೂ ಪ್ರೀತಿ ಬೇಕೆಂದು ಇಚ್ಛಿಸುತ್ತಾರೆ. ಆದರೆ ಕೊನೆಗೆ ಹೇಗೆ ವರ್ತಿಸುತ್ತಾರೆಂದರೆ ಅದರಿಂದ ಸಂಶಯ, ದ್ವೇಷ, ಜಗಳ ಮತ್ತು ತಿರಸ್ಕಾರವನ್ನು ಹೆಚ್ಚಿಸಿಕೊಂಡು ಬಿಡುತ್ತಾರೆ. ಆರೋಗ್ಯವು ಚೆನ್ನಾಗಿರಲಿ ಎಂದು ಆಶಿಸುತ್ತಾರೆ. ಆದರೆ ಸಾತ್ವಿಕ ಆಹಾರದ ಕೊರತೆಯಿಂದ ದೇಹದಲ್ಲಿ ಆರೋಗ್ಯಕ್ಕೆ ಹಾನಿಕರವಾದ, ರೋಗವನ್ನು ಉತ್ಪಾದಿಸುವಂತಹ ಹಾಗೂ ಉತ್ತೇಜನಕಾರಿ ವಿಷಮಯ ತತ್ವಗಳು ಒಟ್ಟುಗೂಡುತ್ತವೆ. ಅವು ದೈಹಿಕ ಆರೋಗ್ಯವನ್ನು ಹಾಳುಮಾಡಿಬಿಡುತ್ತವೆ. ನಿರ್ಣಯಶಕ್ತಿಯನ್ನು ನಾಶ ಮಾಡುತ್ತವೆ. ಮಾನಸಿಕ ಉದ್ವೇಗಕ್ಕೊಳಗಾಗಿ ಅಸಮತೋಲನೆ, ಮರ್ಯಾದೆ ಹೀನತೆ ಅಥವಾ ಲಕ್ಷ್ಯವಿಹೀನರಾಗಿ ಬಿಡುತ್ತಾರೆ. ಆದುದರಿಂದ ಮನುಷ್ಯನ ಆಹಾರದ ಪ್ರಭಾವವು ಅವನ ಆಚಾರ, ವಿಚಾರ ಮತ್ತು ವ್ಯವಹಾರದ ಜೊತೆ ಗಂಭೀರವಾದ ಸಂಬಂಧವನ್ನಿರಿಸಿಕೊಂಡಿದೆ.

ಪ್ರಾಚೀನ ಕಾಲದಿಂದಲೂ ಅನ್ನದ ಪ್ರಭಾವವು ಮನಸ್ಸಿನ ಮೇಲೆ ಬೀಳುತ್ತದೆ ಮತ್ತು ಮನಸ್ಸಿನ ಆರೋಗ್ಯ ಮತ್ತು ರೋಗಗಳ ಜೊತೆ ಗಂಭೀರವಾದ ಸಂಬಂಧವಿದೆ ಎಂದು ಹೇಳಿಕೊಂಡು ಬಂದಿದ್ದಾರೆ. ಅನ್ನದಂತೆ ಮನಸ್ಸು ಮತ್ತು ಮನಸ್ಸಿನಂತೆ ತನು ಎಂದು ಹೇಳುತ್ತಾರೆ. ಆದುದರಿಂದ ಒತ್ತಡದಿಂದ ಮುಕ್ತರಾಗಲು, ವ್ಯಸನಮುಕ್ತರಾಗಲು, ಚಾರಿತ್ರ್ಯವಂತರಾಗಿ ಜೀವನವನ್ನು ನಡೆಸಲು ಆಹಾರದ ಜೊತೆ ನಮ್ಮ ಸಂಬಂಧವು ಅವರ್ಣನೀಯವಾಗಿದೆ. ಎಲ್ಲಾ ಮನುಷ್ಯರಿಗೂ ನಾವು ಶಾಂತ, ಶೀತಲ ಮತ್ತು ಸಾತ್ವಿಕ ವೃತ್ತಿಯನ್ನು ಅಳವಡಿಸಿಕೊಂಡು ಸುಖಮಯ ಹಾಗೂ ಆನಂದಮಯವಾದ ಜೀವನವನ್ನು ನಡೆಸಬೇಕು ಎಂಬ ಗುರಿ ಇದೆ. ಆದರೆ ಆ ಗುರಿಯನ್ನು ಮುಟ್ಟಬೇಕೆಂದರೆ ಮನಸ್ಸಿನ ನಿಯಂತ್ರಣವು ಅತೀ ಅಗತ್ಯ. ಮನಸ್ಸಿನ ನಿಯಂತ್ರಣಕ್ಕಾಗಿ ನಾವು ಆಹಾರದ ಪಥ್ಯದೆಡೆಗೆ ಗಮನವನ್ನು ಹರಿಸಬೇಕಾದದ್ದು ತುಂಬಾ ಅಗತ್ಯವಾಗಿದೆ.

ಧಾನ್ಯದ ಉತ್ಪಾದನೆಯನ್ನು ಯಾವ ವಿಧಾನದಿಂದ ಮಾಡಬೇಕು ಎನ್ನುವುದರ ಬಗ್ಗೆ ವಿಚಾರ ಮಾಡುವುದು ತುಂಬಾ ಅಗತ್ಯ. ವಿಶ್ವದಾದ್ಯಂತ ವ್ಯವಸಾಯದಲ್ಲಿ ಧಾನ್ಯ, ಫಲವನ್ನು ಬೆಳೆಯಲು ಅನೇಕ ಬಗೆಯ ವಿಧಾನಗಳನ್ನು ಮಾಡಬಹುದು. ಉದಾಹರಣೆಗೆ –

**1) ನೈಸರ್ಗಿಕ ಕೃಷಿ ಪದ್ಧತಿ :–**

ಇದರಲ್ಲಿ ಜಮೀನನ್ನು ಸಾಗುವಳಿ ಮಾಡುವಂತಿಲ್ಲ, ನೇಗಿಲನ್ನು ಬಳಸುವಂತಿಲ್ಲ, ಯಾವುದೇ ಬಗೆಯ ಗೊಬ್ಬರವನ್ನು ಹೊರಗಿನಿಂದ ತಂದು ಸುರಿಯುವಂತಿಲ್ಲ, ಕಳೆಯನ್ನು ತೆಗೆಯಲು ಕುಡುಗೋಲನ್ನು ಮತ್ತು ಔಷಧಿಗಳನ್ನು ಬಳಸುವಂತಿಲ್ಲ. ಬೆಳೆಯಿಂದ ಧಾನ್ಯವನ್ನು ತೆಗೆದುಕೊಂಡ ನಂತರ ಯಾವ ಅನಾವಶ್ಯಕವಾದ ಭಾಗವು ಉಳಿಯುತ್ತದೋ ಅದನ್ನು ಭೂಮಿಯ ಮೇಲೆ ಹಾಗೆಯೇ ಹರಡುತ್ತಾರೆ ಮತ್ತು ದ್ವಿದಳ ಧಾನ್ಯ (ಹೆಸರು, ಉದ್ದು, ಕಡಲೆ, ಸೋಯಾಬಿನ್ ಇತ್ಯಾದಿ)ಗಳನ್ನು ಬೆಳೆಯುತ್ತಾರೆ.

**2) ಸಾವಯವ (ಸೈಂದ್ರೀಯ) ಕೃಷಿ ಪದ್ಧತಿ :–**

ಜಮೀನಿನ ಪೌಷ್ಠಿಕತೆ ಹಾಗೂ ಉತ್ಪಾದನೆಯ ಕ್ಷಮತೆಯನ್ನು ಹೆಚ್ಚಿಸಲು ಕಡಿಮೆ ಸಮಯದಲ್ಲಿ

ಕೊಳೆಯುವಂತಹ (ಕಾಂಪೋಸ್ಟ್‌ನಿಂದಾಗುವ) ಯಾವ ಪದಾರ್ಥಗಳಿರುವವೋ ಅವುಗಳನ್ನು ಭೂಮಿಗೆ ಸೇರಿಸಲಾಗುತ್ತದೆ ಅಥವಾ ಮೇಲ್ಭಾಗದಲ್ಲಿ ಹರಡುತ್ತಾರೆ. ನಂತರ ನೇಗಿಲಿನಿಂದ ಉಳುಮೆ ಮಾಡಿ ಭೂಮಿಗೆ ಸೇರಿಸಿಬಿಡುತ್ತಾರೆ. ಕಾಂಪೋಸ್ಟ್ ಗೊಬ್ಬರ, ಎರೆಗೊಬ್ಬರ, ಹಸಿರುಗೊಬ್ಬರ, ಸೈಂದ್ರಿಯ ಗೊಬ್ಬರ ಇತ್ಯಾದಿಗಳನ್ನು ಬಳಸುತ್ತಾರೆ. ಕೆಲವು ಮರಗಳನ್ನು ನೆಡುವುದೂ ಅಗತ್ಯ. ಪ್ರಕೃತಿಯ ನಿಯಮಕ್ಕನುಸಾರವಾಗಿಯೇ ಬೆಳೆಯನ್ನು ಪಡೆದುಕೊಳ್ಳುತ್ತಾರೆ. ಜೈವಿಕ ಕೀಟನಾಶಕಗಳನ್ನೂ ಬಳಸುತ್ತಾರೆ.

3) **ಜೈವಿಕ ಕೃಷಿ ಪದ್ಧತಿ :–**

ಸೈಂದ್ರಿಯ ಕೃಷಿ ಪದ್ಧತಿ ಮತ್ತು ಜೈವಿಕ ಕೃಷಿ ಪದ್ಧತಿಯಲ್ಲಿ ಹೆಚ್ಚು ವ್ಯತ್ಯಾಸವಿಲ್ಲ. ಭೂಮಿಯಲ್ಲಿ ಅನೇಕ ಬಗೆಯ ಜೀವಾಣುಗಳಿರುತ್ತವೆ. ಅವುಗಳಲ್ಲಿ ಕೆಲವನ್ನು ಸಂವರ್ಧಕದ ಮುಖಾಂತರ ತಯಾರು ಮಾಡಲಾಗುತ್ತದೆ. ಉದಾ – ನೈಟ್ರೋಜನ್‌ನ್ನು ಕ್ಷಾರಗೊಳಿಸುವಂತಹ ಜೀವಾಣುಗಳು, ಸ್ಫುರದನ್ನು ಉತ್ಪಾದಿಸುವಂತಹ ಜೀವಾಣುಗಳು, ಸೈಂದ್ರಿಯ ಪದಾರ್ಥವನ್ನು ಬಿಡಿಸುವಂತಹ ಜೀವಾಣುಗಳು,ಫಘುಂದಿ(ವಿಷ)ರೋಧಕ ಜೀವಾಣುಗಳು ಇತ್ಯಾದಿ ಬೆಳೆಗೆ ಯಾವಾಗ ಯಾವ ಜೀವಾಣುಗಳ ಅಗತ್ಯವಿರುವುದೋ ಆ ಜೀವಾಣುಗಳನ್ನು ಭೂಮಿಗೆ ಸೇರಿಸಲಾಗುತ್ತದೆ.

4) **ರಾಸಾಯನಿಕ ಕೃಷಿ ಪದ್ಧತಿ :–**

ಈ ಕೃಷಿ ವಿಧಾನದಲ್ಲಿ ಜಮೀನಿಗೆ ರಾಸಾಯನಿಕ ಗೊಬ್ಬರನ್ನು ಬಳಸಲಾಗುತ್ತದೆ. ಔಷಧಿಗಳನ್ನು ಸಿಂಪಡಿಸಿ ಹುಲ್ಲು–ಗರಿಕೆಗಳನ್ನು ನಾಶಗೊಳಿಸುತ್ತಾರೆ. ವಿಷಕಾರಕ ಔಷಧಿಗಳನ್ನು ಬಳಸಿ ಕ್ರಿಮಿಕೀಟಗಳನ್ನು ಹಾಗೂ ರೋಗಗಳನ್ನು ನಿಯಂತ್ರಿಸುತ್ತಾರೆ. ಇದರಿಂದ ಪ್ರಕೃತಿಯ ನಿಯಮಕ್ಕೆ ಧಕ್ಕೆ ಬರುತ್ತದೆ.

5) **ಶಾಶ್ವತ ಯೌಗಿಕ ಕೃಷಿ ಪದ್ಧತಿ :–**

ಯೋಗದ ಮೂಲಕ ಪರಮಾತ್ಮ ಶಕ್ತಿ ಹಾಗೂ ಶ್ರೇಷ್ಠ ಸಂಕಲ್ಪಗಳ ಪ್ರಕಂಪನಗಳ ಮೂಲಕ ನೈಸರ್ಗಿಕ ಸಾಧನ–ಸಂಪತ್ತುಗಳ ಗುಣಾತ್ಮಕತೆಯನ್ನು ವೃದ್ಧಿಗೊಳಿಸುತ್ತಾ, ಉತ್ಪಾದನೆಯ ಕ್ಷಮತೆಯನ್ನು ಹೆಚ್ಚಿಸಲಾಗುತ್ತದೆ. ಈ ರೀತಿಯ ಕೃಷಿಯನ್ನು ಮಾಡುವುದರಿಂದ ಕಡಿಮೆ ಖರ್ಚು ಮತ್ತು ಶ್ರಮವು ಕಡಿಮೆಯಾಗುತ್ತದೆ. ಪ್ರಕೃತಿಯು ಸುಖಕರವಾಗಿರುತ್ತದೆ. ವಾತಾವರಣವು ಶುದ್ಧವಾಗುತ್ತದೆ. ಧಾನ್ಯವೂ ಕೂಡಾ ಸಾತ್ವಿಕವಾಗಿರುತ್ತದೆ. ಹೆಚ್ಚು ಪೌಷ್ಠಿಕವಾಗಿರುತ್ತದೆ.

## ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕ ಔಷಧಿಗಳ ಬಳಕೆಯಿಂದ ಬರುವ ರೋಗಗಳು

ಇಂದು ಸಂಪೂರ್ಣ ವಿಶ್ವದಲ್ಲಿ ಧಾನ್ಯದ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಹೆಚ್ಚುಹೆಚ್ಚಾಗಿ ಬಳಸುತ್ತಿದ್ದಾರೆ. ಇದರಿಂದ ಅನೇಕ ಬಗೆಯ ದುಷ್ಪರಿಣಾಮಗಳು ಗೋಚರಿಸುತ್ತಿವೆ. ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಹೆಚ್ಚು ಬಳಸುತ್ತಿರುವುದರಿಂದ ಪರ್ಯಾವರಣದ ಸಮತೋಲನೆಯು ಹಾಳಾಗುತ್ತಿದೆ. ಪ್ರದೂಷಣೆ ಹೆಚ್ಚಾಗುತ್ತಿದೆ. ಬೆಳೆಯಲ್ಲಿ ರೋಗನಿರೋಧಕ ಶಕ್ತಿಯು ಕಡಿಮೆಯಾಗುತ್ತಿದೆ. ಧಾನ್ಯಗಳ ಪೌಷ್ಠಿಕತೆಯ ಕೊರತೆ ಮತ್ತು ವಿಷಮಯ ತತ್ವಗಳು ದೇಹಕ್ಕೆ ಸೇರಿಕೊಳ್ಳುತ್ತಿರುವುದರಿಂದ ದೇಹದಲ್ಲಿ ರೋಗನಿರೋಧಕ ಶಕ್ತಿಯು ಕಡಿಮೆಯಾಗುತ್ತಿದೆ ಮತ್ತು ಅನೇಕ ರೋಗಗಳು ಹೆಚ್ಚಾಗುತ್ತಿವೆ.

ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ಔಷಧಿಗಳ ಬಳಕೆಯಿಂದ ಎಲೆಗಳಲ್ಲಿ ಕೋಶಗಳ ರಚನೆ ಹಾಳಾಗಿ ಹೋಗಿದೆ. ಗಿಡಗಳಲ್ಲಿರುವ ಶಕ್ತಿಯ ವೇಗವು ಕಡಿಮೆಯಾದ್ದರಿಂದ ಅಂದರೆ ದಕ್ಷತೆಯು ಕುಗ್ಗುತ್ತದೆ, ಇದರಿಂದ ಅನೇಕ ರೋಗಗಳು ಹೆಚ್ಚಾಗುತ್ತಿವೆ. ಹೀಗೆ ವನಸ್ಪತಿಗಳ ಮೇಲೇ ಜೀವನವನ್ನು ನಡೆಸುತ್ತಿರುವ

ಪ್ರಾಣಿಗಳಿಗೆ ಹಾಗೂ ಮಾನವನಿಗೆ ಅಸಾಧ್ಯವಾದ ರೋಗಗಳು ಹರಡುತ್ತಿವೆ. ಭೂಮಿಯಲ್ಲಿ ಹೊಸ ಬಗೆಯ ಕಳೆಗಳು ಹುಟ್ಟಿಕೊಳ್ಳುತ್ತಿವೆ. ಇವೆಲ್ಲವುಗಳ ಕಾರಣದಿಂದ ಧಾನ್ಯಗಳ ಉತ್ಪಾದನೆಯು ನಿರೀಕ್ಷೆಗಿಂತ ಕಡಿಮೆಯಾಗುತ್ತಿದೆ. ಇದರ ಫಲವಾಗಿ ರೈತರಿಗೆ ದುಃಖ, ಅಶಾಂತಿ, ಒತ್ತಡವು ಹೆಚ್ಚಾಗುತ್ತಿದೆ ಮತ್ತು ಮಾನಸಿಕ ಸಮತೋಲನೆಯು ಹಾಳಾಗುತ್ತಿದೆ. ಇದರಿಂದ ಅನೇಕ ಬಗೆಯ ದೈಹಿಕ ಹಾಗೂ ಮಾನಸಿಕ ರೋಗಗಳು ಹೆಚ್ಚಾಗುತ್ತಿವೆ. ಕೆಲವೊಮ್ಮೆ ರೈತರು ಆತ್ಮಹತ್ಯೆಯ ಮಾರ್ಗವನ್ನು ಹಿಡಿಯುತ್ತಾರೆ.

ಈ ಕ್ಷೇತ್ರದ ಸಂಶೋಧಕರು ಮತ್ತು ಸಂಶೋಧನೆಯಿಂದ ಭಾರತವಾಸಿಗಳಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಹೊಟ್ಟೆಯಲ್ಲಿ ಸುಮಾರು ಒಂದು ಮಿಲಿಗ್ರಾಂ ಡಿ.ಡಿ.ಟಿ., ಬಿ.ಹೆಚ್.ಸಿ.ನಂತಹ ಕೀಟನಾಶಕ ಔಷಧಿಗಳ ಅಂಶವು ಸೇರಿಕೊಂಡಿದೆ ಎಂಬ ಭಯಾನಕವಾದ ಫಲಿತಾಂಶವು ಹೊರಬಂದಿದೆ. ಇದರ ಫಲವಾಗಿ ಮೆದುಳು, ಕಿಡ್ನಿಯಂತಹ ಸೂಕ್ಷ್ಮ ಅವಯವಗಳಲ್ಲಿ ಭಯಾನಕವಾದ ರೋಗಗಳು ಹೆಚ್ಚುತ್ತಿವೆ. ಕ್ಯಾನ್ಸರ್‌ನಂತಹ ರೋಗವು ಹೆಚ್ಚಾಗುತ್ತಿದೆ.

ವಿಜ್ಞಾನಿಗಳಾದ ಡಾ। ಪ್ರಕಾಶಚಂದ್ರರು – ಇಂತಹ ರೋಗಗಳು ಭಾರತದಲ್ಲಿ ಲಕ್ಷಾಂತರ ಜನಗಳಲ್ಲಿ ಹೆಚ್ಚಾಗುತ್ತಿದೆ ಎಂದು ಸ್ಪಷ್ಟಗೊಳಿಸಿದ್ದಾರೆ. ಅಂತರರಾಷ್ಟ್ರೀಯ ಸಂಸ್ಥೆಗಳು ಕೂಡ ಇಂತಹ ಅಪಾಯಗಳ ಬಗ್ಗೆ ಮೊದಲೇ ಎಚ್ಚರಿಕೆಯನ್ನು ನೀಡುತ್ತಾ ಬಂದಿವೆ.

ಲಕ್ನೋ (ಉ.ಪ್ರ.) ದಲ್ಲಿರುವ ಕಿಂಗ್‌ಜಾರ್ಜ್ ಮೆಡಿಕಲ್ ಕಾಲೇಜು ಮತ್ತು ಟಾಕ್ಸಿಕಾಲೋಜಿ ರಿಸರ್ಚ ಸೆಂಟರ್‌ನ ಮೂಲಕ ಡಿ.ಡಿ.ಟಿ. ಮತ್ತು ಮೆಲಾಥಿಯಾನ್‌ನಂತಹ ವಿಷಮಯ ಕೀಟನಾಶಕ ಔಷಧಿಗಳನ್ನು ಸಿಂಪಡಿಸುವಂತಹ ವ್ಯಕ್ತಿಗಳನ್ನು ಪರೀಕ್ಷಿಸಿದಾಗ ಅವರಲ್ಲಿ ಶೇ. 50 ಭಾಗಕ್ಕಿಂತಲೂ ಹೆಚ್ಚಾಗಿ ಜನಗಳಲ್ಲಿ ತಲೆನೋವು, ಚಿಂತೆ, ಅನಿದ್ರೆ, ನಿರಾಶೆ, ಮರೆವು, ದೃಷ್ಟಿದೋಷ ಇತ್ಯಾದಿ ರೋಗಗಳ ಪ್ರಮಾಣವು ಹೆಚ್ಚಾಗಿರುವುದು ಗೋಚರಿಸಿದೆ.

ಹೈದರಾಬಾದ್‌ನಲ್ಲಿರುವ ಆಸ್ಪತ್ರೆಯಲ್ಲಿ ಪ್ರಸೂತಿ ವಾರ್ಡ್‌ನಿಂದ ಸಿಕ್ಕಿರುವ ಮಾಹಿತಿ ಪ್ರಕಾರ ಅಕಾಲಪ್ರಸೂತಿ ಮತ್ತು ಗರ್ಭದಲ್ಲೇ ಮೃತಪಟ್ಟ ಭ್ರೂಣಕ್ಕೆ ಸಂಬಂಧಿಸಿದಂತಹ ರೋಗಗಳನ್ನು ಪರೀಕ್ಷಿಸಿದಾಗ ವಿಷಕಾರಿಯಾದ ಕೀಟನಾಶಕವೇ ಕಾರಣ ಎಂದು ಗೊತ್ತಾಗಿದೆ. ಅಂತಹ ಮಹಿಳೆಯರ ರಕ್ತದಲ್ಲಿ ಡಿ.ಡಿ.ಟಿ. ಮತ್ತು ಬಿ.ಹೆಚ್.ಸಿ.ಯ ಪ್ರಮಾಣವು ಹೆಚ್ಚಾಗಿ ಗೋಚರಿಸಿದೆ.

ಸನ್ 1977 ರಲ್ಲಿ ಕರ್ನಾಟಕದ ಮಲೆನಾಡಿನ ಒಂದು ಹಳ್ಳಿಯಲ್ಲಿ ನಡೆದ ಘಟನೆಯು 'ಹಂಡೀಗೋಡೂ ಸಿಂಡ್ರೋಮ' ಎಂಬ ಹೆಸರಿನಲ್ಲಿ ಪ್ರಖ್ಯಾತವಾಗಿದೆ. ಅಲ್ಲಿ ಭತ್ತದ ಗದ್ದೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕ್ರಿಮಿನಾಶಕಗಳನ್ನು ಬಳಸಲಾಗಿತ್ತು. ಇದರಿಂದ ಸ್ವಲ್ಪಭಾಗವು ನೀರಿನಲ್ಲಿ ಹರಿದು ಕೆಳಭಾಗದ ಜಮೀನಿಗೆ ಹೋಗಿತ್ತು. ಅಲ್ಲಿ ನೀರು ನಿಂತಿತ್ತು. ಅದರ ತುಂಬಾ ಏಡಿಗಳು ಇದ್ದವು. ಅಲ್ಲಿ ಕೆಲಸ ಮಾಡುತ್ತಿದ್ದ ಕೆಲವು ಕೂಲಿಕಾರರು ಏಡಿಗಳನ್ನು ಹಿಡಿದುಕೊಂಡು ತಿಂದಿದ್ದರು. ಇದರಿಂದ ಸುಮಾರು 200 ಜನರಿಗೆ ಲಕ್ವಾ (ಪಾರ್ಶ್ವವಾಯು) ಹೊಡೆದಿತ್ತು. ತನಿಖೆ ನಡೆಸಿದ ನಂತರ ಆ ಏಡಿಗಳ ಶರೀರದಲ್ಲಿ ಭತ್ತದ ಗದ್ದೆಗೆಂದು ಬಳಸಿದ್ದ ಕ್ರಿಮಿನಾಶಕಗಳ ಅಂಶವು ಗೋಚರಿಸಿತು. ಇದರಿಂದ ಎಲ್ಲಾ ಜನರು ಒಮ್ಮೆಲೆ ಲಕ್ವಾ ಪೀಡಿತ ರೋಗಿಗಳಾಗಿದ್ದರು.

ಮೈಸೂರು ಜಿಲ್ಲೆ, ಹುಣಸೂರು ಪಟ್ಟಣದಲ್ಲಿ (25–01–10) ಹರ್ಷರೆಡ್ಡಿ (18) ಎಂಬ ಯುವಕನು "ಲ್ಯಾನೆಟ್ "ಕ್ರಿಮಿನಾಶಕವನ್ನು ಅವರೆ ಗಿಡಕ್ಕೆ ಸಿಂಪಡಿಸುತ್ತಿದ್ದಾಗ, ಅದರ ಘಾಟು ವಾಸನೆಗೆ ಮೂರ್ಛಿತನಾಗಿ ಕೆಲವೇ ನಿಮಿಷಗಳಲ್ಲಿ ಅಸುನೀಗಿದನು. ಆದರೆ ಆ ಕ್ರಿಮಿನಾಶಕದ ಬಗ್ಗೆ ರೈತರಿಗೆ ಯಾವುದೇ ಮಾಹಿತಿ ದೊರೆತಿರಲಿಲ್ಲ.

'ಅಮೆರಿಗೊ ಮಾಸ್ಕಾ' ಎಂಬ ಇಟಲಿ ದೇಶದ ರಸಾಯನ ವಿಜ್ಞಾನಿಯ ಪ್ರಕಾರ ಜಮೀನಿನಲ್ಲಿ ಬಳಸಲ್ಪಡುವ ಕೀಟನಾಶಕ, ಜಂತುನಾಶಕ ಔಷಧಿಗಳು ಎಷ್ಟು ಭಯಂಕರವಾಗಿವೆ ಅಂದರೆ ಜೀನ್ಸ್‌ನಲ್ಲಿ ಬದಲಾವಣೆಯನ್ನು ತರುವಂತಹ ಅಣು–ವಿಸ್ಫೋಟಕಗಳಿಂದ ನಿರ್ಮಾಣಗೊಂಡಿರುವ ರೇಡಿಯೋ ಆಕ್ಟೀವನ ಮೂಲದ್ರವ್ಯದಂತಿದೆ. ಝೆಲಿಬ, ಫಲ್ತಾನ, ಕಪ್ತಾನನಂತಹ ಫಫುಂದಿ (ವಿಷ) ನಾಶಕ ಔಷಧಿಗಳ ಬಳಕೆಯಿಂದ ಪ್ರತಿವರ್ಷವು ಎಷ್ಟೊಂದು ನಷ್ಟವಾಗುತ್ತಿದೆ ಅಂದರೆ 14 ಮೈಗ್ನೆಟ್‌ನ 19 ಹೈಡ್ರೋಜನ್ ಬಾಂಬುಗಳು ಬೀಳುವುದರಿಂದಾಗುವ ನಷ್ಟಕ್ಕೆ ಸಮಾನವಾಗಿವೆ. ಇದರ ಫಲವಾಗಿ ಅಮೇರಿಕಾದಲ್ಲಿ ಶೇಕಡಾ 15 ರಷ್ಟು ಮಕ್ಕಳು ಮಾನಸಿಕವಾಗಿ ವಿಕಲಾಂಗರಾಗಿ ಜನ್ಮ ಪಡೆಯುತ್ತಿದ್ದಾರೆ. ಇಷ್ಟೇ ಅಲ್ಲದೆ ವನಸ್ಪತಿ, ಪ್ರಾಣಿ ಮತ್ತು ಜಮೀನಿನಲ್ಲಿ ರೋಗಗಳು ಮತ್ತು ಪ್ರದೂಷಣ ಅಳತೆ ಮಾಡಲಾಗದಷ್ಟು ಭಯಂಕರವಾಗಿವೆ.

ಕ್ಲೋರಿನೆಟೆಡ್; ಹೈಡ್ರೋಕಾರ್ಬನ್; ಡಿ.ಡಿ.ಟಿ.; ಪಿ.ಸಿ.ಬಿ. ಗಳಿಂದ ಅಮೇರಿಕಾದ ಯುವಜನರಲ್ಲಿ ನಪುಂಸಕತ್ವದ ಪ್ರಮಾಣವು ವೃದ್ಧಿಯಾಗುತ್ತಿದೆ. ಜೊತೆಗೆ ಹೈಬ್ಲಡ್‌ಪ್ರೆಷರ್, ಹೃದಯಾಘಾತ, ಕ್ಯಾನ್ಸರ್ ಮತ್ತು ಏಡ್ಸ್ ರೋಗಗಳಿಗೆ ಮೂಲಾಧಾರವೂ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ತಪ್ಪು ಬಳಕೆಯಾಗಿದೆ.

## ಕರ್ಮದ ರಹಸ್ಯ

ಜಮೀನಿನಲ್ಲಿ ಧಾನ್ಯಗಳ ಉತ್ಪಾದನೆಯನ್ನು ಹೆಚ್ಚಿಸಲು ಮಾನವರು ಲೋಭಕ್ಕೊಳಗಾಗಿ ರಾಸಾಯನಿಕ ಗೊಬ್ಬರಗಳನ್ನು ಬಳಸುತ್ತಿದ್ದಾರೆ ಮತ್ತು ಕೀಟಗಳು ಬಂದಾಗ ಸಿಟ್ಟಿನಿಂದ ಕೆಟ್ಟ ವಿಚಾರಗಳಿಂದ ಕೀಟನಾಶಕಗಳನ್ನು ಸಿಂಪಡಿಸುತ್ತಾರೆ. ಯಾವಾಗ ಯಾವುದಾದರೂ ಕೀಟಗಳು ಬೆಳೆಯ ಮೇಲೆ ಕಾಣಿಸಿಕೊಂಡಿದ್ದಾದರೆ ಮೊದಲು ಮನಸ್ಸಿನಲ್ಲಿ "ಏನೇ ಆದರೂ ಸರಿ, ಇವುಗಳನ್ನು ಸಾಯಿಸಬೇಕು, ಇಲ್ಲವೆಂದರೆ ತುಂಬಾ ನಷ್ಟವಾಗುತ್ತದೆ ಎಂದು ಯೋಚಿಸುತ್ತಾರೆ. ಹೀಗೆ ಯೋಚಿಸುತ್ತಾ ಔಷಧಿಗಳನ್ನು ಸಿಂಪಡಿಸಿದಾಗ ಅದರಿಂದ ಬೆಳೆ ಮತ್ತು ಧಾನ್ಯಗಳ ಮೇಲೆ ಕೆಟ್ಟ ಪ್ರಭಾವವು ಬೀಳುತ್ತದೆ ಮತ್ತು ಅಂತಹ ಆಹಾರವನ್ನು ಸೇವಿಸುವುದರಿಂದ ಮನುಷ್ಯರಲ್ಲೂ ಕೂಡ ಅಂತಹ ಕೆಟ್ಟ ವಿಚಾರಗಳೇ ಬರುತ್ತವೆ. ಏನಾದರೂ ಸ್ವಲ್ಪ ಏರುಪೇರಾದರೂ ಕೂಡಲೇ ಸಿಟ್ಟಿಗೇಳುತ್ತಾರೆ ಮತ್ತು ಜಗಳ–ಹೊಡೆದಾಡುತ್ತಾರೆ.

ರಾಸಾಯನಿಕ ಗೊಬ್ಬರಗಳ ತಪ್ಪು ಬಳಕೆಯಿಂದ ಜಮೀನಿನಲ್ಲಿ ಅನೇಕ ಬಗೆಯ ಜೀವಾಣುಗಳು ನಾಶವಾಗುತ್ತವೆ. ಇದರಿಂದ ಪ್ರಕೃತಿಗೆ ದು:ಖವಾಗುತ್ತದೆ. ಪ್ರಕೃತಿಯ ನಿಯಮಗಳಿಗೆ ಅಡ್ಡಿಯಾಗುತ್ತದೆ ಮತ್ತು ಕೀಟನಾಶಕಗಳನ್ನು ಸಿಂಪಡಿಸುವುದರಿಂದ ಕೀಟಗಳು ಒದ್ದಾಡಿ ಒದ್ದಾಡಿ ಸಾಯುತ್ತವೆ. ಈ ರೀತಿ ಕೀಟಗಳಿಗೆ ವಿಷವನ್ನು ಕುಡಿಸಿ ಸಾಯಿಸುವುದು ಕೂಡಾ ಪಾಪ ಕರ್ಮವಾಗುತ್ತದೆ. ವಾಸ್ತವಿಕವಾಗಿ ಯಾವುದೇ ಬಗೆಯ ಕೀಟಗಳನ್ನು ಸಾಯಿಸುವುದು ನಾವು ಮನುಷ್ಯಾತ್ಮರುಗಳ ಕೆಲಸವಲ್ಲ. ಆದರೆ ಆ ಕೀಟಗಳನ್ನು ನಾಶಮಾಡುವ ಜವಾಬ್ದಾರಿ ಪ್ರಕೃತಿಗೆ ಸೇರಿದೆ. ಅದಕ್ಕಾಗಿ ಪ್ರಕೃತಿಯು ಪ್ರತ್ಯೇಕವಾದ ವ್ಯವಸ್ಥೆಯನ್ನು ಮಾಡಿಟ್ಟಿದೆ. ಅಂದರೆ ಬೇರೆ ಬಗೆಯ ಕೀಟಗಳಿವೆ. ಅವುಗಳಿಂದ ಜೀವನವನ್ನು ನಡೆಸುತ್ತವೆ. (ಅಂದರೆ ಬೇರೆ ಬಗೆಯ ಕೀಟಗಳು ಅವುಗಳನ್ನು ತಿಂದು ಜೀವನವನ್ನು ನಡೆಸುತ್ತವೆ.)

ಕರ್ಮದ ರಹಸ್ಯದ ಬಗ್ಗೆ ವಿಚಾರ ಮಾಡಿದ್ದಾದರೆ ಯಾವಾಗ ನಮ್ಮ ಜೀವನದಲ್ಲಿ ಯಾವುದೇ ಬಗೆಯ ಸಮಸ್ಯೆಗಳು ಅಥವಾ ಪರಿಸ್ಥಿತಿಗಳು ಬರುತ್ತವೋ ಅವುಗಳ ಹಿಂದೆ ಒಂದು ಕಾರಣವಿದೆ ಮತ್ತು ಆ ಕಾರಣಗಳು ನಾವೇ ಮಾಡಿದ ಕೆಟ್ಟ ಕರ್ಮದ ಫಲವಾಗಿದೆ ಎಂದು ಗೊತ್ತಾಗುತ್ತದೆ. ಹಾಗೇನಾದರೂ ಯಾವುದಾದರೂ ಒಂದು ರೋಗ ಬಂತೆಂದರೆ ಇದು ಕೂಡ ಒಂದು ಕೊಡ–ಕೊಳ್ಳುವ ಲೆಕ್ಕಾಚಾರವಾಗಿದೆ. ಅಂದರೆ ಪ್ರಕೃತಿಯ

ನಿಯಮಗಳಿಗೆ ನಾವು ಅಡ್ಡಿಪಡಿಸಿದ್ದೇವೆ. ಪ್ರಕೃತಿಗೆ ದು:ಖವನ್ನು ಕೊಟ್ಟಿದ್ದೇವೆ.

ಮಹಾಭಾರತದಲ್ಲಿ ಒಂದು ದೃಷ್ಟಾಂತವಿದೆ – ಭೀಷ್ಮ ಪಿತಾಮಹರು ಗಾಯಗೊಂಡು ಶರಶಯ್ಯೆಯಲ್ಲಿ ಮಲಗಿದ್ದರು. ಅವರು ಶ್ರೀಕೃಷ್ಣನನ್ನು ಕುರಿತು – ನಾನು ಶರಶಯ್ಯೆಯ ಮೇಲೆ ಮಲಗಿಕೊಂಡು ಪ್ರಾಣವನ್ನು ತ್ಯಜಿಸುವಂತಹ ಯಾವ ಪಾಪಕರ್ಮವನ್ನು ಮಾಡಿದ್ದೇನೆಂದು ಕೇಳಿದರು. ಆಗ ಶ್ರೀಕೃಷ್ಣನು ಭೀಷ್ಮರಿಗೆ ಉತ್ತರಿಸಿದನು – ಒಮ್ಮೆ ಭೀಷ್ಮರು ರಥದಲ್ಲಿ ಕುಳಿತು ಪ್ರಯಾಣಿಸುತ್ತಿದ್ದರು. ಆಗ ಅವರೆದುರು ಒಂದು ಹಾವು ಬಂತು. ಅದು ರಥದ ಕೆಳಕ್ಕೆ ಬಂದು ಸಾವನ್ನಪ್ಪುತ್ತಿತ್ತು. ಆ ಹಾವನ್ನು ರಕ್ಷಿಸುವ ಸಲುವಾಗಿ ಭೀಷ್ಮರು ಹಾವನ್ನು ಎತ್ತಿ ಪಕ್ಕಕ್ಕೆ ಎಸೆದು ಹೊರಟು ಹೋದರು. ಆಗ ಆ ಹಾವು ಮುಳ್ಳಿನ ಪೊದೆಯ ಮೇಲೆ ಬಿದ್ದಿತು. ಇದರಿಂದ ಹಾವು ಆಕಡೆ ಈಕಡೆ ಅಲುಗಾಡಲಾಗದೇ ಒದ್ದಾಡಿ ಕೊನೆಗೆ ಸತ್ತೇ ಹೋಯಿತು. ಇದರ ಫಲವಾಗಿ ಭೀಷ್ಮರೂ ಕೂಡ ಅಂತಿಮ ಸಮಯದಲ್ಲಿ ಈ ರೀತಿ ದೇಹವನ್ನು ತ್ಯಜಿಸಬೇಕಾಗಿ ಬಂತು.

ಈ ದೃಷ್ಟಾಂತವನ್ನು ನೋಡಿದಾಗ ಕರ್ಮದ ರಹಸ್ಯವು ಸ್ಪಷ್ಟ ಪಡಿಸುವುದೇನೆಂದರೆ ಇಂದು ಅನೇಕ ಜನರು, ನಾವು ಒಳ್ಳೆಯ ಕರ್ಮವನ್ನೇ ಮಾಡಿದ್ದೇವೆ, ಇಷ್ಟೊಂದು ಸಂಪಾದಿಸಿದ್ದೇವೆ, ಈವರೆಗೆ ಯಾವುದೇ ಕೆಟ್ಟ ಕರ್ಮವನ್ನು ಮಾಡಿಲ್ಲ, ಯಾರಿಗೂ ದು:ಖವನ್ನು ಕೊಟ್ಟಿಲ್ಲವೆಂದು ಹೇಳುತ್ತಾರೆ. ಆದರೆ ಅಂತಹ ವ್ಯಕ್ತಿಗಳಿಗೂ ಜೀವನದಲ್ಲಿ ದು:ಖ, ಅಶಾಂತಿ, ಒತ್ತಡವನ್ನು ಅನುಭವಿಸುವಂತಹ ಪರಿಸ್ಥಿತಿಗಳು ಬರುತ್ತವೆ. ಇದಕ್ಕೆ ಕಾರಣ ಅವರು ಅಂತಹ ಕರ್ಮವನ್ನು ಮಾಡಿದ್ದಾರೆ, ಅದಕ್ಕೆ ಅಂತಹುದೇ ಫಲವು ಸಿಕ್ಕಿದೆ ಎಂದು ಗೊತ್ತಾಗುತ್ತದೆ. ಯಾವುದೇ ರೋಗ ಅಥವಾ ಸಮಸ್ಯೆಯಾಗಿರಬಹುದು ಅದಕ್ಕೆ ಬೇರೆಯವರನ್ನು ದೋಷಿಗಳೆಂದು ತೋರಿಸುವಂತಹ ಅಗತ್ಯವು ಬರುವುದಿಲ್ಲ.

ಆದುದರಿಂದ ಇಂದು ನಾವು ಯಾವ ಕರ್ಮವನ್ನು ಮಾಡುತ್ತೇವೋ ಅದು ಪ್ರಕೃತಿಯ ಜೊತೆ ಎಲ್ಲರೂ ಗೊತ್ತಿದ್ದೋ–ಗೊತ್ತಿಲ್ಲದೆಯೋ ಯಾರಿಗೂ ದು:ಖವನ್ನು ಕೊಡಬಾರದು ಎಂಬ ಮಾತಿನ ಬಗ್ಗೆ ಗಮನ ಹರಿಸುವುದು ತುಂಬಾ ಅಗತ್ಯ. ಪ್ರಕೃತಿಯ ನಿಯಮಕ್ಕೆ ತೊಂದರೆ ಕೊಡುವುದು ಮಾನವನಿಗೆ ಅಧಿಕಾರವಿಲ್ಲ. ಆದರೂ ಕೂಡ ಹಾಗೇನಾದರೂ ಮಾಡಿದ್ದಾದರೆ ಅದಕ್ಕೆ ತಕ್ಕ ಪ್ರತಿಫಲವನ್ನು ಅನುಭವಿಸಲೇ ಬೇಕಾಗುತ್ತದೆ.

ಇನ್ನೂ ಗಂಭೀರವಾಗಿ ಯೋಚಿಸುವ ಮತ್ತೊಂದು ಮಾತಿದೆ. ಭೀಷ್ಮ ಪಿತಾಮಹರು ಗಾಯಗೊಂಡು ಶರಶಯ್ಯೆಯ ಮೇಲೆ ಮಲಗಿದ್ದರು. ಆಗ ಅರ್ಜುನನು ಅವರಿಂದ ಉಪದೇಶ ಪಡೆಯಲು ಅವರ ಬಳಿಗೆ ಹೋದನು. ಆಗ ಭೀಷ್ಮರು ತುಂಬಾ ಉತ್ತಮವಾದ ಶಿಕ್ಷಣವನ್ನು ನೀಡಿದರು.

ಆಗ ಅರ್ಜುನನು – ತಾತಾ, ತಾವು ದ್ರೌಪದಿಯ ವಸ್ತ್ರಾಪಹರಣವಾಗುತ್ತಿದ್ದಾಗ ಸುಮ್ಮನೆ ಏಕೆ ಕುಳಿತಿದ್ದಿರಿ? ಎಂದು ಪ್ರಶ್ನಿಸುತ್ತಾನೆ. ಆಗ ಭೀಷ್ಮರು – ನೋಡು ಅರ್ಜುನ, ನಾನು ಆಗ ಕೌರವರ ಅನ್ನವನ್ನು ತಿಂದಿದ್ದೆನು. ಅದೇ ರಕ್ತವು ನನ್ನ ನರನಾಡಿಗಳಲ್ಲಿ ಹರಿದಾಡುತ್ತಿತ್ತು. ಈಗ ನೀನು ಬಾಣಗಳನ್ನು ಹೊಡೆದದ್ದರಿಂದ ರಕ್ತವು ಹರಿದು ಹೊರಕ್ಕೆ ಬಂತು. ಈಗ ಅಶುದ್ಧ ಅನ್ನದ ಪ್ರಭಾವವು ನಾಶವಾಗಿದೆ ಎಂದು ಹೇಳಿದರು.

ಈ ದೃಷ್ಟಾಂತವನ್ನು ಗಮನಿಸಿದಾಗ ಒಂದು ಮಾತು ಗೊತ್ತಾಗುತ್ತದೆ. ಇಂದು ಸಮಾಜದಲ್ಲಿ ನಮ್ಮ ಮುಂದೆಯೇ ಅನೇಕ ಬಗೆಯ ತಪ್ಪು ಕರ್ಮಗಳು ನಡೆಯುತ್ತಿದ್ದರೂ ಕೂಡಾ ನಾವು ಸುಮ್ಮನೇ ಕುಳಿತಿರುತ್ತೇವೆ. ಏನಾದರೂ ಮಾಡಬೇಕೆನಿಸುತ್ತದೆ. ಆದರೆ ಏನನ್ನೂ ಮಾಡಲು ಆಗುತ್ತಿಲ್ಲ. ಇದಕ್ಕೆ ಕಾರಣವಂತೂ ಈಗ ಸ್ಪಷ್ಟವಾಗಿದೆ. ಏಕೆಂದರೆ ನಮ್ಮ ಒಳ್ಳೆಯ ವಿಚಾರಗಳನ್ನು ಕಾರ್ಯರೂಪದಲ್ಲಿ ತರಲು ಆಗದಂತಹ ಆಹಾರವನ್ನು

ಸೇವಿಸುತ್ತಿದ್ದೇವೆ. ಇದರಿಂದ ಇನ್ನೂ ಕೂಡ ಹೆಚ್ಚಾಗಿ ದೋಷಗಳು ಗೋಚರಿಸುತ್ತಿವೆ. ಇದರಿಂದ ನಮ್ಮ ಜೀವನವು ಸುಖಮಯವಾಗಲಿ, ಸಂತೋಷದಿಂದ ಕೂಡಿರಲಿ ಎಂದು ಆಸೆಪಟ್ಟರೂ ಆ ಗುರಿಯನ್ನು ಮುಟ್ಟಲು ಅಡೆತಡೆಗಳು ಬರುತ್ತಿವೆ ಎಂದು ಗೊತ್ತಾಗುತ್ತದೆ.

ಹಾಗೇನಾದರೂ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳಿಂದ ಆಗುತ್ತಿರುವ ನಷ್ಟ ಮತ್ತು ಕರ್ಮದ ರಹಸ್ಯದಿಂದ ನಮ್ಮನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುವುದಾದರೆ ಅದಕ್ಕಾಗಿ ನಾವು ನಮ್ಮ ಬುನಾದಿಯು ಎಲ್ಲಿ ಹಾಳಾಗಿ ಹೋಗಿದೆಯೋ ಅದನ್ನು ಅಲ್ಲಿಂದಲೇ ಸುಧಾರಣೆ ಮಾಡಿಕೊಳ್ಳಬೇಕಾಗುತ್ತದೆ ಮತ್ತು ಇದಕ್ಕೆ ತಳಹದಿ ಎಂದರೆ ನಮ್ಮ ಮನಸ್ಸಿನ ವಿಚಾರಗಳು. ನಾವಿಂದು ನೈಸರ್ಗಿಕತೆಯಿಂದ ದೂರ ಹೋಗಿ ಕೃತ್ರಿಮವಾದ ಜೀವನವನ್ನು ಸ್ವೀಕರಿಸಿದ್ದೇವೆ ಮತ್ತು ಪ್ರಕೃತಿಯ ನಿಯಮಗಳನ್ನು ಉಲ್ಲಂಘಿಸಿದ್ದೇವೆ. ಈಗ ನಾವು ಮತ್ತೆ ಪ್ರಕೃತಿಯ ನಿಯಮಕ್ಕನುಸಾರ ನಡೆದು ವಿಜ್ಞಾನದ ಆಧಾರದಿಂದ ನಿಸರ್ಗ ಹಾಗೂ ಪಂಚತತ್ವಗಳ ಸಹಿತ ಸರ್ವ ಜೀವಜಂತುಗಳು, ವನಸ್ಪತಿಗಳು, ಪಶುಪಕ್ಷಿಗಳು ಹಾಗೂ ಪ್ರಾಣಿಗಳ ಜೊತೆ ಸ್ನೇಹ ಮತ್ತು ಪ್ರೀತಿಯ ಸಂಬಂಧವನ್ನು ಬೆಳೆಸಿ ಜೀವನವನ್ನು ಸುಖಮಯವನ್ನಾಗಿ ಮಾಡಿಕೊಳ್ಳಬೇಕಾಗಿದೆ. ಅದಕ್ಕಾಗಿ ರಾಜಯೋಗದ ಮುಖಾಂತರ ಸಿಗುವ ಶಕ್ತಿಗಳ ಆಧಾರದಿಂದ ನಮ್ಮ ಜಮೀನಿನಲ್ಲಿ ಆಧ್ಯಾತ್ಮಿಕ ಶಕ್ತಿಯನ್ನು ಹೆಚ್ಚಿಸಬಹುದು. ಬೆಳೆಯನ್ನು ನಿರೋಗಿ ಮತ್ತು ಶಕ್ತಿಶಾಲಿಯನ್ನಾಗಿ ಮಾಡಬಹುದು. ಅನೇಕ ಬಗೆಯ ಕೀಟಗಳನ್ನು ಹಾಗೂ ರೋಗಗಳನ್ನು ನಿಯಂತ್ರಿಸಬಹುದು ಮತ್ತು ಧಾನ್ಯಗಳಲ್ಲಿ ಸಾತ್ವಿಕತೆಯನ್ನು ತರಬಹುದು. ಅಂತಹ ಬೇಸಾಯ ಪದ್ಧತಿಗೆ "ಶಾಶ್ವತ ಯೌಗಿಕ ಕೃಷಿ" ಎಂದು ಕರೆಯಲಾಗಿದೆ.

ಈ ಯೋಗದಲ್ಲಿ ಯಾವುದೇ ಅಜ್ಞಾನ, ಅಂಧಶ್ರದ್ಧೆಯ ಮಾತಿಲ್ಲ. ಆದರೆ ಈ ಯೋಗವು ಒಂದು ಸಂಪೂರ್ಣವಾದ ವಿಜ್ಞಾನವಾಗಿದೆ. ಈ ಯೋಗದಲ್ಲಿ ಮಂತ್ರ, ಪ್ರಾಣಾಯಾಮ ಮತ್ತು ಆಸನಗಳ ಮಾತಿಲ್ಲ. ಈ ಯೋಗವು ಅತ್ಯಂತ ಪ್ರಾಚೀನಕಾಲದ ಪದ್ಧತಿಯಾಗಿದೆ. ಭಾರತದ ಪ್ರಾಚೀನ ಯೋಗವು ಸಮಸ್ತ ವಿಶ್ವದವರೆಗೂ ಹರಡಿದೆ. ಆದರೂ ಕೂಡ ಇಂದು ಪೂರ್ಣ ವಿಶ್ವದಲ್ಲಿ ಈ ಯೋಗವಿದ್ಯೆಯ ಕೊರತೆ ಇದೆ. ಹಾಗೂ ಆಧ್ಯಾತ್ಮಿಕ ಅರಿವು ಇಲ್ಲದಿರುವುದರಿಂದ ಚಿಂತೆ, ಅಶಾಂತಿ, ಒತ್ತಡದ ಪ್ರಭಾವವು ಮಿತಿಮೀರುತ್ತಿದೆ. ಮನುಕುಲದ ಭವಿಷ್ಯವು ಸಂಪೂರ್ಣವಾಗಿ ಅಂಧಕಾರದಲ್ಲಿರುವುದು ಇಂದು ಗೋಚರವಾಗುತ್ತಿದೆ.

ಅಂತಹ ಸಮಯದಲ್ಲಿ ಕಲಿಯುಗದ ಅಂತಿಮ ಚರಣದಲ್ಲಿ ಯೋಗೇಶ್ವರ, ಜ್ಞಾನಸಾಗರ, ಪರಮಪಿತ ಪರಮಾತ್ಮನೇ ನೇರವಾಗಿ ಪ್ರಜಾಪಿತ ಬ್ರಹ್ಮಾರವರ ಮುಖಕಮಲದ ಮುಖಾಂತರ ಸತ್ಯ ಮತ್ತು ಸಂಪೂರ್ಣವಾದ ಯೋಗವನ್ನು ಕಲಿಸುತ್ತಿದ್ದಾನೆ. ಇದನ್ನೇ ರಾಜಯೋಗವೆಂದು ಕರೆಯಲಾಗಿದೆ. ಈ ಆಧುನಿಕ ಯುಗದಲ್ಲಿ ರಾಜಯೋಗದ ಅವಶ್ಯಕತೆಯು ತುಂಬಾ ಇದೆ. ಈ ಯೋಗ ಒಂದೇ ಏಕಮಾತ್ರ ಸಾಧನೆಯಾಗಿದೆ. ಇದರಿಂದಲೇ ಮಾನಸಿಕ ಒತ್ತಡವು ದೂರವಾಗುತ್ತದೆ ಹಾಗೂ ತನು–ಮನಕ್ಕೆ ಸುಖ–ಶಾಂತಿ ಮತ್ತು ಶಕ್ತಿಯು ಪ್ರಾಪ್ತಿಯಾಗುತ್ತದೆ. ಈ ರಾಜಯೋಗವು ಮಾನವನಿಗೆ ಕರ್ಮದಲ್ಲಿ ಕುಶಲತೆಯನ್ನು ಕಲಿಸುತ್ತದೆ ಮತ್ತು ಈ ಕಲಿಯುಗದ ಈ ಕೆಟ್ಟ ವಾತಾವರಣದಲ್ಲಿ ಸಮತೋಲನೆಯ ಜೀವನವನ್ನು ನಡೆಸುವ ಕಲೆಯನ್ನು ಕಲಿಸುತ್ತಿದೆ.

ಈ ರಾಜಯೋಗದ ಅಭ್ಯಾಸದಿಂದ ಆತ್ಮದಲ್ಲಡಗಿರುವ ಗುಪ್ತ ಶಕ್ತಿಗಳು ಜಾಗೃತಗೊಳ್ಳುತ್ತವೆ ಮತ್ತು ಆತ್ಮದಲ್ಲಿ ಅನೇಕ ಗುಣಗಳು, ಶಕ್ತಿಗಳು, ಕಲೆಗಳು, ವಿಶೇಷತೆಗಳು ಜಾಗೃತಗೊಳ್ಳುತ್ತವೆ. ಈ ರಾಜಯೋಗವು ಮಾನವನಿಗೆ ಉತ್ತಮವಾಗಿ ಆಡಳಿತವನ್ನು ನಡೆಸುವ ಕಲೆಯನ್ನು ಕಲಿಸುತ್ತದೆ ಮತ್ತು ಮನಸ್ಸಿನಲ್ಲಿರುವ ವಿಕಾರಗಳ ಕೀಟಾಣುಗಳನ್ನು ಕೂಡ ನಷ್ಟಗೊಳಿಸುವಂತಹ ಶಕ್ತಿಯನ್ನು ಹೊಂದಿದೆ. ಮನಸ್ಸನ್ನು ಶಕ್ತಿಶಾಲಿಯನ್ನಾಗಿ ಮಾಡಲು

ಶುದ್ಧವಿಚಾರಗಳ ಉತ್ಪತ್ತಿಗಾಗಿ, ಮನಸ್ಸಿನ ಏಕಾಗ್ರತೆಯನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ರಾಜಯೋಗವು ಒಂದು ದಿವ್ಯವಾದ ಔಷಧಿಯಾಗಿದೆ.

ರಾಜಯೋಗವು ಜೀವನವನ್ನು ದಿವ್ಯಗೊಳಿಸಿ ಸಂಪೂರ್ಣತೆಯೆಡೆಗೆ ಕೊಂಡೊಯ್ಯುವ ಸಾಧನೆಯಾಗಿದೆ. ಈ ರಾಜಯೋಗದಲ್ಲಿ ಯಾವುದೇ ದೈಹಿಕವಾದ ಆಸನದ ಪ್ರಯೋಗವಿಲ್ಲ. ಆದರೆ ಪ್ರತಿಯೊಂದು ಮಾತು ಆಧ್ಯಾತ್ಮಿಕ ಹಾಗೂ ಮನೋವೈಜ್ಞಾನಿಕ ದೃಷ್ಟಿಕೋನದ ಆಧಾರದ ಮೇಲೆ ವ್ಯಾವಹಾರಿಕ ರೂಪವನ್ನಿತ್ತು ತಿಳಿಸಲಾಗುತ್ತದೆ. ಹಾಗೇನಾದರೂ ಆಸಕ್ತರು ಈ ರಾಜಯೋಗವನ್ನು ಏಕಾಗ್ರತೆಯಿಂದ ಅಭ್ಯಾಸ ಮಾಡಿದ್ದಾದರೆ ಮತ್ತು ಅಂತರ್ಮುಖಿಗಳಾಗಿ ತಿಳಿಸುವಂತಹ ನಿಯಮಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದಾದರೆ, ಅವರಿಗೆ ಜೀವನದಲ್ಲಿ ಪರಮಾನಂದ ಮತ್ತು ಸತ್ಯವಾದ ಸುಖ–ಶಾಂತಿಯ ಅನುಭೂತಿಯಾಗುತ್ತದೆ. ಈ ಯೋಗವನ್ನು ಯಾರು ಬೇಕಾದರೂ ಕಲಿಯಬಹುದು. ಇದಕ್ಕೆ ಯಾವುದೇ ಜಾತಿ, ಧರ್ಮ, ವಯಸ್ಸು, ಉದ್ಯೋಗ, ದೇಶದವರಾಗಿರಲಿ, ರಾಜಯೋಗವು ಈ ಎಲ್ಲಾ ಬಂಧನಗಳಿಂದಲೂ ನಮ್ಮನ್ನು ಬಿಡಿಸಿ ಮೇಲೇರಿಸುತ್ತದೆ. ಇಂತಹ ಅನುಭೂತಿಯನ್ನು ವ್ಯಕ್ತಿಯು ತಾನೂ ಮಾಡಬಹುದು. ಬೇರೆ ವ್ಯಕ್ತಿ, ವಸ್ತು ಅಥವಾ ವನಸ್ಪತಿಗಳಿಗೂ ಮಾಡಿಸಬಹುದು. ಕೇವಲ ಸ್ನೇಹ ಮತ್ತು ಪ್ರೀತಿಯಿಂದ ಆ ವ್ಯಕ್ತಿ, ವಸ್ತು ಅಥವಾ ವನಸ್ಪತಿಯ ಜೊತೆ ಸಂಬಂಧವನ್ನು ಬೆಳೆಸುವುದು ಅತಿ ಮುಖ್ಯ.

## ಸಸ್ಯ ಜಗತ್ತಿನ ಕೆಲವು ವೈಜ್ಞಾನಿಕ ಸಿದ್ಧಾಂತಗಳು

ಭಾರತದ ಪ್ರಖ್ಯಾತ ಸಂಶೋಧಕರಾದ ಸರ್. ಜಗದೀಶ್‌ಚಂದ್ರ ಬೋಸ್‌ರವರು ತಮ್ಮ ಪ್ರಯೋಗದ ಮೂಲಕ ಈ ಮಾತನ್ನು ಪ್ರಮಾಣಿಕರಿಸಿದ್ದಾರೆ. ಮನುಷ್ಯರ ಹಾಗೆ ಗಿಡಮರಗಳಲ್ಲೂ ಕ್ರಿಯೆಗಳು ನಡೆಯುತ್ತವೆ. ವನಸ್ಪತಿಗಳು ಶ್ವಾಸ ಕೋಶಗಳಿಲ್ಲದೆ ಉಸಿರನ್ನು ತೆಗೆದುಕೊಳ್ಳುತ್ತವೆ. ಹೊಟ್ಟೆಯೇ ಇಲ್ಲದೇ ಆಹಾರವನ್ನು ಜೀರ್ಣ ಮಾಡಿಕೊಳ್ಳುತ್ತವೆ. ಮಾಂಸಖಂಡಗಳು ಇಲ್ಲದಿದ್ದರೂ ಅಲುಗಾಡುತ್ತವೆ. ಜ್ಞಾನದ ಅಸ್ತಿತ್ವವಿಲ್ಲದಿದ್ದರೂ ಸಂದೇಶವನ್ನು ಗ್ರಹಿಸುತ್ತವೆ ಮತ್ತು ಅದಕ್ಕೆ ಪ್ರತಿಕ್ರಿಯೆ ನೀಡುತ್ತವೆ. ಈ ಕ್ರಿಯೆಯನ್ನು ವನಸ್ಪತಿಗಳು ಮಾಡುತ್ತವೆ. ಅವರು ವನಸ್ಪತಿಯ ಅಂತರಂಗದಲ್ಲಿ ನಡೆಯುವ ಗೊಂದಲವನ್ನು ದಾಖಲು ಮಾಡಿಕೊಳ್ಳಲು ಒಂದು ಯಂತ್ರವನ್ನು ತಯಾರಿಸಿದರು. ಇದರ ಆಧಾರದ ಮೇಲೆ ಮೃತ್ಯುವಿನ ಅಂತಿಮ ಗಳಿಗೆಯಲ್ಲಿ ಪಶು ಪಕ್ಷಿಗಳಂತೆ ವನಸ್ಪತಿಗಳು ಗಾಬರಿಗೊಳ್ಳುತ್ತವೆ. ಆಗಲೇ ಅವುಗಳು ಅಂತರಂಗದಿಂದ ಹೆಚ್ಚಿನ ಪ್ರಮಾಣದಲ್ಲಿ ಶಕ್ತಿಯನ್ನು ಹೊರಹಾಕುತ್ತವೆ. ಅವರು ಆಪ್ಟಿಕಲ್ ಪಲ್ಸ್ ರೆಕಾರ್ಡರ್ ಎಂಬ ಯಂತ್ರದ ಮುಖಾಂತರ ಇದನ್ನು ಸ್ಪಷ್ಟಗೊಳಿಸಿದ್ದಾರೆ. ಯಾವಾಗ ವನಸ್ಪತಿಗಳನ್ನು ಹೊರಗಿನ ವೈಬ್ರೇಷನ್ ಸ್ಪರ್ಷಿಸುತ್ತದೋ ಆ ಶಕ್ತಿಯು ವನಸ್ಪತಿಗಳಲ್ಲಿ ವಿದ್ಯುತ್ ಶಕ್ತಿಯಂತೆ ಪರಿವರ್ತಿಸುತ್ತದೆ ಮತ್ತು ಅದರ ಪ್ರತ್ಯಕ್ಷ ಫಲವು ಗೋಚರಿಸುತ್ತದೆ.

ಪ್ರಖ್ಯಾತ ವಿಜ್ಞಾನಿ ಕ್ಲೀವ್ ಬೈಕಸ್ಟರ್‌ರವರು ಜಗದೀಶ್‌ಚಂದ್ರ ಬೋಸ್‌ರ ಸಂಶೋಧನೆಯನ್ನು ಮುಂದುವರೆಸುತ್ತಾ ವನಸ್ಪತಿಗಳಲ್ಲಿ ಭಾವನೆಗಳಿರುತ್ತವೆ. ಅವು ಮಾನವನ ಭಾವನೆಗಳನ್ನು ಅರ್ಥ ಮಾಡಿಕೊಳ್ಳುತ್ತವೆ ಎಂದು ಸಾದರ ಪಡಿಸಿದರು. ಲಾಯ್ ಡಿಟೆಕ್ಟರ್ ಎಂಬ ಯಂತ್ರದ ಸಹಾಯದಿಂದ ವನಸ್ಪತಿಗಳ ಮೇಲೆ ಪ್ರಯೋಗ ನಡೆಸಿದರು. ಮಾನವನ ಮನಸ್ಸಿನ ಭಾವನೆಗಳಿಂದ ವನಸ್ಪತಿಗಳ ಶರೀರದೊಳಗಿನ ಶಕ್ತಿಯ ಪ್ರವಾಹವು ಹೆಚ್ಚು ಕಡಿಮೆಯಾಗುತ್ತದೆ. ಆ ಪ್ರವಾಹವನ್ನು ಭಾವನೆಗಳ ಮುಖಾಂತರ ಆಗುವ ಪ್ರತಿಕ್ರಿಯೆಯನ್ನು ಲಾಯ್ ಡಿಟೆಕ್ಟರ್‌ನಲ್ಲಿರುವ ಗಲವ್ಹಾನ ಮೀಟರ್ ಮುಖಾಂತರ ಅಳೆಯಬಹುದು.

ಮಾನವನ ಮನಸ್ಸಿನ ಭಾವನೆಗಳಿಗೆ ವನಸ್ಪತಿಗಳು ಪ್ರತಿಕ್ರಿಯೆ ನೀಡುತ್ತವೆ. ಇದನ್ನು ಪರಿಶೀಲಿಸಲು ಅವರು ಡ್ರೆಸಿನಾ ಎಂಬ ಗಿಡದ ಎಲೆಯನ್ನು ಯಂತ್ರಕ್ಕೆ ಜೋಡಿಸಿದರು ಮತ್ತು ನಾನೀಗ ಈ ಎಲೆಯನ್ನು ಸುಟ್ಟು ಹಾಕುತ್ತೇನೆಂದು ಮನಸ್ಸಿನಲ್ಲಿ ಯೋಚಿಸಿದರು. ಆಶ್ಚರ್ಯದ ವಿಚಾರವೆಂದರೆ ಮನಸ್ಸಿನಲ್ಲಿ ಎಲೆಯನ್ನು ಸುಡುವ ವಿಚಾರವು ಬರುತ್ತಿದ್ದಂತೆ ಬೆಂಕಿಪೆಟ್ಟಿಗೆಯನ್ನು ಕೈಗೆ ತೆಗೆದುಕೊಳ್ಳುವುದಕ್ಕೆ ಮೊದಲೇ ಯಂತ್ರದಲ್ಲಿರುವ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವ ಮುಳ್ಳು ಹೆಚ್ಚು ವೇಗವಾಗಿ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಲಾರಂಭಿಸಿತು. ಇದರಿಂದ ಸ್ಪಷ್ಟವಾಗುವುದೇನೆಂದರೆ ಅವರ ಮನಸ್ಸಿನಲ್ಲಿ ನಡೆಯುವ ಯೋಚನೆಗಳು ಆ ಗಿಡಕ್ಕೆ ಅರ್ಥವಾಗಿದೆ. ಮತ್ತೆ ಎರಡನೇ ಸಾರಿ ಇಚ್ಛೆಗೆ ವಿರುದ್ಧವಾಗಿ ಎಲೆಯನ್ನು ಸುಡುವಂತೆ ನಾಟಕ ಮಾಡಿದರು. ಆಗ ಗಿಡವು ತೋರಿಸಿದ ಪ್ರತಿಕ್ರಿಯೆಯು ನಿಧಾನವಾಗಿತ್ತು. ಇದರಿಂದ ವನಸ್ಪತಿಗಳಿಗೂ ಸತ್ಯ ಅಸತ್ಯದ ಅನುಭವವಾಗುತ್ತದೆ ಎಂದು ಗೊತ್ತಾಗುತ್ತದೆ.

ಹೀಗೆ ಅದ್ಭುತವಾದ ಪರೀಕ್ಷೆಯ ನಂತರ ಆ ವಿಜ್ಞಾನಿಯು ಸುಮಾರು 50 ಬಗೆಯ ಗಿಡಗಳ ಮೇಲೆ ವಿವಿಧ ವ್ಯಕ್ತಿಗಳ ಮೂಲಕ ಲಾಯ್ ಡಿಟೆಕ್ಟರ್‌ನ ಮೂಲಕ ಪ್ರಯೋಗ ಮಾಡಿಸಿದನು. ಆದರೆ ಎಲ್ಲಾ ಕಡೆಯಿಂದಲೂ ಅವನಿಗೆ ಮೊದಲಿನಂತಹ ಫಲಿತಾಂಶವೇ ಗೋಚರಿಸಿತು. ಇದರಿಂದ ಸಿದ್ಧವಾಗುವುದೇನೆಂದರೆ ವನಸ್ಪತಿಯಲ್ಲೂ ಕೂಡ ಸಂವೇದನೆಗಳಿರುತ್ತವೆ. ಯಾವುದೇ ಮರ ಅಥವಾ ಗಿಡಗಳನ್ನು ಪಾಲಿಸುವಂತಹ ವ್ಯಕ್ತಿಯಲ್ಲಿ ಒಂದು ಅವಿನಾಶಿಯಾದ ಸಂಬಂಧವಿರುವುದನ್ನು ಕಂಡು ಹಿಡಿದನು. ಅಂತಹ ವ್ಯಕ್ತಿ ಹತ್ತಿರವಿರಬಹುದು ಇಲ್ಲವೇ ದೂರವಿರಬಹುದು. ಅದು ಸಮಾನ ವಿಚಾರವುಳ್ಳ ಮಿತ್ರನಂತೆ ನಮ್ಮ ಸಂಕಲ್ಪಗಳ ಆಧಾರದ ಮೇಲೆ ತಮ್ಮ ಹತ್ತಿರದವರ ಭಾವನೆಗಳಿಗೆ ವನಸ್ಪತಿಗಳು ಪ್ರತಿಕ್ರಿಯೆ ನೀಡುತ್ತವೆ. ಈ ಭಾವ ಭಾವನೆಗಳನ್ನು ಯಾವುದೇ ಬಗೆಯ ವಿದ್ಯುತ್ ಆಯಸ್ಕಾಂತದ ಶಕ್ತಿಯಿಂದಲೂ ತಡೆಯಲು ಸಾಧ್ಯವಿಲ್ಲ.

ಮನೋವಿಜ್ಞಾನದ ಜನಕನಾದ 'ಪೆಹನರ'ನು ತನ್ನ ಪ್ರಯೋಗದಿಂದ ವನಸ್ಪತಿಗೂ ವ್ಯಕ್ತಿತ್ವವಿರುತ್ತದೆಂದು ಸಿದ್ಧಮಾಡಿದನು. ವನಸ್ಪತಿಗಳಿಗೆ ತಮಗೆ ಬೇಕಾಗುವ ಆಹಾರದ ಅವಶ್ಯಕತೆ ಎಷ್ಟು ಎಂದು ಗೊತ್ತಾಗುತ್ತದೆ ಮತ್ತು ಅದು ತನ್ನ ಅಗತ್ಯಕ್ಕನುಸಾರವಾಗಿ ತಾನಾಗಿಯೇ ಪಡೆದುಕೊಳ್ಳುತ್ತದೆ. ಆದರೆ ಅವುಗಳಿಗೆ ಅರಿಯುವ ಅಥವಾ ಪ್ರಾಪ್ತಿಮಾಡಿಕೊಳ್ಳುವಂತಹ ಮಾರ್ಗವು ಬೇರೆಯಾಗಿದೆ.

ಇದೇ ರೀತಿ 'ಚಾರ್ಲ್ಸ್ ಡಾರ್ವಿನ್' ಎಂಬ ಆಂಗ್ಲ ವಿಜ್ಞಾನಿಯು ವನಸ್ಪತಿಗಳಲ್ಲಿ ಅಗೋಚರವಾದ ಶಕ್ತಿ ಇದೆ. ಇದರಿಂದ ಗಿಡಗಳಿಗೆ ಅರಿವು ಮತ್ತು ಬುದ್ಧಿಯು ಪ್ರಾಪ್ತಿಯಾಗುತ್ತದೆ. ಅವನು ತನ್ನ (The Power of moment in plants) ಎಂಬ ಪುಸ್ತಕದಲ್ಲಿ ಗಿಡಗಳ ಬೇರುಗಳ ತುದಿಯಲ್ಲಿರುವ ಜೀವಾಣುಗಳು ಮೆದುಳಿನಂತೆ ಕೆಲಸ ಮಾಡುತ್ತವೆಂದು ಬರೆದಿದ್ದಾನೆ. ಈ ಅಂಗವು ಗಿಡಗಳಿಗೆ ಕೋಶಗಳಂತೆ ಕೆಲಸ ಮಾಡುತ್ತವೆ ಎಂದು ಹೇಳಲು ಸಂಕೋಚವಿಲ್ಲ. ಇದು ಸಂದೇಶವನ್ನು ಗ್ರಹಿಸಿಕೊಳ್ಳುತ್ತದೆ ಹಾಗೂ ಗೊಂದಲವನ್ನು ನಿಯಂತ್ರಿಸುತ್ತದೆ ಎಂದು ಸ್ಪಷ್ಟೀಕರಿಸಿದ್ದಾನೆ.

ವನಸ್ಪತಿಗಳು ಇಂದ್ರಜಾಲಕ 'ಲ್ಯೂಥರ್ ಬರಬಕ್'ನ ಪ್ರಯೋಗದಿಂದ 'ನಿವಡೂಂಗ' ವನಸ್ಪತಿಗೆ ಅರ್ಜಿಹಾಕಿ ಅದರಲ್ಲಿರುವ ಮುಳ್ಳುಗಳನ್ನು ಕಿತ್ತು ಹಾಕಬಹುದೇ ? ಎಂದು ಕೇಳಿಕೊಂಡನು. ಆ ನಿವಡೂಂಗವು ಒಪ್ಪಿತು ಮತ್ತು ರಕ್ಷಣೆಗಾಗಿ ಇದ್ದ ಮುಳ್ಳುಗಳನ್ನು ತೆಗೆಸಿಕೊಳ್ಳಲು ಸಿದ್ಧವಾಯಿತು. ಆ ವಿಜ್ಞಾನಿಯ ಬಳಿ ನಿಸರ್ಗ ಹಾಗೂ ಮರಗಿಡಗಳ ಜೊತೆ ಮಾತನಾಡುವಂತಹ ಶಕ್ತಿ ಇತ್ತು. 18 ಏಪ್ರಿಲ್, 1906 ರಂದು ಆದ ಭೂಕಂಪದಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ ನಾಶವಾಯಿತು. ಆಗ ಬರಬಕ್‌ನ ಮನೆಯು ಭೂಕಂಪದ ಕೇಂದ್ರ ಬಿಂದುವಿನ ಹತ್ತಿರದಲ್ಲಿತ್ತು.

ಆದರೂ ಕೂಡ ಅವನ ಮನೆಯ ಕಿಟಿಕಿಗಳಿಗೆ ಹಾಕಿದ್ದ ಒಂದು ಗಾಜೂ ಕೂಡ ಒಡೆದಿರಲಿಲ್ಲ. ನನಗೆ ನಿಸರ್ಗದ ಜೊತೆ ಒಂದು ವಿಶೇಷವಾದ ಸ್ನೇಹದ ಸಂಬಂಧವಿರುವುದರಿಂದ ಈ ಫಲಿತಾಂಶವು ಬಂದಿದೆ ಎಂದು ಹೇಳಿದನು.

ಅಮೇರಿಕಾದ ವಿಶ್ವವಿಖ್ಯಾತ ವಿಜ್ಞಾನಿ 'ಜಾರ್ಜ್ ವಾಷಿಂಗ್‌ಟನ್ ಕಾರ್ವ್ಹರ್'ನು ಕೃಷಿಗೆ ಸಂಬಂಧಿಸಿದ ವಿವಿಧ ಪ್ರಯೋಗಗಳನ್ನು ನೋಡಿದ ಅನೇಕರು ಅವನನ್ನು ತಮ್ಮ ಹಾಗೆ ಪ್ರಯೋಗ ಮತ್ತು ಅನುಭವಗಳನ್ನು ಬೇರೆ ಯಾರಾದರೂ ಮಾಡಬಹುದೇ? ಎಂದು ಕೇಳಿದರು. ಆಗ ಅವನು ಮೇಜಿನ ಮೇಲಿದ್ದ ಬೈಬಲ್‌ನ ಮೇಲೆ ಕೈ ಇಟ್ಟು ಉತ್ತರಿಸಿದ – ಎಲ್ಲಾ ರಹಸ್ಯಗಳು ಇದರಲ್ಲಿ ಅಡಗಿವೆ ಹಾಗೂ ಪರಮಾತ್ಮನ ಆಶ್ವಾಸನೆಗಳಿವೆ. ಕೇವಲ ಈ ಆಶ್ವಾಸನೆಗಳೇ ಸತ್ಯ. ಇದರಲ್ಲಿ ಅನಂತವಾದ ಶಕ್ತಿ ಇದೆ. ಯಾರಿಗೆ ಪರಮಾತ್ಮನಲ್ಲಿ ವಿಶ್ವಾಸವಿರುವುದೋ ಅವರೆಲ್ಲರೂ ನನ್ನಂತೆ ಅನುಭೂತಿ ಹಾಗೂ ಪ್ರಯೋಗಗಳನ್ನು ಮಾಡಬಹುದು. ಆದರೆ ಅದಕ್ಕಾಗಿ ಪ್ರಕೃತಿ, ವೃಕ್ಷ, ವನಸ್ಪತಿಗಳನ್ನು ಪ್ರೀತಿಸಬೇಕು.

ಭಾರತ ದೇಶದ ವಿಜ್ಞಾನಿ ಡಾ। ಬಿ.ಸಿ. ಸಿಂಗ್‌ರವರು ಚೆನ್ನೈಯಲ್ಲಿರುವ ಅಣ್ಣಾಮಲೈ ವಿಶ್ವವಿದ್ಯಾಲಯದಲ್ಲಿ ಕೊಳಲು, ವಾಯಲಿನ್, ವೀಣೆ, ಹಾರ್ಮೋನಿಯಂ ಇತ್ಯಾದಿ ವಾದ್ಯಗಳ ಮುಖಾಂತರ ವನಸ್ಪತಿಗಳ ಮೇಲೆ ಅನೇಕಾನೇಕ ಪ್ರಯೋಗಗಳನ್ನು ನಡೆಸಿದ್ದಾರೆ ಮತ್ತು ಮರಗಳು ದೊಡ್ಡವಾಗುವುದು ಹಾಗೂ ಹೂ, ಹಣ್ಣು ಮತ್ತು ಬೀಜ ಇತ್ಯಾದಿಗಳ ವಿಕಾಸದ ಮೇಲೆ ಸಂಗೀತದ ಅನುಕೂಲಕರವಾದ ಪ್ರಭಾವವು ಗೋಚರಿಸುತ್ತದೆ ಎಂಬ ಮಾತನ್ನು ಸಿದ್ಧ ಮಾಡಿದ್ದಾರೆ ಹಾಗೂ ಒಂದು ಪ್ರಯೋಗದ ಮುಖಾಂತರ ಸ್ಪಷ್ಟಪಡಿಸಿದ್ದಾರೆ. ಎಲೆಗಳ ಸಂಖ್ಯೆ ಶೇ. 72 ರಷ್ಟು ಹೆಚ್ಚಾಗಿವೆ. ವೃಕ್ಷವು ಶೇ. 20 ಕ್ಕಿಂತಲೂ ಹೆಚ್ಚಾಗಿ ವಿಕಾಸ ಹೊಂದಿದೆ. ಮದ್ರಾಸ್ ಮತ್ತು ಪಾಂಡಿಚೇರಿಯಲ್ಲಿರುವ 7 ಗ್ರಾಮಗಳಲ್ಲಿ ಅವರು ಸಂಗೀತದ ಪ್ರಯೋಗ ಮಾಡಿದರು. ಇದರಿಂದ ಧಾನ್ಯದ ಉತ್ಪಾದನೆಯು ಶೇ.25 ರಿಂದ 60 ರಷ್ಟು ವೃದ್ಧಿಯಾಯಿತು. ಅವರು ಹೂತೋಟದಲ್ಲಿರುವ ಗಿಡಗಳ ಮೇಲೆ ಪ್ರಯೋಗ ಮಾಡಿದರು. ಗೆಜ್ಜೆ ಇಲ್ಲದೆ ಭರತನಾಟ್ಯದ ಪ್ರಯೋಗ ಮಾಡಿದರು. ಇದರಿಂದ ಚೆಂಡುಹೂ, ಪಿಟಯೂನಿಯಾ ಇತ್ಯಾದಿ ಹೂಗಳು 15 ದಿನಗಳಿಗೆ ಮೊದಲೇ ಹೂಗಳು ಕಾಣಿಸಿಕೊಂಡವು. ಇದರಲ್ಲಿ ನೃತ್ಯದ ಲಯದ ಮುಖಾಂತರ ಉಂಟಾಗುವ ಸಂವೇದನೆಗಳನ್ನು ಹೂಗಳು, ಮರಗಿಡಗಳು, ಭೂಮಿಯ ಒಳಗಿನಿಂದಲೇ ಗ್ರಹಿಸಿರಬಹುದು ಮತ್ತು ಅದರ ಪ್ರಭಾವವು ಹೂಗಳ ಗಿಡಗಳ ಮೇಲೆ ಪ್ರಭಾವಿಸಿರಬಹುದೆಂದು ಅವರು ಊಹಿಸಿದ್ದಾರೆ.

ಡಾ। ಹೇಮಾಂಗಿ ಜಾಂಭೆಕರ್ (ಪುಣೆ) ರವರು ತಮ್ಮ ನೈಸರ್ಗಿಕ ಶಕ್ತಿಯ ನಿಯೋಜನ ಎಂಬ ಲೇಖನದಲ್ಲಿ ಸೌರಶಕ್ತಿ, ಚಂದ್ರನಶಕ್ತಿ ಮತ್ತು ವಿಶ್ವಶಕ್ತಿಯ ಮೂಲಕ ಭೂಮಿಯನ್ನು ಸಜೀವಗೊಳಿಸುವುದು, ಕಾಂಪೋಸ್ಟಿಂಗ್‌ಗಾಗಿ ಬೇಗ ತಯಾರಿಸುವುದು, ಉಪ್ಪಿನಿಂದ ಕೂಡಿದ ಜಮೀನನ್ನು ಸುಧಾರಿಸುವುದು ಸಹಜವೆಂದು ಸ್ಪಷ್ಟೀಕರಿಸಿದ್ದಾರೆ. ಈ ಶಕ್ತಿಗಳ ಮುಖಾಂತರ ಜಮೀನಿನ ಒಳಗಿನ ಜೀವಾಣುಗಳು, ಕೀಟಗಳು ಮುಂತಾದವುಗಳ ಜೀವನ ಚಕ್ರದಲ್ಲಿ ಯಾವುದೇ ಬದಲಾವಣೆಯನ್ನು ಮಾಡದೇ ಶಕ್ತಿಯ ಬಳಕೆಯಿಂದ ಅವುಗಳನ್ನು ಶಕ್ತಿಶಾಲಿಯನ್ನಾಗಿಸಿ, ಕಾರ್ಯದಕ್ಷತೆಯನ್ನು ಹೆಚ್ಚಿಸಲು ಬರುತ್ತದೆ. ಈ ಶಕ್ತಿಯ ಬಳಕೆಯಿಂದ ರಾಯಝೋಬಿಯಮ್‌ನ ಜೀವಾಣುಗಳು ಸರಿಯಾದ ರೀತಿಯಲ್ಲಿ ನೈಟ್ರೋಜನ್‌ನ್ನು ಸ್ಥಿರಗೊಳಿಸುವ ಕಾರ್ಯವನ್ನು ನಿರ್ವಹಿಸುತ್ತವೆ. ಮಿಥೆನೋಜೆನಿಕ ಬ್ಯಾಕ್ಟೀರಿಯಾ ಹಾಗೂ ಕಾಂಪೋಸ್ಟಿಂಗ್ ಮಾಡುವಂತಹ ಜೀವಾಣುಗಳು ಹೆಚ್ಚು ಶಕ್ತಿಶಾಲಿಗಳಾಗಿ ತಮ್ಮ ಕಾರ್ಯವನ್ನು ನಿರ್ವಹಿಸುತ್ತವೆ. ಕಾಂಪೋಸ್ಟಿಂಗ್‌ನ ಶೀಘ್ರ ತಯಾರಿ, ಕಬ್ಬಿನಲ್ಲಿ ಸಕ್ಕರೆ ಪ್ರಮಾಣ ಹೆಚ್ಚಿಸುವುದು ಹಾಗೂ ಕೀಟಗಳು ಮತ್ತು ರೋಗ

ನಿಯಂತ್ರಣಕ್ಕೆ ಅತ್ಯಂತ ಕಡಿಮೆ ಔಷಧಿಯ ಸಿಂಪಡಿಸುವಿಕೆಯಿಂದ ಸಾಧ್ಯವಾಗುತ್ತದೆ. ಇದರಿಂದ ವ್ಯವಸಾಯದ ಉತ್ಪಾದನೆ ಮತ್ತು ಉತ್ಪಾದನಾ ಗುಣಮಟ್ಟದಲ್ಲಿ ಅದ್ಭುತವಾದ ಸುಧಾರಣೆಯು ಆಗಿದೆ.

ಮೇಲೆ ಹೇಳಿದ ಉದಾಹರಣೆಗಳಿಂದ ಮನಸ್ಸಿನ ಸಂಕಲ್ಪ ಶಕ್ತಿಯ ಪ್ರಭಾವವು ಪ್ರಕೃತಿಯ ಮೇಲೂ ಬೀಳುತ್ತದೆ. ವನಸ್ಪತಿಗಳಲ್ಲಿ ಭಾವನೆಗಳಿರುತ್ತವೆ. ಆದ್ದರಿಂದ ಮನಸ್ಸಿನ ಏಕಾಗ್ರತೆಯ ಮುಖಾಂತರ ಬೆಳೆ, ವನಸ್ಪತಿ, ಮರಗಿಡ ಇತ್ಯಾದಿಗಳ ಮೇಲೆ ಸಕಾರಾತ್ಮಕವಾಗಿ ಹೇಗೆ ಪ್ರಭಾವ ಬೀರುತ್ತದೆಂಬುದನ್ನು ಅನುಭವ ಮಾಡಬೇಕಾಗಿದೆ. ಈ ರಾಜಯೋಗದ ವಿಧಿಯಿಂದ ಮನಸ್ಸಿನ ಶಕ್ತಿಯ ಮೂಲಕ ನೇರವಾಗಿ ಪರಮಾತ್ಮನ ಶಕ್ತಿಯನ್ನು ಜಮೀನು ಮತ್ತು ವನಸ್ಪತಿಗಳವರೆಗೆ ಮುಟ್ಟಿಸಬೇಕು. ಇದರಿಂದ ಶುದ್ಧ, ಶಕ್ತಿಶಾಲಿಯಾದ ಹಾಗೂ ಸಾತ್ವಿಕವಾದ ಆಹಾರದ ಉತ್ಪಾದನೆಯಾಗುತ್ತದೆ. ಅಸಾಧ್ಯವಾದ ಮಾತು ಸಾಧ್ಯವಾಗಿ ಬಿಡುತ್ತದೆ ಮತ್ತು ತಮ್ಮ ಜಮೀನು ವಿಶ್ವದ ರಂಗಮಂಟಪದಲ್ಲಿ ಶಕ್ತಿಶಾಲಿಯಾದ ಪ್ರಯೋಗಶಾಲೆ ಆಗಿಬಿಡುತ್ತದೆ.

'ಅಲ್ಬ್ರೆಟ ಹರ್ಜಿಲೀ' ಎಂಬ ಹೆಸರಿನ ಸಂಶೋಧಕರು' The Origin of inorganic substance ಎಂಬ ಗ್ರಂಥವನ್ನು ಬರೆದನು. ಈ ಗ್ರಂಥದಲ್ಲಿ ವನಸ್ಪತಿಗಳು ಆಹಾರವನ್ನು ತಯಾರಿಸುವುದಷ್ಟೇ ಅಲ್ಲ, ಆದರೆ ಅದೊಂದು ಜಾದುಗಾರಿಣಿಯೂ ಹೌದು ಎಂದು ಸಿದ್ಧಗೊಳಿಸಿದ್ದಾನೆ. ಒಂದು ಮೂಲದ್ರವ್ಯವನ್ನು ಮತ್ತೊಂದು ಮೂಲದ್ರವ್ಯದಲ್ಲಿ ರೂಪಾಂತರಗೊಳಿಸುವ ಶಕ್ತಿಯು ವನಸ್ಪತಿಯಲ್ಲಿದೆ. ಅವಶ್ಯಕತೆಗನುಸಾರವಾಗಿ ವನಸ್ಪತಿಯು ಸ್ಫುರವನ್ನು ಗಂಧಕದಲ್ಲಿ, ಕ್ಯಾಲ್ಸಿಯಂನ್ನು ಪಾಸ್ಫೆಟ್‌ನಲ್ಲಿ, ಮ್ಯಾಗ್ನೀಷಿಯಂನ್ನು ಕ್ಯಾಲ್ಸಿಯಂನಲ್ಲಿ, ಕಾರ್ಬಾನಿಕ್ ಆಸಿಡ್‌ನ್ನು ಮ್ಯಾಗ್ನಿಷಿಯಂನಲ್ಲಿ ಮತ್ತು ನೈಟ್ರೋಜನ್‌ನ್ನು ಪೊಟ್ಯಾಸಿಯಂನಲ್ಲಿ ರೂಪಾಂತರಗೊಳಿಸುತ್ತದೆ. ವನಸ್ಪತಿಗಳು ಹೊಸರಚನೆಯನ್ನು ನಿರ್ದಿಷ್ಟ ಶಾಖದಲ್ಲಿ ಕಡಿಮೆ ಶಕ್ತಿಯನ್ನು ವೆಚ್ಚಮಾಡಿ ಮಾಡುತ್ತವೆ, ಈ ಸತ್ಯವನ್ನು ಅವನು ಸಿದ್ಧಪಡಿಸಿದನು.

ಈ ಎಲ್ಲಾ ಪ್ರಯೋಗಗಳನ್ನು ಕೇಳುತ್ತಾ ನಮ್ಮ ಮನಸ್ಸಿನಲ್ಲಿ ನಾವು ಕೂಡ ಅದೇರೀತಿಯಲ್ಲಿ ನಿಸರ್ಗದ ಜೊತೆ ಮೈತ್ರಿಯನ್ನು ಬೆಳೆಸುವುದು ತುಂಬಾ ಅಗತ್ಯವೆಂಬ ವಿಶ್ವಾಸವು ಮುಂದೆ ನಿಲ್ಲುತ್ತದೆ. ವಿಜ್ಞಾನದ ಯುಗದಲ್ಲಿ ನಮ್ಮ ಜೀವನವು ಕೃತ್ರಿಮವಾಗುತ್ತಾ ಹೋಗುತ್ತಿದೆ. ಈಗ ನಾವು ಮತ್ತೆ ನಿಸರ್ಗದ ಜೊತೆ ಸಂಬಂಧವನ್ನು ಬೆಳೆಸುವುದು ತುಂಬಾ ಅಗತ್ಯ. ಇಂದು ಪ್ರತಿಯೊಬ್ಬ ರೈತನು ಕೃಷಿಯನ್ನು ಉದ್ಯೋಗವೆಂದು ತಿಳಿದುಕೊಂಡು ಕೆಲಸ ಮಾಡುತ್ತಿದ್ದಾನೆ. ಕೃಷಿಯನ್ನು ಧಾನ್ಯವನ್ನು ಉತ್ಪಾದಿಸುವ ಸಾಧನ (ನೆ) ಎಂದು ತಿಳಿದುಕೊಂಡಿದ್ದಾನೆ. ಆ ಕಾರಣದಿಂದ ಜಮೀನು ಮತ್ತು ವನಸ್ಪತಿಯ ಜೊತೆಗೆ ನನ್ನದೆಂಬ ಭಾವನೆ, ಸ್ನೇಹ, ಪ್ರೇಮವು ಬೇಕಿತ್ತೋ ಆ ಅನುಭವವನ್ನು ನಾವು ಮಾಡುತ್ತಿಲ್ಲ. ಜಮೀನಿಗೆ ತಾಯಿಯಂತೆ ಪಾಲನೆ ನೀಡಿದ್ದಾದರೆ ಮತ್ತು ಪಡೆದುಕೊಂಡಿದ್ದಾದರೆ ಆ ಭೂಮಾತೆಯು ನಮಗೆ ಎಲ್ಲವನ್ನೂ ನೀಡಲು ಸಿದ್ಧವಾಗುತ್ತದೆ. ಹಾಗೇನಾದರೂ ನಮಗೆ ನಮ್ಮ ಮೇಲೆ ಪ್ರೀತಿ ಇದ್ದರೆ, ಭೂತಾಯಿಯ ಮೇಲೆ ಪ್ರೀತಿ ಇದ್ದರೆ ಮತ್ತು ಪರಮಾತ್ಮನ ಬಗ್ಗೆ ವಿಶ್ವಾಸವಿದ್ದರೆ ನಾವು ಈ ಶಾಶ್ವತ ಯೌಗಿಕ ಕೃಷಿಯ ಮಾಧ್ಯಮದ ಮುಖಾಂತರ ನಿಜವಾದ ಅನ್ನದಾತರಾಗಿ ಮತ್ತೆ ಈ ಭಾರತ ಭೂಮಿಯನ್ನು ಸುಜಲಾಂ, ಸುಫಲಾಂ ಮಾಡಿ ಭಾರತವನ್ನು ಕೃಷಿ ಪ್ರಧಾನವನ್ನಾಗಿ ಮಾಡಬಹುದು.

# ಯೋಗದ ಪ್ರಯೋಗದ ವಿಧಿ ಹಾಗೂ ಅದರ ಪರಿಣಾಮ

ಪ್ರಾಚೀನ ಕಾಲದ ಋಷಿಗಳು ಆಚರಿಸಿದ ತಪಸ್ಸಿನ ಬಗ್ಗೆ ಕೇಳಿದ್ದೇವೆ. ಋಷಿ ಮುನಿಗಳು ಪರ್ವತದ ಯಾವುದೋ ಗುಹೆಯಲ್ಲಿ ಕುಳಿತುಕೊಂಡು ತಪಸ್ಸು ಮಾಡುತ್ತಿದ್ದರು. ಆ ಋಷಿಗಳ ಪ್ರಭಾವವು ಬಹಳ ದೂರದವರೆಗೆ ಹರಿದು ಹೋಗುತ್ತಿತ್ತು. ಹಾಗೇನಾರೂ ಯಾರಾದರೂ ವ್ಯಕ್ತಿಗಳೂ ಇದ್ದಕ್ಕಿದ್ದಂತೆ ತಪಸ್ವಿಗಳ ಆಶ್ರಮಗಳಿಗೆ ಪ್ರವೇಶಿಸುತ್ತಿದ್ದಂತೆ ಮನುಷ್ಯನು ತನ್ನ ದು:ಖ ಹಾಗೂ ನೋವುಗಳನ್ನು ಮರೆತು ಬಿಡುತ್ತಿದ್ದನು. ಹಾಗೆಯೇ ಕೆಲವೆಡೆ ಆಶ್ರಮಗಳಲ್ಲಿ ತಪಸ್ವಿಗಳ ಅಕ್ಕಪಕ್ಕದಲ್ಲಿ ಹಿಂಸಕ ಪ್ರಾಣಿಗಳು ಕೂಡ ಬಂದು ಕೂರುತ್ತಿದ್ದವು ಎಂಬ ಸತ್ಯವನ್ನು ಕೇಳಿದ್ದೇವೆ ಅಥವಾ ಚಿತ್ರಗಳಲ್ಲಿ ನೋಡಿದ್ದೇವೆ. ಈ ರೀತಿ ವರ್ಣನೆ ಮಾಡುವುದರ ಭಾವನೆ ಏನೆಂದರೆ ತಪಸ್ಸು ಅಂದರೆ ಯೋಗದಲ್ಲಿ ಒಂದು ಅದ್ಭುತವಾದ ಶಕ್ತಿಯು ಅಡಗಿದೆ. ಇದರಿಂದ ಅಸಾಧ್ಯವಾದದ್ದೂ ಕೂಡ ಸಾಧ್ಯವಾಗಿ ಬಿಡುತ್ತಿತ್ತು.

ಈಗ ಪರಮಾತ್ಮನು ಅತ್ಯಂತ ಸರಳವಾದ ಯೋಗವನ್ನು ಕಲಿಸುತ್ತಿದ್ದಾನೆ. ಆದುದರಿಂದ ಈ ಯೋಗದಲ್ಲಿ ಮಂತ್ರ, ಪ್ರಾಣಾಯಾಮ ಅಥವಾ ಆಸನಗಳ ವಿಚಾರವೇ ಇಲ್ಲ. ರಾಜಯೋಗಿ ಜೀವನವನ್ನು ದಿವ್ಯ ಮಾಡಿಕೊಂಡು ಸಂಪೂರ್ಣತೆಯೆಡೆಗೆ ನಡೆಯುವಂತಹ ಸಾಧನೆಯೇ ಇದಾಗಿದೆ. ಈ ಸಹಜ ಯೋಗದ ಸರಳ ಅರ್ಥ – 'ಪರಮಾತ್ಮ ತಂದೆಯನ್ನು ನೆನಪು ಮಾಡುವುದು'.

ಪ್ರಪ್ರಥಮವಾಗಿ ರಾಜಯೋಗವನ್ನು ಕಲಿಯಬೇಕೆಂದರೆ ತಮ್ಮ ಹಾಗೂ ಪರಮಾತ್ಮನ ಜ್ಞಾನವು ತುಂಬಾ ಅಗತ್ಯ. ನಾನು ಯಾರು? ನಾನು ಯಾರ ಜೊತೆ ಸಂಬಂಧವನ್ನು ಬೆಳೆಸಬೇಕು? ರಾಜಯೋಗದ ಸರಿಯಾದ ವಿಧಾನ ಅಂದರೆ ತಮ್ಮನ್ನು ದಿವ್ಯ ಜ್ಯೋತಿರ್‌ಬಿಂದು ಸ್ವರೂಪ ಆತ್ಮರೆಂದು ನಿಶ್ಚಯ ಮಾಡಿಕೊಳ್ಳಿ. ದಿವ್ಯ ಜ್ಯೋತಿರ್‌ಬಿಂದು ರೂಪಿ ಪರಮಾತ್ಮನ ಜೊತೆ ಸಮಾನತೆ ಮತ್ತು ಸ್ನೇಹದ ಆಧಾರದ ಮೇಲೆ ಸರ್ವ ಸಂಬಂಧಗಳನ್ನು ಬೆಳೆಸುವುದು. ಇದರಿಂದ ಆತ್ಮನು ಅಧಿಕಾರಿಯಾಗಿ ಪರಮಾತ್ಮನಿಂದ ಸರ್ವ ಪ್ರಾಪ್ತಿಗಳನ್ನು ಅನುಭವ ಮಾಡಬೇಕಾಗಿದೆ. ಆತ್ಮ ಮತ್ತು ಪರಮಾತ್ಮನ ಮಧ್ಯೆ ಸಂಬಂಧವನ್ನು ಬೆಳೆಸುವುದರ ಅಗತ್ಯವಿದೆ. ಅದಕ್ಕಾಗಿ ಶ್ರೇಷ್ಠ ಸಂಕಲ್ಪ– ಈ ಶಕ್ತಿಯೂ ಕೂಡ ಸಮಾನತೆಗೆ ಆಧಾರವಾಗುತ್ತದೆ. ಉದಾ – ಬ್ಯಾಟರಿಯ ಸಂಬಂಧವನ್ನು ಪಾವರ್‌ಹೌಸ್‌ನ ಜೊತೆ ಬೆಳೆಸಿದಾಗ ಬ್ಯಾಟರಿಯಲ್ಲಿ ಮತ್ತೆ ಶಕ್ತಿಯು ತುಂಬುತ್ತದೆ. ಅದೇ ರೀತಿ ಸರ್ವಶಕ್ತಿವಾನ್ ಪರಮಾತ್ಮನು ಸರ್ವಗುಣಗಳ ಮತ್ತು ಸರ್ವ ಶಕ್ತಿಗಳ ಭಂಡಾರವಾಗಿದ್ದಾನೆ. ಅವನೊಡನೆ ಸಂಬಂಧವನ್ನು ಬೆಳೆಸಿದಾಗ ಆತ್ಮನಿಗೆ ಅನೇಕ ಗುಣಗಳು ಹಾಗೂ ಶಕ್ತಿಗಳು ಪ್ರಾಪ್ತಿಯಾಗುತ್ತವೆ.

ರಾಜಯೋಗದ ಮೊದಲ ಹೆಜ್ಜೆ ಅಂದರೆ – ಆತ್ಮ ಸ್ಥಿತಿಯ ಅನುಭವ ಮಾಡುವುದು. ಇಲ್ಲಿ ಕಣ್ಣುಗಳನ್ನು ಮುಚ್ಚಿ ಕೂರುವ ಅವಶ್ಯಕತೆ ಇಲ್ಲ. ಏಕೆಂದರೆ ರಾಜಯೋಗವು ನಮಗೆ ಕರ್ಮ ಯೋಗವನ್ನು ಮಾಡಲು ಪ್ರೇರಣೆ ನೀಡುತ್ತದೆ. ಆದ್ದರಿಂದ ಕಣ್ಣನ್ನು ಮುಚ್ಚಿಕೊಂಡು ಧ್ಯಾನ ಮಾಡುವುದಲ್ಲ. ರಾಜಯೋಗಿಯು ಓಡಾಡುವಾಗ, ನಡೆಯುವಾಗ, ಏಳುವಾಗ, ಕೂರುವಾಗ ಪ್ರತಿ ಕ್ಷಣದಲ್ಲೂ ತನ್ನ ಆತ್ಮಿಕ ಸ್ಥಿತಿಯನ್ನು ಇಟ್ಟುಕೊಳ್ಳುವನು. ಆತ್ಮದ ಮೂರು ಮುಖ್ಯ ಶಕ್ತಿಗಳು – ಮನಸ್ಸು, ಬುದ್ಧಿ, ಸಂಸ್ಕಾರ. ಇವುಗಳ ಆಧಾರದಿಂದ ತಾನಾಗಿಯೇ ಯೋಗದಲ್ಲಿ ಪರಮಾತ್ಮನ ಅನುಭೂತಿಯನ್ನು ಮಾಡಬಹುದು ಮತ್ತು ಅನ್ಯರಿಗೂ ಮಾಡಿಸಬಹುದು.

ವಿಚಾರ ಮಾಡುವ (ಸಂಕಲ್ಪ) ಶಕ್ತಿಗೆ ''**ಮನಸ್ಸು**" ಎಂದು ಹೇಳುತ್ತಾರೆ.

ನಿರ್ಣಯಿಸುವ ಮತ್ತು ವಿವೇಚನಾಶಕ್ತಿಗೆ "**ಬುದ್ಧಿ**" ಎಂದು ಹೇಳುತ್ತಾರೆ.

ಕರ್ಮದ ಪ್ರಭಾವವು ಸ್ಮೃತಿಯ ಮೇಲೆ ಬೀಳುತ್ತದೆ. ಇದಕ್ಕೆ "**ಸಂಸ್ಕಾರ**" ವೆಂದು ಹೇಳುತ್ತಾರೆ.

ಸಂಕಲ್ಪಗಳ ಕೇಂದ್ರ ಸ್ಥಾನವೇ ಮನಸ್ಸು. ಹೇಗೆ ಸಂಕಲ್ಪವನ್ನು ಮಾಡುತ್ತೇವೋ ಅದರ ಆಧಾರದ ಮೇಲೆ ಚಿತ್ತದ ನಿರ್ಮಾಣವಾಗುತ್ತದೆ. ಅದೇ ವೃತ್ತಿಯಾಗುತ್ತದೆ. ಅದರ ಆಧಾರದಿಂದಲೇ ದೃಷ್ಟಿಕೋನವು ತಯಾರಾಗುತ್ತದೆ ಮತ್ತು ಆ ದೃಷ್ಟಿಕೋನದಿಂದ ವ್ಯವಹಾರ ನಡೆಯುತ್ತದೆ. ವ್ಯವಹಾರದಿಂದ ಒಳ್ಳೆಯ ಮತ್ತು ಕೆಟ್ಟ ಕರ್ಮಗಳಾಗುತ್ತವೆ.

ಆದುದರಿಂದ ಯೋಗದ ಪ್ರಯೋಗದಲ್ಲಿ ನಾವು ಸಂಕಲ್ಪಗಳ ಮೇಲೆ ಹೆಚ್ಚು ಗಮನವನ್ನು ಹರಿಸಬೇಕಾಗುತ್ತದೆ. ನಮ್ಮ ಶುದ್ಧ ಸಂಕಲ್ಪಗಳ ಆಧಾರದಿಂದ ಶುದ್ಧ ಪ್ರಕಂಪನಗಳು ಹರಡುತ್ತವೆ. ಅದರಿಂದ ಶುದ್ಧ ವಾತಾವರಣವು ನಿರ್ಮಾಣವಾಗುತ್ತದೆ. ಇದರಿಂದಲೇ ಒಳ್ಳೆಯ ಅನುಭವವೂ ಆಗುತ್ತದೆ.

ಆತ್ಮವು ಮೂಲತ: ಜ್ಞಾನಸ್ವರೂಪ, ಪವಿತ್ರ ಸ್ವರೂಪ, ಶಾಂತ ಸ್ವರೂಪ, ಪ್ರೇಮಸ್ವರೂಪ, ಸುಖಸ್ವರೂಪ, ಶಕ್ತಿಸ್ವರೂಪ, ಆನಂದ ಸ್ವರೂಪ ಮತ್ತು ದಿವ್ಯ ಗುಣಗಳಿಂದ ಸಂಪನ್ನವಾಗಿದೆ ಮತ್ತು ಪರಮಾತ್ಮನು ಈ ಎಲ್ಲಾ ಗುಣಗಳ ಮತ್ತು ಶಕ್ತಿಗಳ ಸಾಗರನಾಗಿದ್ದಾನೆ. ಯಾವಾಗ ನಾವು ನಮ್ಮನ್ನು ಆತ್ಮವೆಂದು ತಿಳಿದುಕೊಂಡು ಪರಮಾತ್ಮನನ್ನು ನೆನಪು ಮಾಡಲಾರಂಭಿಸುತ್ತೇವೋ ಆಗ ಪರಮಾತ್ಮನ ಈ ಎಲ್ಲಾ ಗುಣಗಳು ಹಾಗೂ ಶಕ್ತಿಗಳು ಆತ್ಮನಲ್ಲಿ ಪ್ರವೇಶಿಸಲಾರಂಭಿಸುತ್ತವೆ. ಆಗ ಆತ್ಮನು ಇವುಗಳನ್ನು ತನ್ನಲ್ಲಿ ತುಂಬಿಕೊಳ್ಳುತ್ತಿದ್ದೇನೆಂಬ ಅನುಭವ ಮಾಡಲಾರಂಭಿಸುತ್ತದೆ. ಈ ಸ್ಥಿತಿಯಲ್ಲಿ ಏಕಾಗ್ರತೆಯ ಅಭ್ಯಾಸವನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಮೊದಲು ಒಂದು ನಿಮಿಷ, ಎರಡು, ಮೂರು.... ಐದು.... ಹತ್ತು ನಿಮಿಷಗಳವರೆಗೆ ಏಕಾಗ್ರಚಿತ್ತರಾದರೆ ಈ ಗುಣ ಮತ್ತು ಶಕ್ತಿಗಳ ಪ್ರಕಂಪನವು ದೇಹದ ಮೂಲಕ ಹೊರಗಡೆಯಲ್ಲಿ ಪ್ರಸರಿಸುತ್ತವೆ ಮತ್ತು ಪ್ರಕೃತಿಯ ಜೊತೆಗೆ ಎಲ್ಲರಿಗೂ ಈ ಅನುಭವವಾಗಲಾರಂಭಿಸುತ್ತದೆ. ಇಂದು ಪೂರ್ಣ ವಿಶ್ವದಲ್ಲಿ ಪ್ರಕೃತಿಯಿಂದ ಜೀವ, ಜಂತು, ಪಶು, ಪಕ್ಷಿಗಳ, ಪ್ರಾಣಿ, ವೃಕ್ಷ, ವನಸ್ಪತಿಗಳ ಮೇಲೆ ನಮ್ಮ ವಿಚಾರಗಳ ಕೆಟ್ಟ ಪ್ರಭಾವು ಬೀಳತ್ತಿದೆ. ಏಕೆಂದರೆ ಈವರೆಗೆ ತಮ್ಮನ್ನು ದೇಹವೆಂದೇ ತಿಳಿದುಕೊಂಡು ವಿಚಾರ ಮಾಡುತ್ತಿದ್ದೇವೆ. ಆದರೆ ರಾಜಯೋಗದಲ್ಲಿ ಆತ್ಮಸ್ವರೂಪದಲ್ಲಿ ಸ್ಥಿತರಾಗಿ ಪರಮಾತ್ಮನ ಶಕ್ತಿಯನ್ನು ಅನುಭೂತಿ ಮಾಡುವುದರಿಂದ ಪ್ರಕೃತಿ ಮತ್ತು ಎಲ್ಲದರ ಮೇಲೂ ಅತ್ಯುತ್ತಮವಾದ ಪ್ರಭಾವ ಬೀರುತ್ತದೆ. ಏಕೆಂದರೆ ಇಲ್ಲಿ ನಮ್ಮ ವಿಚಾರಗಳು ಶುದ್ಧವಾಗಿರುತ್ತವೆ. ವಿಕಾರ ರಹಿತವಾಗಿರುತ್ತವೆ. ರಾಜಯೋಗದ ಮಾಧ್ಯಮದಿಂದ ವಿಶೇಷವಾಗಿ ನಾವು ನಮ್ಮ ಅನುಭವದ ಸ್ವರೂಪವನ್ನು ಯಾರಿಗೆ ಬೇಕಾದರೂ ಅನುಭವ ಮಾಡಿಸಬಹುದು ಮತ್ತು ಇದೇ ಪ್ರಯೋಗವನ್ನು ನಾವೀಗ ವೃಕ್ಷ, ವನಸ್ಪತಿಗಳ ಹಾಗೂ ಬೆಳೆಗಳ ಮೇಲೂ ಹರಿಸಬೇಕಾಗಿದೆ.

ಇಂದು ಅನೇಕ ರೈತರು ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳನ್ನು ಬಳಸುತ್ತಿದ್ದಾರೆ. ಇದರಿಂದ ಉತ್ಪಾದನೆಯು ಕಡಿಮೆಯಾಗುತ್ತದೆ. ಭೂಮಿಯ ಶಕ್ತಿಯು ಕಡಿಮೆಯಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಸಾವಯವ, ಜೈವಿಕ ಹಾಗೂ ಯೌಗಿಕ ಕೃಷಿ ಮಾಡುವುದರ ಅಗತ್ಯವಿದೆ. ಸಾವಯವ, ಜೈವಿಕ ಗೊಬ್ಬರದ ಬಳಕೆಯಿಂದ ಭೂಮಿಯು ಸಜೀವಗೊಳ್ಳುತ್ತದೆ ಮತ್ತು ರಾಜಯೋಗದ ಪ್ರಯೋಗದಿಂದ ಜಮೀನು ಹಾಗೂ ವನಸ್ಪತಿಗಳಿಗೆ ಹೆಚ್ಚಿನ ಪ್ರಮಾಣದ ಶಕ್ತಿಯು ದೊರೆಯುತ್ತದೆ. ಇದರಿಂದ ಉತ್ಪಾದನೆಯ ಕ್ವಾಲಿಟಿ (ಗುಣಮಟ್ಟ) ಮತ್ತು ಕ್ವಾಂಟಿಟಿ (ಪ್ರಮಾಣ)ಯು ಹೆಚ್ಚುತ್ತದೆ.

ರಾಜಯೋಗದ ಪ್ರಯೋಗವನ್ನು ಬೆಳೆಯ ಮೇಲೆ ಪ್ರಯೋಗಿಸುವ ಸಲುವಾಗಿ ಎಲ್ಲದಕ್ಕಿಂತ ಮೊದಲು ನಾವು ಪ್ರಕೃತಿಯ 5 ತತ್ವಗಳಾದ ಪೃಥ್ವಿ, ಜಲ, ಅನಿಲ, ಅಗ್ನಿ, ಆಕಾಶ ಹಾಗೂ ಎಲ್ಲಾ ಗ್ರಹ ಮತ್ತು ನಕ್ಷತ್ರಗಳೆಲ್ಲರಿಗೂ ಪರಮಾತ್ಮನ ಶಕ್ತಿಗಳ ಪ್ರಕಂಪನವನ್ನು ಹರಿಸುವುದು ಅತೀ ಅಗತ್ಯ. ಇವುಗಳ ಸಹಕಾರದಿಂದ ವನಸ್ಪತಿಗಳು ವೃದ್ಧಿಯಾಗುತ್ತವೆ. ಧಾನ್ಯಗಳು ಅಥವಾ ಫಲಗಳು ನಿರ್ಮಾಣವಾಗುತ್ತವೆ. ತದನಂತರ ಯಾವ ಜಮೀನಿನಿಂದ ಫಸಲನ್ನು ಪಡೆಯುವಿರೋ ಆ ಜಮೀನಿಗೆ ಪರಮಾತ್ಮನ ಶಕ್ತಿಗಳ ಪ್ರಕಂಪನವನ್ನಿತ್ತು ನಿರೋಗಿ ಮತ್ತು ಶಕ್ತಿಶಾಲಿಯನ್ನಾಗಿ ಮಾಡಿರಿ. ಮತ್ತು ಬೀಜಗಳನ್ನು ನಿರೋಗಿ ಹಾಗೂ ಶಕ್ತಿಶಾಲಿ ಗಿಡಗಳ ನಿರ್ಮಾಣಕ್ಕೆ ಯೋಗ್ಯವನ್ನಾಗಿ ಮಾಡಲು ಪರಮಾತ್ಮನ ಶಕ್ತಿಗಳಿಂದ ಬೀಜಗಳ ಒಳಗಿನ ಶಕ್ತಿಗೆ ಪ್ರೇರಣೆ ನೀಡುವುದು. ಬೀಜಗಳನ್ನು ಬಿತ್ತಿದ ನಂತರ

ಬೀಜಗಳು ಮೊಳಕೆಯಾಗುವಾಗ, ಗಿಡಗಳು ಬೆಳೆಯುವಾಗ, ಫಸಲಿನಲ್ಲಿ ಕಾಳುಗಳು ತುಂಬುವಾಗ, ಅಲ್ಲಿಂದ ಹಿಡಿದು ಧಾನ್ಯಗಳನ್ನು ಪಡೆಯುವತನಕ ಪ್ರತಿದಿನವೂ ಯೋಗದ ಪ್ರಯೋಗದ ಮೂಲಕ ಪರಮಾತ್ಮನ ಶಕ್ತಿಗಳ ಪ್ರಕಂಪನವನ್ನು ಜಮೀನು, ಬೀಜ, ಗಿಡ ಮತ್ತು ಧಾನ್ಯಗಳಿಗೆ ನೀಡುವುದು ಅಗತ್ಯ. ಕೀಟಗಳು, ರೋಗ, ಪಕ್ಷಿ, ಪ್ರಾಣಿಗಳಿಂದ ಫಸಲನ್ನು ರಕ್ಷಿಸಲು ಪರಮಾತ್ಮನ ಶಕ್ತಿಯ ಪ್ರಕಂಪನವನ್ನಿತ್ತು ಪೂರ್ಣ ಜಮೀನಿನಲ್ಲಿ ಬೆಳೆಯ ಸುತ್ತಲೂ ಕವಚದ ರೂಪದಲ್ಲಿ ಶಕ್ತಿಶಾಲಿಯಾದ ಆಭಾ ಮಂಡಲವನ್ನು ನಿರ್ಮಿಸುವುದು.

ಈ ಪ್ರಯೋಗವನ್ನು ಪ್ರತಿದಿನವೂ ಒಂದೇ ಸಮಯದಲ್ಲಿ, ಒಂದೇ ಜಾಗದಲ್ಲಿ ಕುಳಿತುಕೊಂಡು ಒಂದೇ ವಿಧಿಯಿಂದ ಮಾಡುವುದು. ಇದಕ್ಕಾಗಿ ಜಮೀನಿನಲ್ಲಾದರೂ ಕುಳಿತುಕೊಳ್ಳಿ ಅಥವಾ ಎಲ್ಲಿಯಾದರೂ ಕುಳಿತುಕೊಳ್ಳಿ. ಜಮೀನಿನಿಂದ ತುಂಬಾ ದೂರದಲ್ಲಿದ್ದರೂ, ಮನೆಯಲ್ಲಿ ಕುಳಿತುಕೊಂಡಾದರೂ ಮಾಡಬಹುದು. ಆದರೆ ಕೇವಲ ನಿಯಮ ಮತ್ತು ವಿಧಿಯಲ್ಲಿ ಬದಲಾವಣೆಯಾಗಬಾರದು. ಮೊದಲು 5 ತತ್ವಗಳಿಗೆ ಮತ್ತು ಗ್ರಹ, ನಕ್ಷತ್ರಗಳಿಗೆ, ಪ್ರಯೋಗ ಮಾಡುವ ಜಮೀನಿಗೆ ಮತ್ತು ಬೆಳೆಗೆ – ಹೀಗೆ ಯೋಗದ ಮೂಲಕ ಪರಮಾತ್ಮನ ಶಕ್ತಿಯ ಅನುಭೂತಿ ಮಾಡಿಸಬಹುದು.

ಇಡೀ ದಿನದಲ್ಲಿ ಯಾವಾಗ ಸಮಯ ಸಿಕ್ಕರೂ ಐದು ನಿಮಿಷಗಳಿಗಾಗಿ ಜಮೀನಿನಲ್ಲಿ ಅಥವಾ ಎಲ್ಲೇ ಕುಳಿತುಕೊಂಡಿದ್ದರೂ ಏಕಾಗ್ರತೆಯಿಂದ ಯೋಗದ ಅನುಭೂತಿ ಮಾಡಿ ಮತ್ತು ಜಮೀನು ಹಾಗೂ ಬೆಳೆಗೂ ಮಾಡಿಸಿ. ಅಂತಹ ಯೋಗಯುಕ್ತವಾದ ಸ್ಥಿತಿಯಿಂದ, ಸ್ನೇಹ ಮತ್ತು ಪ್ರೇಮದಿಂದ ಬೆಳೆಗೆ ದೃಷ್ಟಿಯಿಂದಲೇ ಸಂತೋಷ ನೀಡಿ. ತಮ್ಮ ಶುಭಭಾವನೆಗಳನ್ನು ಕೊಡುತ್ತಾ ಹೋಗಿ. ತಮ್ಮದೆಂದು ತಿಳಿದು ಮಾತನಾಡಿಕೊಳ್ಳಿ. ಭೂಮಿಯ ಜೊತೆ ತಾಯಿಯಂತೆ ಸಂಬಂಧ ಬೆಳೆಸಿ ಮಾತನಾಡಿ ಮತ್ತು ಬೆಳೆಯ ಜೊತೆ ಮಕ್ಕಳಂತೆ ಮಾತನಾಡಿರಿ. ಪ್ರೀತಿಯಿಂದಲೇ ಪಾಲಿಸಿರಿ.

ಜಮೀನಿನಲ್ಲಿ ಯಾವುದೇ ಕರ್ಮವನ್ನು ಮಾಡುತ್ತಿದ್ದರೂ, ಜಮೀನಿಗೆ ಗೊಬ್ಬರವನ್ನು ಮಿಶ್ರಣ ಮಾಡುವಾಗ ಅಥವಾ ಬೆಳೆಗೆ ನೀರನ್ನು ಹರಿಸುತ್ತಿರುವಾಗ, ಕಳೆಯನ್ನು ತೆಗೆಯುತ್ತಿರುವಾಗ, ಟಾನಿಕ್ ಅಥವಾ ಕೀಟನಾಶಕಗಳನ್ನು ಸಿಂಪಡಿಸುವಾಗ ತಾನು ಆತ್ಮ ಸ್ವರೂಪದಲ್ಲಿದ್ದುಕೊಂಡು ಪರಮಾತ್ಮ ತಂದೆಯ ನೆನಪಿನಲ್ಲಿ ಕರ್ಮವನ್ನು ಮಾಡುವುದರಿಂದ ಗೊಬ್ಬರ, ಟಾನಿಕ್ ಮತ್ತು ಕೀಟನಾಶಕಗಳ ಕಾರ್ಯದಕ್ಷತೆಯು ಹೆಚ್ಚುತ್ತದೆ ಮತ್ತು ತುಂಬಾ ಸುಂದರವಾದ ಹಾಗೂ ಚಮತ್ಕಾರದಿಂದ ಕೂಡಿದ ಫಲಿತಾಂಶವು ದೊರೆಯುತ್ತದೆ.

ಯೋಗದ ಪ್ರಯೋಗದಲ್ಲಿ ಸೂಕ್ಷ್ಮ ಶರೀರದ ಮೂಲಕ, ತಾವು ಪ್ರಯೋಗ ಮಾಡುವ ಜಮೀನನ್ನು ಸೂಕ್ಷ್ಮವತನಕ್ಕೆ ಬಾಪದಾದಾ (ಬ್ರಹ್ಮಾ ಹಾಗೂ ಪರಮಾತ್ಮ ಶಿವ) ರವರ ಮುಂದಕ್ಕೆ ಕೊಂಡೊಯ್ದು ಅವರ ಮುಖಾಂತರ ಪ್ರಕಂಪನವನ್ನು ಕೊಡಿಸಿ. ಜಮೀನು ಮತ್ತು ಫಸಲನ್ನು ಇನ್ನಷ್ಟು ಶಕ್ತಿಶಾಲಿಯನ್ನಾಗಿ ಮಾಡಿರಿ. (ಸೂಕ್ಷ್ಮವತನ – ಆತ್ಮದ ಸಂಪೂರ್ಣ ಸ್ವರೂಪ ಈ ಸಾಕಾರ ಜಗತ್ತಿಗಿಂತಲೂ ಮೇಲೆ ಸೂಕ್ಷ್ಮ ಜಗತ್ತಿನಲ್ಲಿ ವಾಸಿಸುತ್ತವೆ. ಅದನ್ನು ಪ್ರಕಾಶವತನ, ಅವ್ಯಕ್ತವತನ ಅಥವಾ ಸೂಕ್ಷ್ಮವತನವೆನ್ನುತ್ತಾರೆ.)

ಕೆಲವೊಮ್ಮೆ ತಮ್ಮ ಶಕ್ತಿಶಾಲಿ ಶುಭ ಸಂಕಲ್ಪಗಳ ಮಾಧ್ಯಮದಿಂದ ತಾವು ಪ್ರಯೋಗ ನಡೆಸುವ ಜಮೀನಿನ ಫಸಲನ್ನು ಪರಮಧಾಮದ ಆಳವಾದ ಶಕ್ತಿಗಳ ಪ್ರಕಂಪನದಿಂದ ನಿರೋಗಿ ಮತ್ತು ಶಕ್ತಿಶಾಲಿಯನ್ನಾಗಿ ಮಾಡಬಹುದು. (ಸೂಕ್ಷ್ಮಲೋಕಕ್ಕಿಂತಲೂ ಮೇಲೆ ಇರುವುದೇ ಪರಮಧಾಮ, ಬ್ರಹ್ಮಾಂಡ, ಕೆಂಪು ಸುವರ್ಣ ಮಿಶ್ರಿತ ಬಣ್ಣದಿಂದ ಪ್ರಕಾಶಿಸುತ್ತಿದೆ.ಅದೇ ಆತ್ಮ ಮತ್ತು ಪರಮಾತ್ಮರ ಮೂಲಸ್ಥಾನ.)

ಹಾಗೆಯೇ ಕೆಲವೊಮ್ಮೆ ಬಾಪದಾದಾರವರನ್ನು ಈ ಲೋಕಕ್ಕೆ ಆಹ್ವಾನಿಸಿ ಜಮೀನು ಮತ್ತು ಫಸಲನ್ನು

ಬಾಪದಾದಾರವರ ದೃಷ್ಟಿಯಿಂದ ತೃಪ್ತಿಪಡಿಸಬಹುದು. ತಮ್ಮ ಶಕ್ತಿಗಳಿಂದ ನಿರೋಗಿ ಮತ್ತು ಶಕ್ತಿಶಾಲಿಯನ್ನಾಗಿ ಮಾಡಬಹುದು. ಇಂತಹ ಅಭ್ಯಾಸ ಮತ್ತು ಅನುಭವ ಮಾಡಿರಿ. (ಬಾಪದಾದಾ – ಪರಮಾತ್ಮ ಶಿವನು ಬ್ರಹ್ಮಾರವರ ಮಾಧ್ಯಮದ ಮುಖಾಂತರ ಜ್ಞಾನವನ್ನು ನೀಡುತ್ತಿದ್ದಾನೆ. ಇಬ್ಬರನ್ನು ಒಟ್ಟಾಗಿ ಬಾಪದಾದಾ ಎನ್ನುತ್ತೇವೆ.)

ಕೆಲವೊಮ್ಮೆ ಹೀಗೂ ಅಭ್ಯಾಸ ಮಾಡಬಹುದು – ನಾವು ಪ್ರಯೋಗ ಮಾಡುವ ಜಮೀನು ವಿಶ್ವದ ಗೋಳದ ಮೇಲಿದೆ ಮತ್ತು ಪರಮಧಾಮವು ಕೆಳಕ್ಕೆ ಬಂದಿದೆ. ಪರಮಧಾಮದ ಆಳವಾದ ಶಾಂತಿಯ ಶಕ್ತಿಯ ಅನುಭೂತಿಯು ಜಮೀನು ಮತ್ತು ಫಸಲಿಗೂ ಸಿಗುತ್ತಿದೆ. ಏಕದಂ ಪವಿತ್ರತೆ, ಶಾಂತಿ ಮತ್ತು ಶಕ್ತಿಶಾಲಿಯಾದ ವಾತಾವರಣದಲ್ಲಿ ಬೆಳೆಯು ಬೆಳೆಯುತ್ತಿದೆ ಎಂದು ಅನುಭೂತಿ ಮಾಡಬಹುದು.

ಮನೆಯಲ್ಲಿ ಕುಳಿತುಕೊಂಡೇ ತಮ್ಮ ಸೂಕ್ಷ್ಮ ಫರಿಸ್ಥಾ ಸ್ವರೂಪದ ಮುಖಾಂತರ ಜಮೀನಿನ ಹತ್ತಿರ ಹೋಗಿ ಸ್ನೇಹ ಮತ್ತು ಪ್ರೀತಿಯಿಂದ, ಶ್ರೇಷ್ಠ ಶಕ್ತಿಶಾಲಿ ಸಂಕಲ್ಪಗಳಿಂದ ಪ್ರಕಂಪನವನ್ನೀಯಬಹುದು. ಮತ್ತೆ ಕೆಲವು ವಿಶೇಷ ಆತ್ಮಗಳನ್ನು ಆಹ್ವಾನಿಸಿ ಜಮೀನು ಮತ್ತು ಫಸಲಿಗೆ ಪ್ರಕಂಪನವನ್ನು ಮಾಡಿಸಬಹುದು.

ಸಮಯಕ್ಕನುಗುಣವಾಗಿ ಜಮೀನಿನಲ್ಲಿ 15 ದಿನಗಳಿಗೊಮ್ಮೆ ಅಥವಾ ತಿಂಗಳಿಗೊಮ್ಮೆ ಸಂಘಟನೆಯಲ್ಲಿ ಕುಳಿತು ಯೋಗಾಭ್ಯಾಸವನ್ನು ಮಾಡುವುದರಿಂದ ವಾತಾವರಣವನ್ನು ಶುದ್ಧ ಹಾಗೂ ಶಕ್ತಿಶಾಲಿಯನ್ನಾಗಿ ಮಾಡಲು ಸಾಧ್ಯವಾಗುತ್ತದೆ. ಹಾಗೆಯೇ ಆತ್ಮದ ಮೂಲಗುಣಗಳ ಆಧಾರದ ಮೇಲೆ ರಾಜಯೋಗದ ಅಭ್ಯಾಸ ಮಾಡಿ. ಮುಂದೆ ಏಳು ಗುಣಗಳ ಪ್ರಯೋಗದಿಂದಾಗುವ ಲಾಭವನ್ನು ತಿಳಿಸಲಾಗಿದೆ.

1) **ಜ್ಞಾನ ಸ್ವರೂಪ** :– ಯಾವಾಗ ನಾವು ಆತ್ಮಗಳು ಜ್ಞಾನ ಸ್ವರೂಪಿಗಳಾಗಿ ಜ್ಞಾನ ಸೂರ್ಯ ಪರಮಾತ್ಮನ ನೆನಪಿನಲ್ಲಿ ಮನಸ್ಸನ್ನು ಏಕಾಗ್ರಗೊಳಿಸುತ್ತೇವೋ ಆಗ ವನಸ್ಪತಿ(ಗಿಡ)ಗಳನ್ನು ಬೆಳೆಸಲು ಯಾವ ವಸ್ತುವಿನ ಅವಶ್ಯಕತೆ ಬೀಳುತ್ತದೋ ಅದರ ಗಳಿಕೆಯು ಜಮೀನಿನಲ್ಲಿ ಹೆಚ್ಚುತ್ತದೆ ಮತ್ತು ವನಸ್ಪತಿಯು ಆ ಗಳಿಕೆಯನ್ನು ಹುಡುಕಲಾರಂಭಿಸುತ್ತದೆ. ವನಸ್ಪತಿಯು ತನ್ನ ಅವಶ್ಯಕತೆಯ ಗಳಿಕೆಯನ್ನು ವೃದ್ಧಿ ಮಾಡಿಕೊಳ್ಳಲು ಭೂಮಿಗೆ ಬೇರಿನ ಮೂಲಕ ಸೂಚನೆ ನೀಡುತ್ತದೆ. ಈ ಅಭ್ಯಾಸದಲ್ಲಿ ಏಕಾಗ್ರಚಿತ್ತರಾದಾಗ ಆತ್ಮದ ಮುಖಾಂತರ ಹೊರಬರುವ ಪ್ರಕಂಪನವು ವನಸ್ಪತಿಯವರೆಗೆ ತಲುಪುತ್ತದೆ. ಆಗ ವನಸ್ಪತಿಯೊಳಗಿನ ಎಲ್ಲಾ ಕ್ರಿಯೆಗಳು ಪ್ರೇರಣಾತ್ಮಕವಾಗಿ ನಡೆಯುತ್ತವೆ. ಭೂಮಿಯೊಳಗಿಂದ ಆಹಾರದ ಅಂಶವು ಬೇರಿನ ಮೂಲಕ ಎಲೆಗಳವರೆಗೆ ತಲುಪುವುದು. ಆಹಾರವು ತಯಾರಾಗುವುದು ಮತ್ತು ತಯಾರಾದ ಆಹಾರವು ವನಸ್ಪತಿಯಲ್ಲಿ ತನ್ನ ಸ್ಥಳಕ್ಕೆ ಸೇರುವುದು. ಈ ಎಲ್ಲಾ ಕಾರ್ಯಗಳಲ್ಲೂ ಯಾವ ಅಡ್ಡಿ ಆತಂಕಗಳು ಬರುವುದಿಲ್ಲ. ವನಸ್ಪತಿಗಳಲ್ಲಿ ಆಹಾರದ ವೃದ್ಧಿಯಾಗುವ ಕಾರ್ಯವು ಈ ಅಭ್ಯಾಸದಿಂದ ತುಂಬಾ ಲಾಭವಾಗುತ್ತದೆ.

ಒಂದು ಪ್ರಯೋಗ – ಒಂದು ಪಾತ್ರೆಯಲ್ಲಿ ನೀರನ್ನು ತೆಗೆದುಕೊಳ್ಳಿ. ಅದರಲ್ಲಿ ತಮ್ಮ ಬಲಗೈ ಬೆರಳುಗಳನ್ನಿಟ್ಟು ಈ ಅಭ್ಯಾಸವನ್ನು ಮಾಡಿರಿ – ನಾನು ಆತ್ಮ ಜ್ಞಾನ ಸ್ವರೂಪಿಯಾಗಿದ್ದೇನೆ. ಜ್ಞಾನ ಸೂರ್ಯನ ಕಿರಣಗಳು ನಾನು ಆತ್ಮದ ಮುಖಾಂತರ ಬೆರಳುಗಳ ಮಾಧ್ಯಮದಿಂದ ಈ ನೀರಿಗೆ ಹೋಗುತ್ತಿವೆ..... ಕೊನೆ ಪಕ್ಷ 10 ನಿಮಿಷಗಳ ಕಾಲ ಏಕಾಗ್ರಚಿತ್ತರಾಗಿ ಈ ಒಂದೇ ಸಂಕಲ್ಪದಲ್ಲಿ ಸ್ಥಿತರಾಗಿರಿ. ಮತ್ತೆ ಆ ನೀರನ್ನು ಬೆಳೆಗಳ ಮೇಲೆ ಸಿಂಪಡಿಸಿರಿ. ಇದರಿಂದಲೂ ಸಾಕಷ್ಟು ಲಾಭವಾಗುತ್ತದೆ. (ಇಂತಹ ಭಾವನಾತ್ಮಕ ಪ್ರಯೋಗವು ಕೂಡಾ ತುಂಬಾ ಸಫಲವಾಗಿದೆ.)

2) **ಪವಿತ್ರ ಸ್ವರೂಪ** :– ನಾವು ಆತ್ಮಗಳು ಪವಿತ್ರ ಸ್ವರೂಪದಲ್ಲಿ ಸ್ಥಿತರಾಗಿ ಪವಿತ್ರ ಸಾಗರನ ನೆನಪಿನಲ್ಲಿ ಏಕಾಗ್ರರಾಗುತ್ತೇವೋ ಆಗ ಪರಮಾತ್ಮನಿಂದ ನಮ್ಮ ಮೂಲಕ ಹೊರ ಬರುವಂತಹ ಪವಿತ್ರ ಪ್ರಕಂಪನಗಳು ಜಮೀನು ಅಥವಾ ವನಸ್ಪತಿ (ಗಿಡ)ಗಳ ಮೇಲೆ ಹರಿದು ಮಾಲಿನ್ಯದಿಂದಾಗುತ್ತಿದ್ದ ಅಪವಿತ್ರ ಕೀಟಾಣು

(ಮುಗ್ಗಲುರೋಗ, ವೈರಸ್)ಗಳನ್ನು ನಾಶ ಮಾಡುತ್ತದೆ ಮತ್ತು ಜಮೀನು ಮತ್ತು ವನಸ್ಪತಿಯು ನಿರೋಗಿಯಾಗುತ್ತದೆ. ಈ ಪವಿತ್ರ ಪ್ರಕಂಪನದಿಂದ ವನಸ್ಪತಿಗಳ ಮೇಲೆ ಯಾವ ಕೀಟಾಣು ಅಥವಾ ರೋಗಗಳು ಬರುತ್ತಿದ್ದವ್ರೋ ಅವುಗಳನ್ನು ಪರಿಹರಿಸಲು ವನಸ್ಪತಿಗಳಲ್ಲಿ ಒಂದು ವಿಶೇಷ ಬಗೆಯ ಶಕ್ತಿಯು ನಿರ್ಮಾಣವಾಗುತ್ತದೆ. ಅದು ಈ ಕೀಟ ಅಥವಾ ರೋಗಾಣುಗಳನ್ನು ಬೆಳೆಯಲು ಬಿಡುವುದಿಲ್ಲ.

ಹಾಗೇನಾದರೂ ನಾವು ನೀರಲ್ಲಿ ಬಲಗೈಯನ್ನಿಟ್ಟು ಪವಿತ್ರ ಸ್ವರೂಪದಲ್ಲಿ ಸ್ಥಿತರಾಗಿ ಪವಿತ್ರ ಸಾಗರ ಪರಮಾತ್ಮನಲ್ಲಿ ಮನಸ್ಸು–ಬುದ್ಧಿಯನ್ನು 10 ನಿಮಿಷಗಳ ಕಾಲ ಏಕಾಗ್ರಗೊಳಿಸಿ ನೆನಪು ಮಾಡಿ ಆ ಜಲವನ್ನು ಫಸಲಿನ ಮೇಲೆ ಸಿಂಪಡಿಸಬಹುದು ಅಥವಾ ಜಮೀನಿಗೆ ಹರಿಸಿದ್ದಾದರೆ ರೋಗವನ್ನು ನಿಯಂತ್ರಿಸಬಹುದು.

3) **ಶಾಂತ ಸ್ವರೂಪ** :– ನಾವು ಆತ್ಮಗಳು ಶಾಂತ ಸ್ವರೂಪದಲ್ಲಿ ಸ್ಥಿತರಾಗಿ ಶಾಂತಿ ಸಾಗರನ ನೆನಪಿನಲ್ಲಿ ಮನಸ್ಸನ್ನು ಏಕಾಗ್ರಗೊಳಿಸಿದ್ದಾದರೆ ಆ ಶಾಂತಿಯ ಪ್ರಕಂಪನವು ಭೂಮಿ ಮತ್ತು ಫಸಲಿಗೆ ಸಿಗಲಾರಂಭಿಸುತ್ತದೆ. ಮಾಲಿನ್ಯದಿಂದ ಭೂಮಿ ಮತ್ತು ವನಸ್ಪತಿಗಳಲ್ಲಿ ಉತ್ಪನ್ನವಾಗುವ ಒತ್ತಡವು ಈ ಶಾಂತಿಯ ಪ್ರಕಂಪನದಿಂದ ದೂರವಾಗುತ್ತದೆ. ಮತ್ತು ಭೂಮಿಯಲ್ಲಿರುವ ಜೀವಾಣುಗಳ ಕಾರ್ಯವು ವ್ಯವಸ್ಥಿತವಾಗಿ ನಡೆಯಲಾರಂಭಿಸುತ್ತದೆ. ವನಸ್ಪತಿಗಳಲ್ಲಿ ದ್ಯುತಿ ಸಂಶ್ಲೇಷಣೆಯ ಕಾರ್ಯ ಮತ್ತು ಶ್ವಾಸ ಕ್ರಿಯೆಯು ಚೆನ್ನಾಗಿ ನಡೆಯುತ್ತದೆ. ಹರಿತ್ತಿನ ಪ್ರಮಾಣವು ವೃದ್ಧಿಯಾಗುತ್ತದೆ ಮತ್ತು ವನಸ್ಪತಿಯೊಳಗಿನ ಕ್ರಿಯೆಯು (ಶಕ್ತಿಯ ಕಾರ್ಯ) ಸುವ್ಯವಸ್ಥಿತವಾಗಿ ನಡೆಯುತ್ತದೆ.

ನಾವು ನೀರಿನಲ್ಲಿ ಬಲಗೈಯನ್ನಿಟ್ಟುಕೊಂಡು ಶಾಂತ ಸ್ವರೂಪರಾಗಿ ಶಾಂತ ಸಾಗರನ ನೆನಪಿನಲ್ಲಿ ಹತ್ತು ನಿಮಿಷಗಳ ಕಾಲ ಏಕಾಗ್ರಚಿತ್ತರಾಗಿ ಶಾಂತಿಯ ತರಂಗಗಳನ್ನು ಹರಿಸಿ ಆ ನೀರನ್ನು ಜಮೀನು ಅಥವಾ ಬೆಳೆಯ ಮೇಲೆ ಸಿಂಪಡಿಸಿದ್ದಾದರೆ ತುಂಬಾ ಲಾಭವಾಗುತ್ತದೆ.

4) **ಪ್ರೇಮ ಸ್ವರೂಪ** :– ನಾವು ಆತ್ಮಗಳು ಪ್ರೇಮ ಸ್ವರೂಪದಲ್ಲಿ ಸ್ಥಿತರಾಗಿ ಪ್ರೇಮ ಸಾಗರನ ನೆನಪಿನಲ್ಲಿ ಮುಳುಗಿಹೋಗುತ್ತೇವೆ. ಆಗ ಭೂಮಿ ಮತ್ತು ವನಸ್ಪತಿಗಳಿಗೂ ಕೂಡ ಪ್ರೇಮದ ಅನುಭೂತಿಯಾಗಲಾರಂಭಿಸುತ್ತದೆ. ಆ ಜಮೀನುಗಳಲ್ಲಿ ವನಸ್ಪತಿಗಳನ್ನು ವೃದ್ಧಿಗೊಳಿಸಲಿಕ್ಕಾಗಿ ಅವಶ್ಯಕ ಜೀವಸತ್ವದ ನಿರ್ಮಾಣ ಮಾಡುವ ಶಕ್ತಿಯು ವೃದ್ಧಿಯಾಗುತ್ತದೆ. ವನಸ್ಪತಿಗಳಲ್ಲಿ ಯಾವ ಕ್ರಿಯೆ ನಡೆಯುತ್ತದೋ, ಆಹಾರವನ್ನು ಸ್ವೀಕರಿಸುವ, ಬೆಳವಣಿಗೆಗೆ ಪ್ರೋತ್ಸಾಹಿಸುವ, ದ್ಯುತಿ ಸಂಶ್ಲೇಷಣೆ ಹಾಗೂ ಶ್ವಾಸ ಕ್ರಿಯೆ ಇತ್ಯಾದಿಗಳಿಗೆ ಸಾಕಷ್ಟು ಅವಕಾಶವು ಸಿಕ್ಕುವುದರಿಂದ ಪ್ರೇಮದ ಪ್ರಕಂಪನಗಳಿಂದ ತುಂಬಾ ಸಹಾಯವಾಗುತ್ತದೆ. ನಮ್ಮ ಶುದ್ಧ ಭಾವನೆಗಳ ಪ್ರಭಾವವು ಈ ಅಭ್ಯಾಸದ ಮುಖಾಂತರ ಸಹಜವಾಗಿ ದೊರೆಯುತ್ತದೆ.

ನೀರಿನಲ್ಲಿ ಬೆರಳನ್ನಿಟ್ಟುಕೊಂಡು ಪ್ರೇಮ ಸ್ವರೂಪದಲ್ಲಿ ಸ್ಥಿತರಾಗಿ ಪ್ರೇಮ ಸಾಗರನ ನೆನಪಿನಲ್ಲಿ ಹತ್ತು ನಿಮಿಷಗಳ ಕಾಲ ಏಕಾಗ್ರಚಿತ್ತರಾಗಿ ಪ್ರೀತಿಯತರಂಗಗಳನ್ನು ಹರಿಸಿದ ಶುದ್ಧ ಜಲವನ್ನು ಭೂಮಿ ಅಥವಾ ಫಸಲಿನ ಮೇಲೆ ಸಿಂಪಡಿಸುವುದರಿಂದ ತುಂಬಾ ಲಾಭವಾಗುತ್ತದೆ.

5) **ಸುಖ ಸ್ವರೂಪ** :– ನಾವು ಆತ್ಮಗಳು ಸುಖ ಸ್ವರೂಪದಲ್ಲಿ ಏಕಾಗ್ರಚಿತ್ತರಾಗಿ ಸುಖ ಸಾಗರನನ್ನು ನೆನಪು ಮಾಡಲಾರಂಭಿಸುತ್ತೇವೆ. ಆಗ ಪರಮಾತ್ಮನಿಂದ ಬಂದ ಸುಖದ ತರಂಗಗಳು ಆತ್ಮದ ಮುಖಾಂತರ ಜಮೀನಿನಲ್ಲಿ ಜೀವಾಣುಗಳನ್ನು ವೃದ್ಧಿಗೊಳಿಸುತ್ತವೆ. ಹೆಚ್ಚಿನ ಸಮಯದವರೆಗೆ ಕಾರ್ಯ ಶಕ್ತಿಯು ವೃದ್ಧಿಯಾಗುತ್ತದೆ ಮತ್ತು ವನಸ್ಪತಿಗಳಲ್ಲಿ ಕಾಂಡ ಮತ್ತು ಕೊಂಬೆಗಳು ವೃದ್ಧಿಯಾಗುತ್ತವೆ. ಹಾಗೂ ಧಾನ್ಯ ಅಥವಾ ಫಸಲಿನ ಆಕಾರವು ದೊಡ್ಡದಾಗುತ್ತದೆ ಮತ್ತು ಪುಷ್ಟಿದಾಯಕವಾಗಿರುತ್ತದೆ.

ನೀರಿನಲ್ಲಿ ಬೆರಳುಗಳನ್ನಿಟ್ಟು ಸುಖ ಸ್ವರೂಪದಲ್ಲಿ ಸ್ಥಿತರಾಗಿ 10 ನಿಮಿಷಗಳ ಕಾಲ ಸುಖ ಸಾಗರನ ನೆನಪಿನಿಂದ ಹರಿಯುವ ಕಿರಣಗಳಿಂದ ಸಂಪನ್ನವಾದ ನೀರನ್ನು ಬೆಳೆಗಳ ಮೇಲೆ ಸಿಂಪಡಿಸಿದರೆ, ಪ್ರತ್ಯಕ್ಷ ಪ್ರಮಾಣವನ್ನು ನೋಡಬಹುದು.

6) **ಆನಂದ ಸ್ವರೂಪ** :– ಆತ್ಮಗಳಾದ ನಾವು ಯಾವಾಗ ಆನಂದದ ಸ್ವರೂಪದಲ್ಲಿ ಸ್ಥಿತರಾಗಿ ಆನಂದ ಸಾಗರನಲ್ಲಿ ಮುಳುಗಿ ಹೋಗುತ್ತೇವೋ ಆಗ ಜಮೀನಿನೊಳಗಿನ ಪುಷ್ಟಿಕಾರಕ ಸತ್ವ (ಹಾರ್ಮೋನ್ಸ್)ಗಳು ವೃದ್ಧಿಯಾಗುತ್ತವೆ. ವನಸ್ಪತಿಗಳಲ್ಲಿ ಹೂವು ಹಣ್ಣುಗಳ ಬೆಳವಣಿಗೆಯು ತುಂಬಾ ಚೆನ್ನಾಗಿರುತ್ತದೆ. ವನಸ್ಪತಿಗಳಲ್ಲಿ ತೇಜಸ್ಸು ಬರುತ್ತದೆ. ಹಣ್ಣು ಮತ್ತು ಕಾಳುಗಳಲ್ಲಿ ಹೊಳಪು ಬರುತ್ತದೆ ಮತ್ತು ರುಚಿಕರವಾಗಿರುತ್ತದೆ. ಈ ಆನಂದದ ತರಂಗಗಳಿಂದ ಪುನರುತ್ಪಾದನಾ ಶಕ್ತಿಯು ವನಸ್ಪತಿಗಳಿಗೆ ದೊರೆಯುತ್ತದೆ.

ನೀರಿನಲ್ಲಿ ಬೆರಳುಗಳನ್ನಿಟ್ಟು ಆನಂದ ಸ್ವರೂಪದಲ್ಲಿ ಸ್ಥಿತರಾಗಿ 10 ನಿಮಿಷಗಳ ಕಾಲ ಆನಂದ ಸಾಗರನ ನೆನಪಿನಿಂದ ಹರಿಯುವ ಕಿರಣಗಳಿಂದ ಸಂಪನ್ನವಾದ ನೀರನ್ನು ಬೆಳೆಗಳ ಮೇಲೆ ಸಿಂಪಡಿಸಿದರೆ, ಪ್ರತ್ಯಕ್ಷ ಪ್ರಮಾಣವನ್ನು ನೋಡಬಹುದು.

7) **ಶಕ್ತಿ ಸ್ವರೂಪ** :– ಆತ್ಮನು ಶಕ್ತಿ ಸ್ವರೂಪಿಯಾಗಿ ಸರ್ವ ಶಕ್ತಿವಾನ್ ಪರಮಾತ್ಮನ ನೆನಪಿನಲ್ಲಿ ಮಗ್ನರಾದಾಗ ಆತ್ಮದ ಮುಖಾಂತರ ಹೊರಬರುವ ಶಕ್ತಿಗಳ ಪ್ರಕಂಪನಗಳೂ ಭೂಮಿಯನ್ನು ಶಕ್ತಿಶಾಲಿಯನ್ನಾಗಿ ಮಾಡುತ್ತವೆ. ಬೆಳೆಯಲ್ಲಿ ಯೋಗ್ಯ ಜೀವಾಣುಗಳ ಸಂಖ್ಯೆಯು ಹೆಚ್ಚುತ್ತಾ ಹೋಗುತ್ತದೆ. ವನಸ್ಪತಿಗಳು ಸದೃಢವಾಗಿ ಶಕ್ತಿಶಾಲಿಯಾಗಿ ಬೆಳೆಯುತ್ತವೆ. ಯಾವುದೇ ರೋಗ ಅಥವಾ ವೈರಸ್‌ಗಳ ಪ್ರಭಾವವು ವನಸ್ಪತಿಯ ಮೇಲೆ ಬೀಳುವುದಿಲ್ಲ. ಉತ್ಪಾದನೆಯನ್ನು ಹೆಚ್ಚಿಸಲಿಕ್ಕಾಗಿ ನಮ್ಮ ಶಕ್ತಿಶಾಲಿ ಪ್ರಕಂಪನಗಳು ತುಂಬಾ ಸಹಕಾರಿಯಾಗುತ್ತವೆ.

ನೀರಿನಲ್ಲಿ ಬೆರಳುಗಳನ್ನಿಟ್ಟು ಶಕ್ತಿ ಸ್ವರೂಪದಲ್ಲಿ ಸ್ಥಿತರಾಗಿ 10 ನಿಮಿಷಗಳ ಕಾಲ ಸರ್ವ ಶಕ್ತಿವಾನ್ ಪರಮಾತ್ಮನ ನೆನಪಿನಿಂದ ಹರಿಯುವ ಕಿರಣಗಳಿಂದ ಸಂಪನ್ನವಾದ ನೀರನ್ನು ಬೆಳೆಗಳ ಮೇಲೆ ಸಿಂಪಡಿಸಿದರೆ, ಪ್ರತ್ಯಕ್ಷ ಪ್ರಮಾಣವನ್ನು ನೋಡಬಹುದು.

8) **ದಿವ್ಯ ಗುಣಗಳು** :– ಹೀಗೆ ದಿವ್ಯ ಗುಣಗಳು ಅನುಭೂತಿಯನ್ನು ಪರಮಾತ್ಮನ ನೆನಪಿನಲ್ಲಿ ಮಾಡುವುದರಿಂದ ಧಾನ್ಯದ ಉತ್ಪಾದನೆಯಲ್ಲಿ ಸಾತ್ವಿಕತೆ ಬರುತ್ತದೆ. ಆ ಧಾನ್ಯಗಳು ಆಹಾರದ ರೂಪದಲ್ಲಿ ಮನಸ್ಸಿನ ಮೇಲೆ ಪ್ರಭಾವಿಸುತ್ತವೆ. ಏಕೆಂದರೆ "ಅನ್ನದಂತೆ ಮನಸ್ಸು, ಮನಸ್ಸಿನಂತೆ ದೇಹ" ಎಂಬ ಗಾದೆಯು ಇದೆ. ಈ ರೀತಿ ರಾಜಯೋಗವು ಒಂದು ಸಂಪೂರ್ಣವಾದ ವಿಜ್ಞಾನವಾಗಿದೆ. ಮನಸ್ಸು ಸೂಕ್ಷ್ಮ ಶಕ್ತಿಗಳ ಭಂಡಾರವಾಗಿದೆ. ರಾಜಯೋಗದ ಶಕ್ತಿಯು ಮಹಾನ್ ಕಾರ್ಯವನ್ನು ಮಾಡುತ್ತದೆ ಏಕೆಂದರೆ ಇದು ವಿಜ್ಞಾನಕ್ಕಿಂತಲೂ ಶ್ರೇಷ್ಠವಾದ ವಿಜ್ಞಾನವಾಗಿದೆ

## ಶಾಶ್ವತ ಯೌಗಿಕ ಜೈವಿಕ ಬೇಸಾಯದಿಂದಾಗಿರುವ ಲಾಭಗಳು

1. ಯೋಗದ ಪ್ರಕಂಪನದಿಂದ ಸೂಕ್ಷ್ಮಜೀವ ಜಂತುಗಳು ಶಕ್ತಿಶಾಲಿ ಹಾಗೂ ವೇಗವರ್ಧಕವಾಗುತ್ತವೆ.
2. ಜೈವಿಕ ಘಟಕಗಳ ಸದ್ಬಳಕೆಯಿಂದ ರೋಗ ಹಾಗೂ ಕೀಟಗಳನ್ನು ನಿಯಂತ್ರಿಸಬಹುದು. ಜೈವಿಕ ಗೊಬ್ಬರ ಮತ್ತು ವನಸ್ಪತಿಗಳ ಎಲೆಗಳ ಸಾರದಿಂದ ಬೆಳೆಯ ರೋಗ ಹಾಗೂ ಕೀಟಗಳನ್ನು ನಿಯಂತ್ರಿಸಬಹುದು.
3. ಬೆಳೆಯ ಅವಶೇಷಗಳ ಮುಖಾಂತರ ಕಾಂಪೋಸ್ಟ್, ಸಗಣಿಯ ಗೊಬ್ಬರ, ಸಾವಯವ, ಜೈವಿಕ ಗೊಬ್ಬರ ಹಾಗೂ ಎರೆಹುಳುವಿನ ಗೊಬ್ಬರ ತಯಾರಿಕೆ ಹಾಗೂ ಜೈವಿಕ ಕೀಟನಾಶಕಗಳಿಂದ ಬೆಳೆಯ ಸಾಮರ್ಥ್ಯವು ಹೆಚ್ಚುತ್ತದೆ ಮತ್ತು ಭೂಮಿಯ ಆರೋಗ್ಯವು ಸ್ಥಿರವಾಗಿರುತ್ತದೆ.

**ಕೀಟಗಳು ಬರುವುದಾದರೂ ಎಲ್ಲಿ? ಪವಿತ್ರ ಪ್ರೇಮದ ತರಂಗಗಳಿರುವಲ್ಲಿ**

4. ಕಡಿಮೆ ಶ್ರಮಪಟ್ಟರೂ ರಾಜಯೋಗದ ಮೂಲಕ ಭೂಮಿ ಮತ್ತು ಬೆಳೆಗಳ ಜೊತೆ ಹೊಂದಿಕೊಂಡಿರುವ ಸಜೀವ ಜಂತುಗಳ ಶಕ್ತಿಯನ್ನು ವೃದ್ಧಿಗೊಳಿಸುತ್ತಾ ಸೂಕ್ಷ್ಮ ಜಂತುಗಳನ್ನು ಹೆಚ್ಚು ಸಕ್ರೀಯಗೊಳಿಸಬಹುದು.
5. ಜಮೀನು ಮತ್ತು ಮನೆಯಲ್ಲಿ ಉಳಿಯುವ ಅವಶೇಷಗಳನ್ನು ಬಳಸಿಕೊಂಡಾಗ ಭೂಮಿಯ ಉತ್ಪಾದನಾ ಶಕ್ತಿಯು ಸ್ಥಿರವಾಗಿರುತ್ತದೆ. ಬೆಳೆಯಲ್ಲಿ ಶುದ್ಧ, ರುಚಿಕರ, ಪುಷ್ಟಿದಾಯಕ, ಪ್ರದೂಷಣಾರಹಿತವಾದ ಸ್ವಚ್ಛ, ಸಾತ್ವಿಕ ಆಹಾರ ಧಾನ್ಯಗಳನ್ನು ಉತ್ಪಾದನೆ ಮಾಡಬಹುದು.
6. ರಾಸಾಯನಿಕ ಗೊಬ್ಬರ ಮತ್ತು ಕೀಟ ನಾಶಕಗಳ ಬಳಕೆಯನ್ನು ನಿಲ್ಲಿಸುವುದರಿಂದ ಭೂಮಿ, ನೀರು ಮತ್ತು ವಾತಾವರಣವು ಕೆಡುವುದಿಲ್ಲ.
7. ವಿಶೇಷವಾಗಿ ನೈಸರ್ಗಿಕ ಹಾಗೂ ಸೌರಶಕ್ತಿಗಳ ಬಳಕೆಯಿಂದ ಉತ್ಪಾದನಾ ವೆಚ್ಚವು ಕಡಿಮೆಯಾಗುತ್ತದೆ.
8. ಬೆಳೆಗಳನ್ನು ಬದಲಾವಣೆ ಮಾಡುವುದರಿಂದ, ವಾತಾವರಣದಲ್ಲಿ ಯೋಗದ ಪವಿತ್ರ ಪ್ರಕಂಪನಗಳನ್ನು ಹರಡುವುದರಿಂದ ಜಮೀನಿನಲ್ಲಿ ಉತ್ಪಾದನಾ ಶಕ್ತಿಯು ವೃದ್ಧಿಯಾಗುತ್ತದೆ.
9. ಉತ್ಪಾದನೆಗಾಗಿ ವ್ಯಕ್ತಿಗತ ಹಾಗೂ ಸಾಮೂಹಿಕ ರಾಜಯೋಗದ ಪ್ರಯೋಗದಿಂದ ಶಾಶ್ವತ, ಸಾತ್ವಿಕ ಆಹಾರ ಧಾನ್ಯಗಳು ಪ್ರಾಪ್ತಿಯಾಗುತ್ತವೆ.
10. ಬೀಜಗಳನ್ನು ಬಿತ್ತುವುದಕ್ಕೆ ಮೊದಲು, ಸಸಿಗಳನ್ನು ನೆಡುವುದಕ್ಕೆ ಮೊದಲು ಪ್ರಕಂಪನವನ್ನಿತ್ತು ಅವುಗಳನ್ನು ಶಕ್ತಿಶಾಲಿಗಳನ್ನಾಗಿ ಮಾಡುವುದರಿಂದ ಬೆಳೆಯು ಚೆನ್ನಾಗಿರುತ್ತದೆ.

ಈಶ್ವರನ ಮಾರ್ಗದರ್ಶನದಂತೆ, ತಾವು ಮರ್ಯಾದೆಗಳನ್ನು ಪಾಲಿಸುತ್ತಾ 'ಶಾಶ್ವತ ಯೌಗಿಕ ಕೃಷಿ'ಮಾಡುವುದರಿಂದ ಖಂಡಿತವಾಗಿಯೂ ಉತ್ತಮವಾದ ಲಾಭವು ಸಿಗುವುದು. "ಭಾವನೆಗಳ ಪ್ರಕಂಪನಗಳು ವನಸ್ಪತಿಗಳ ಮೇಲೆ ಖಂಡಿತವಾಗಿಯೂ ಪ್ರಭಾವಿಸುತ್ತವೆ" ಎಂಬ ಈ ಸಿದ್ಧಾಂತವನ್ನು ಗಮನದಲ್ಲಿಟ್ಟುಕೊಂಡು ಯೌಗಿಕ ಕೃಷಿಯನ್ನು ಬಳಸಿಕೊಂಡು ಹಿಂಸಕ ವ್ಯಕ್ತಿ ಅಥವಾ ಪ್ರಾಣಿಗಳು ಕೂಡ ಅಹಿಂಸಾತ್ಮಕ ಮಾರ್ಗವನ್ನು ಹಿಡಿಯುತ್ತವೆ ಅಂದರೆ ಬೆಳೆಯ ರೂಪದಲ್ಲಿ ವನಸ್ಪತಿಗಳ ಉತ್ಪಾದನಾ ಶಕ್ತಿಯು ವೃದ್ಧಿಯಾಗುವುದಿಲ್ಲವೆ? ಇದೇ ಯೌಗಿಕ ಕೃಷಿಯ ರಹಸ್ಯವಾಗಿದೆ.

## ಯೋಗದ ಮುಖಾಂತರ ಬೀಜ ಸಂಸ್ಕಾರ

ಒಂದು ಪಾತ್ರೆಯಲ್ಲಿ ಬೀಜಗಳನ್ನು ತೆಗೆದುಕೊಂಡು, ಪಾತ್ರೆಯನ್ನು ಮುಂದಿಟ್ಟುಕೊಳ್ಳಿ ಮತ್ತು ಆತ್ಮಸ್ಥಿತಿಯಲ್ಲಿ ಸ್ಥಿತರಾಗಿ ಪರಮಾತ್ಮನ ನೆನಪಿನಲ್ಲಿ ಏಕಾಗ್ರರಾಗಿ ಬಿಡಿ. ಈ ಸ್ಥಿತಿಯಲ್ಲಿದ್ದುಕೊಂಡು ಅಭ್ಯಾಸ ಮಾಡಿ – ಪರಮಾತ್ಮನಿಂದ ಹೊರಬರುವ ಕೆಂಪು ಸುವರ್ಣಮಯ ಕಿರಣಗಳು ನಾನು ಆತ್ಮನ ದೃಷ್ಟಿಯ ಮುಖಾಂತರ ಬೀಜಗಳ ಮೇಲೆ ಹರಿಯುತ್ತಿವೆ ಮತ್ತು ಪ್ರತಿಯೊಂದು ಬೀಜವು ಪಿತಾ ಪರಮಾತ್ಮನಂತೆ ಹೊಳೆಯುತ್ತಿವೆ. ಈ ಬೀಜಗಳಿಂದ ಹುಟ್ಟುವಂತಹ ಗಿಡಗಳು ನಿರೋಗಿ ಹಾಗೂ ಶಕ್ತಿಶಾಲಿಯಾಗಿ ಬೆಳೆಯುತ್ತಿವೆ ಎಂದು ಸಂಕಲ್ಪ ಮಾಡಿರಿ.

ಕೆಲವೊಮ್ಮೆ ಬೀಜಗಳನ್ನು ಸೂಕ್ಷ್ಮವತನಕ್ಕೆ ಕೊಂಡೊಯ್ದು ಬಾಪದಾದಾರವರಿಂದ ಬೀಜಗಳಿಗೆ ಸಕಾಶ ಕೊಡಿಸಿ. ಬೀಜಗಳು ಒಳಗಿನಿಂದ ಕೆಂಪು ಸುವರ್ಣದಂತೆ ಪ್ರಕಾಶಮಯವಾಗಿ ಹೊಳೆಯುತ್ತಿವೆ ಮತ್ತು ಹೊರಗಿನಿಂದ ಪವಿತ್ರತೆಯ ಬಿಳಿಯ ಕಿರಣಗಳು ಬೀಜಗಳ ಸುತ್ತಲೂ ಆವರಿಸುತ್ತಿವೆ ಎಂದು ಅನುಭವ ಮಾಡಿರಿ.

ಇದೇ ರೀತಿ ಸಂಕಲ್ಪಗಳ ಆಧಾರದ ಮೇಲೆ ಬೀಜಗಳನ್ನು ಪರಮಧಾಮದಲ್ಲಿರುವ ಪರಮಾತ್ಮನ ಹತ್ತಿರಕ್ಕೆ ಕೊಂಡೊಯ್ಯಿರಿ. ಏಕಾಗ್ರಚಿತ್ತರಾಗಿ ಅನುಭವ ಮಾಡಿ. ಪರಮಧಾಮದ ಶಾಂತಿ, ಪವಿತ್ರತೆ ಮತ್ತು ಶಕ್ತಿಶಾಲಿ

ವಾತಾವರಣದಲ್ಲಿ ಪ್ರತಿಯೊಂದು ಬೀಜದೊಳಗೆ ಪರಮಾತ್ಮನ ಪ್ರಕಾಶ ಮತ್ತು ಶಕ್ತಿಯ ಕಿರಣಗಳು ಹರಿಯುತ್ತಿವೆ ಮತ್ತು ಬೀಜಗಳು ಹೊಳೆಯುತ್ತಿವೆ. ಪರಮಾತ್ಮನ ಶಕ್ತಿಗಳ ಆಧಾರದಿಂದ ಬೀಜದಿಂದ ಹುಟ್ಟುವಂತಹ ಸಸಿಗಳು ನಿರೋಗಿ ಮತ್ತು ಶಕ್ತಿಶಾಲಿಯಾಗಿ ಬೆಳೆಯುತ್ತಿವೆ. ಕಾಳುಗಳಲ್ಲಿ ಪೌಷ್ಠಿಕತೆ ಮತ್ತು ಇಳುವರಿಯು ವೃದ್ಧಿಯಾಗುತ್ತಿದೆ.

ಈ ರಾಜಯೋಗದ ಅಭ್ಯಾಸಕ್ಕಾಗಿ ಬೆಳಗಿನ ಬ್ರಾಹ್ಮೀಮುಹೂರ್ತ (ಅಮೃತವೇಳೆ 4–00 ರಿಂದ 4–45)ದ ಸಮಯವು ತುಂಬಾ ಶ್ರೇಷ್ಠವಾಗಿದೆ. ಆಗ ಎಲ್ಲಾ ಕಡೆಯಲ್ಲೂ ವಾತಾವರಣವು ತುಂಬಾ ಶಾಂತವಾಗಿರುತ್ತದೆ ಮತ್ತು ಮನಸ್ಸು ನಿರ್ಮಲವಾಗಿರುತ್ತದೆ. ಆಗ ಮಾನಸಿಕ ಏಕಾಗ್ರತೆಯು ಹೆಚ್ಚುತ್ತದೆ. ತಮ್ಮ ಮನೆಯಲ್ಲಿ ಯಾವುದಾದರೂ ಒಂದು ಸ್ವಚ್ಛವಾದ ಹಾಗೂ ಶಾಂತವಾದ ಸ್ಥಳವನ್ನು ಯೋಗಾಭ್ಯಾಸಕ್ಕಾಗಿ ನಿಶ್ಚಿತ ಮಾಡಿಕೊಳ್ಳಿ. ಆಗ ತಾನಾಗಿಯೇ ಸಫಲತೆಯು ಸಿಗುತ್ತದೆ. ಫಲಿತಾಂಶವು ಇನ್ನೂ ಚೆನ್ನಾಗಿ ಬರಬೇಕೆಂದಿದ್ದರೆ ಎಲ್ಲಾ ನಿಯಮಗಳನ್ನು ಪಾಲಿಸುತ್ತಾ ರಾಜಯೋಗದ ಅಭ್ಯಾಸವನ್ನು ಮಾಡುವವರು ಭಗವಂತನಿಂದ ಸಿಕ್ಕಿರುವ ಸ್ವಮಾನಗಳನ್ನು ಅಭ್ಯಾಸ ಮಾಡುವುದು ಅಗತ್ಯ.

ಯೋಗದ ಪ್ರಯೋಗವನ್ನು ಮಾಡಲು ಮೊದಲು ಪರಮಾತ್ಮನ ಬಗ್ಗೆ ವಿಶ್ವಾಸವಿರಬೇಕು ಮತ್ತು ಜಮೀನು ಹಾಗೂ ಬೆಳೆಯ ಜೊತೆಗೆ ಪ್ರೀತಿ ಮತ್ತು ಸ್ನೇಹದ ಸಂಬಂಧವು ತುಂಬಾ ಅಗತ್ಯ. ಒಂದು ಸಾರಿ ಜಮೀನು ಮತ್ತು ಬೆಳೆಯ ಜೊತೆ ಸ್ನೇಹ ಮತ್ತು ಪ್ರೀತಿಯಿಂದ ಸಂಬಂಧವನ್ನು ಬೆಳೆಸಿಕೊಂಡಿದ್ದಾದರೆ, ನಾವು ಬೇರೆ ಊರಿನಲ್ಲಿರಲಿ ಇಲ್ಲವೇ ದೂರದಲ್ಲಿರುವ ಊರಿಗೆ ಹೋಗಿದ್ದರೂ ಸಂಕಲ್ಪದ ಆಧಾರದಿಂದ ನಾವು ಹತ್ತಿರದ ಅನುಭವವನ್ನು ಮಾಡಬಹುದು. ನಮ್ಮ ಭಾವನೆಗಳಿಂದ ವನಸ್ಪತಿಗಳು ಪ್ರಭಾವಕ್ಕೊಳಗಾಗುತ್ತವೆ ಮತ್ತು ಅದಕ್ಕನುಗುಣವಾಗಿಯೇ ಉತ್ತಮವಾದ ಫಲವನ್ನು ನೀಡುತ್ತವೆ.

ಆದುದರಿಂದ ಪೂರ್ಣವಾಗಿ ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳಬೇಕೆಂಬ ಭಾವನೆ ಇದ್ದರೆ ಅದಕ್ಕಾಗಿ ದೃಢತೆ ಹಾಗೂ ನಿಶ್ಚಯವು ಬೇಕಾಗುತ್ತದೆ.

## ರಾಜಯೋಗದ ಅಭ್ಯಾಸದ ವಿಧಾನ (ಕಾಮೆಂಟ್ರಿ)

ಮೊದಲು ತಮ್ಮನ್ನು ಆತ್ಮವೆಂದು ನಿಶ್ಚಯ ಮಾಡಿಕೊಳ್ಳಿ.... ತಮ್ಮ ಸ್ವರೂಪದ ಅನುಭೂತಿ ಮಾಡಿ.... ನಾನು ಆತ್ಮ ಪ್ರಕಾಶ ಸ್ವರೂಪಿಯಾಗಿದ್ದೇನೆ.... ಜ್ಯೋತಿರ್ಬಿಂದು... ಹಣೆಯ ಮಧ್ಯದಲ್ಲಿ ಕುಳಿತಿದ್ದೇನೆ.... ನಕ್ಷತ್ರದಂತೆ ಹೊಳೆಯುತ್ತಿದ್ದೇನೆ....(ಅಂತರಂಗದಲ್ಲಿ ಬುದ್ಧಿಯಿಂದ ನೋಡಿಕೊಳ್ಳುತ್ತಾ ಹೋಗಿರಿ) ನನ್ನಲ್ಲೇ ಮನಸ್ಸಿದೆ.... ನಾನು ಮನಸ್ಸಿನ ಮುಖಾಂತರ ಒಳ್ಳೆಯ ಆಲೋಚನೆ ಮಾಡುತ್ತಿದ್ದೇನೆ.... ಬುದ್ಧಿಯನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳುತ್ತೇನೆ... ನನ್ನ ಸಂಸ್ಕಾರವನ್ನು ಸ್ವಚ್ಛ ಮಾಡಿಕೊಳ್ಳುತ್ತಿದ್ದೇನೆ..... ನಾನು ಆತ್ಮ.... ಶಾಂತ ಸ್ವರೂಪಿ.... ಜ್ಞಾನ ಸ್ವರೂಪಿ... ಪವಿತ್ರ ಸ್ವರೂಪಿ..... ಆನಂದ.... ಸುಖ..... ಶಕ್ತಿ ಸ್ವರೂಪಿಯಾಗಿದ್ದೇನೆ..... (ಪ್ರತಿಯೊಂದು ಗುಣವನ್ನು ನಿಧಾನವಾಗಿ ಚಿಂತನೆ ಮಾಡುತ್ತಾ ಅನುಭವ ಮಾಡುತ್ತಾ ಹೋಗಿರಿ.) ನಾನು ಆತ್ಮನು ಬುದ್ಧಿಯ ಆಧಾರದಿಂದ ಮೇಲಕ್ಕೆ ಹೋಗುತ್ತಿದ್ದೇನೆ.... ತುಂಬಾ ಮೇಲೆ ತೇಲಿ ಹೋಗುತ್ತಿದ್ದೇನೆ....ಪರಮಧಾಮದಲ್ಲಿ ಅತ್ಯಂತ ಪ್ರಕಾಶಮಯವಾದ ಜ್ಯೋತಿಯನ್ನು ಕಾಣುತ್ತಿದ್ದೇನೆ.... ಅವರೇ ಪರಮಾತ್ಮ..... ಅವರೇ ನಮ್ಮೆಲ್ಲರ ಮಾತಪಿತಾ ಆಗಿದ್ದಾರೆ.... ಅವರೇ ನಮ್ಮೆಲ್ಲರಿಗೂ ಶಿಕ್ಷಕರಾಗಿದ್ದಾರೆ.... ರಕ್ಷಕರಾಗಿದ್ದಾರೆ.... ಪರಮ ಸದ್ಗುರುವಾಗಿದ್ದಾರೆ.... ಪರಮಾತ್ಮ.... ತಂದೆ.... ಬಾಬಾ.... (ಹಿಂದಿಯಲ್ಲಿ ತಂದೆಯನ್ನು ಬಾಬಾ ಎನ್ನುತ್ತಾರೆ.) ಪ್ರಿಯ ಬಾಬಾ.... ನನ್ನ ಮನಮೋಹಕ ಬಾಬಾ.... ತಾವು ಶಾಂತಸಾಗರರಾಗಿದ್ದೀರಿ.... ಶಾಂತಸೂರ್ಯರಾಗಿದ್ದೀರಿ.... ನಾನು ಆತ್ಮ ಶಾಂತ ಸ್ವರೂಪಿಯಾಗಿದ್ದೇನೆ.... ಆದಿಯಲ್ಲೂ ಶಾಂತಸ್ವರೂಪಿ.... ಅನಾದಿಯಲ್ಲೂ

ಶಾಂತಸ್ವರೂಪಿ.... ನನ್ನ ಸ್ವಧರ್ಮವೇ ಶಾಂತಿ.... ನನ್ನ ಗುಣವೂ ಶಾಂತಿ.... ನಾನು ಆತ್ಮ.... ವಿಶೇಷ ಆತ್ಮ.... ಶಾಂತ ಸ್ವರೂಪಿಯಾಗಿದ್ದೇನೆ.... ನನ್ನಿಂದ ಶಾಂತಿಯ ತರಂಗಗಳು ನನ್ನ ದೇಹದಲ್ಲೆಲ್ಲ ವ್ಯಾಪಿಸುತ್ತಿವೆ.... ಶಾಂತಿ ನನ್ನ ಸುತ್ತಲೂ ಹರಡುತ್ತಿದೆ.... ನಾನು ಶಾಂತಿಯನ್ನು ಹರಿಸುತ್ತಿದ್ದೇನೆ.... ಪ್ರಿಯ ಕರುಣಾಸಾಗರ ಬಾಬಾ.... ತಾವು ಪವಿತ್ರಸಾಗರರಾಗಿದ್ದೀರಿ.... ಪವಿತ್ರತೆಯ ಮಂತ್ರದಾತರಾಗಿದ್ದೀರಿ.... ತಮ್ಮಿಂದ ಪವಿತ್ರತೆಯ ತರಂಗಗಳು ಹರಿದು ಬರುತ್ತಿವೆ.... ನಾನು ಆತ್ಮನಲ್ಲಿ ಪವಿತ್ರತೆ ಪ್ರವೇಶಿಸುತ್ತಿದೆ.... ಪವಿತ್ರತೆ ನನ್ನ ಮೂಲ ಧರ್ಮ.... ಪವಿತ್ರತೆ ನನ್ನ ಶ್ರೇಷ್ಠ ಗುಣ.... ಪವಿತ್ರಸ್ವರೂಪಿಯಾಗಿದ್ದೇನೆ.... ನಾನು ಪವಿತ್ರಸ್ವರೂಪಿ.... ಇಡೀ ದೇಹದಲ್ಲಿ ಪವಿತ್ರತೆ ವ್ಯಾಪಿಸುತ್ತಿದೆ.... ನನ್ನ ಸುತ್ತಲೂ ಪವಿತ್ರತೆಯು ಹರಿಯುತ್ತಿದೆ.... (ಹೀಗೆ ಬೇರೆ ಗುಣಗಳ ಬಗ್ಗೆ ಚಿಂತನೆ ಮಾಡುವುದರ ಜೊತೆಗೆ ಅನುಭೂತಿ ಮಾಡುತ್ತಾ ಹೋಗಿರಿ.) ನಾನು ಆತ್ಮನು ಪರಮಾತ್ಮ ತಂದೆಯಿಂದ ಸರ್ವಗುಣಗಳನ್ನು ಸರ್ವಶಕ್ತಿಗಳನ್ನು ತುಂಬಿಕೊಳ್ಳುತ್ತಿದ್ದೇನೆ.... ಓಂ ಶಾಂತಿ.....

ಈ ರೀತಿ ಮೇಲ್ಕಾಣಿಸಿದ ಒಂದೊಂದು ಸಂಕಲ್ಪದ ಸ್ವರೂಪದಲ್ಲಿ ಏಕಾಗ್ರಚಿತ್ತರಾಗಿ, ಯೋಗಯುಕ್ತರಾಗಿ ಸಂಕಲ್ಪಗಳ ಮೂಲಕ ಜಮೀನು ಮತ್ತು ಬೆಳೆಗೆ ಪ್ರಕಂಪನವನ್ನು ನೀಡುವುದರಿಂದ ತುಂಬಾ ಅತ್ಯುತ್ತಮವಾದ ಫಲಿತಾಂಶವು ಗೋಚರಿಸುತ್ತದೆ.

ಮೊದಲು ತಮ್ಮನ್ನು ಒಂದಲ್ಲ ಒಂದು ಸ್ವಮಾನದಲ್ಲಿ ಸ್ಥಿತರಾಗುವಂತಹ ಅನುಭವ ಮಾಡಿ.... ನಿಧಾನವಾಗಿ ತಮ್ಮ ಫರಿಸ್ತಾ ಸ್ವರೂಪವನ್ನು ಮುಂದಕ್ಕೆ ತಂದುಕೊಳ್ಳಿರಿ... ನಾನು ಫರಿಸ್ಥೆ ಹಗುರ ಹಾಗೂ ಪ್ರಕಾಶಮಯವಾಗಿದ್ದೇನೆ.... ಸೂಕ್ಷ್ಮವತನದೆಡೆಗೆ ಸಾಗುತ್ತಿದ್ದೇನೆ.... ತಮ್ಮನ್ನು ಸೂಕ್ಷ್ಮವತನದಲ್ಲಿ ಬಾಪದಾದಾರರ ಮುಂದೆ ನಿಂತಿದ್ದೇನೆಂಬ ಅನುಭವ ಮಾಡಿರಿ.... ನಿಧಾನವಾಗಿ ಸೂಕ್ಷ್ಮ ದೇಹವನ್ನೂ ಮರೆಯುತ್ತಾ ಹೋಗಿರಿ.... ನಾನು ಆತ್ಮ ಜ್ಯೋತಿರ್ಬಿಂದುವಾಗಿದ್ದೇನೆ.... ಪರಮಧಾಮದೆಡೆಗೆ ಹೋಗುತ್ತಿದ್ದೇನೆ.... ಪರಮಧಾಮದಲ್ಲಿ ಪರಮಾತ್ಮನ ಜೊತೆ ತುಂಬಾ ಹತ್ತಿರ ಹಾಗೂ ಸಮಾನನಾಗಿದ್ದೇನೆಂಬ ಅನುಭವ ಮಾಡಿರಿ.... ಏಕಾಗ್ರಚಿತ್ತರಾಗಿ ಈ ಬಿಂದುರೂಪದ ಸ್ಥಿತಿಯಲ್ಲಿ (5 ನಿಮಿಷದವರೆಗೆ) ಸ್ಥಿತರಾಗುವಂತಹ ಅಭ್ಯಾಸ ಮಾಡಿರಿ.... ಪಿತಾಪರಮಾತ್ಮನಿಂದ ಹರಿಯುತ್ತಿರುವ ಜ್ಞಾನ... ಪವಿತ್ರತೆ.... ಶಾಂತಿ.... ಪ್ರೇಮ.... ಆನಂದ.... ಸುಖ.... ಶಕ್ತಿಯ ಕಿರಣಗಳು ನಾನು ಆತ್ಮದ ಮೇಲೆ ಹರಿದು ಬಂದು ನನ್ನ ಮುಖಾಂತರ ಪೃಥ್ವಿ, ಜಲ, ವಾಯು, ಅಗ್ನಿ, ಆಕಾಶ, ಚಂದ್ರ, ನಕ್ಷತ್ರ ಹಾಗೂ ಗ್ರಹಗಳವರೆಗೂ ತಲುಪುತ್ತಿವೆ.... ಎಲ್ಲವೂ ಪಾವನ....ಶಕ್ತಿಶಾಲಿಯಾಗುತ್ತಿವೆ..... ಜೀವ–ಜಂತು, ಕೀಟ, ಪಶು, ಪಕ್ಷಿಗಳು, ಪ್ರಾಣಿ ಎಲ್ಲರಿಗೂ ಪರಮಾತ್ಮನ ಶಕ್ತಿಯ ಅನುಭೂತಿಯಾಗುತ್ತಿದೆ.... ಶಾಂತಿ, ಪ್ರೇಮ, ಆನಂದ, ಶಕ್ತಿಯಿಂದ ಸಂಪನ್ನರಾಗುತ್ತಿದ್ದೇವೆ.... ಎಲ್ಲಾ ಕಡೆಯಲ್ಲೂ ಶಾಂತಿಯು ವ್ಯಾಪಿಸುತ್ತಿದೆ.... ಏಕಾಗ್ರಚಿತ್ತರಾಗಿ ಇದೇ ಸಂಕಲ್ಪದಲ್ಲಿ (5 ನಿಮಿಷ) ಸ್ಥಿತರಾಗಿರಿ.

ಈ ಸಂಪೂರ್ಣ ಸ್ಥಿತಿಯ ಜೊತೆಗೆ ಪ್ರಕಾಶ ಹಾಗೂ ಶಕ್ತಿಶಾಲಿ ಆತ್ಮ ಸೂಕ್ಷ್ಮವತನಕ್ಕೆ ಹೋಗಿ ಫರಿಸ್ತಾ ಸ್ವರೂಪದಲ್ಲಿ ಸ್ಥಿತರಾಗಿ.... ಬಾಪದಾದಾರವರ ಮುಂದಕ್ಕೆ ಹೋಗಿ ಅವರನ್ನು ಪ್ರೀತಿಯಿಂದ ಆಹ್ವಾನಿಸಿ ಅವರನ್ನು ಪ್ರಯೋಗ ಮಾಡುವ ಜಮೀನಿನ ಬಳಿಗೆ ಕರೆದು ತಂದು ತೋರಿಸುವುದು.... ಆತ್ಮೀಯವಾಗಿ ಮಾತನಾಡುತ್ತಾ ಅನುಭವ ಮಾಡಿರಿ.... ಈಗ ಬಾಪದಾದಾರವರು ಜಮೀನು ಮತ್ತು ಬೆಳೆಯನ್ನು ತಮ್ಮ ಶಕ್ತಿಶಾಲಿ ದೃಷ್ಟಿಯಿಂದ ನೋಡುತ್ತಿದ್ದಾರೆ.... ತರಂಗಗಳನ್ನು ಹರಿಸುತ್ತಿದ್ದಾರೆ.... ಬಾಪದಾದಾರವರ ನೇತ್ರಗಳಿಂದ ಪವಿತ್ರತೆ ಮತ್ತು ಶಕ್ತಿಗಳ ಕಿರಣಗಳು ಜಮೀನು ಮತ್ತು ಬೆಳೆಗೆ ಹರಿಯುತ್ತಿವೆ.... ಇದರಿಂದ ಜಮೀನು ಮತ್ತು ಬೆಳೆಯು ನಿರೋಗಿ ಮತ್ತು ಶಕ್ತಿಶಾಲಿಯಾಗುತ್ತಿದೆ.... ಜಮೀನಿನಲ್ಲಿ ಬೆಳೆಯನ್ನು ವೃದ್ಧಿಗೊಳಿಸಲು ಅಗತ್ಯವಾದ ಇನ್ನುಳಿದ ದ್ರವ್ಯಗಳು

ಉತ್ಪತ್ತಿಯಾಗುತ್ತಿವೆ.... ಬೆಳೆಯು ಚೆನ್ನಾಗಿ ಬೆಳೆಯುತ್ತಿದೆ.... ಈ ರೀತಿ ಶುಭ, ಶುದ್ಧ ಚಿಂತನೆ – ವಿಚಾರಗಳಿಂದ ತುಂಬಿದ ಸಂಕಲ್ಪಗಳು ಮನಸ್ಸಿನಲ್ಲಿ ನಡೆಯುತ್ತಿರಲಿ.

ಬೆಳೆಯಲ್ಲಿ ಕಾಳುಗಳು ಕಟ್ಟುವಾಗ ಪರಮಾತ್ಮನಿಂದ ಪವಿತ್ರತೆ, ಶಾಂತಿ, ಪ್ರೀತಿ, ಸುಖ, ಆನಂದ, ಶಕ್ತಿಗಳ ಕಿರಣಗಳನ್ನು ಬೆಳೆಗೆ ಹರಿಸಿರಿ.... ಪರಮಾತ್ಮನ ಶಕ್ತಿಯಿಂದ ಕಾಳುಗಳಲ್ಲಿ ಸಾತ್ವಿಕತೆ ಮತ್ತು ಪೌಷ್ಠಿಕತೆಯು ವೃದ್ಧಿಯಾಗುತ್ತಿದೆ.... ಕಾಳಿನ ಗಾತ್ರವು ಹೆಚ್ಚಾಗುತ್ತಿದೆ.... ಈ ರೀತಿ ಶ್ರೇಷ್ಠ ಮತ್ತು ಶುಭ ಸಂಕಲ್ಪಗಳನ್ನು ನಡೆಸುತ್ತಾ ಹೋಗಿರಿ.

ಪರಮಾತ್ಮನ ಪವಿತ್ರತೆ ಮತ್ತು ಶಕ್ತಿಶಾಲಿ ಕಿರಣಗಳು ಬೆಳೆಗಳ ಮೇಲೆ ಹರಿಯುತ್ತಿವೆ..... ಯಾವುದೇ ಕೀಟಗಳು, ರೋಗಗಳು ಅಥವಾ ಪ್ರಾಣಿಗಳಿಂದ ನಷ್ಟವಾಗಬಾರದು.... ಬೆಳೆಯ ಸುತ್ತಲೂ ಪ್ರಕಾಶದ ತಡೆಗೋಡೆ (ಆಭಾ ಮಂಡಲ) ಯನ್ನು ನಿರ್ಮಿಸಿರಿ.... ಪವಿತ್ರತೆಯ ಶಕ್ತಿಯು ಎಲ್ಲೆಡೆ ಹರಡುತ್ತಿದೆ.... ಹೀಗೆ ಅನುಭವ ಮಾಡುತ್ತಾ ಹೋಗಿ.

ವ್ಯವಸಾಯದಲ್ಲಿ ಕೆಲಸ ಮಾಡುವಾಗ ಸಂಪೂರ್ಣವಾಗಿ ಫರಿಸ್ಥೆ ಎಂದು ತಿಳಿದುಕೊಳ್ಳಿರಿ.... ಪರಮಾತ್ಮನ ಶಕ್ತಿಗಳು ನಾನು ಫರಿಸ್ಥೆಯ ಮುಖಾಂತರ ಜಮೀನು ಮತ್ತು ಬೆಳೆಗೆ ಹರಿದು ಹೋಗುತ್ತಿವೆ.... ಆಳವಾದ ಶಾಂತಿಯ ಕಿರಣಗಳು ಪೂರ್ಣ ಜಮೀನಿನಲ್ಲಿ ಹರಡುತ್ತಿವೆ.... ಈ ರೀತಿಯಲ್ಲಿ ಅನುಭವ ಮಾಡಿರಿ....

ಕೆಲವೊಮ್ಮೆ ಜಮೀನನ್ನು ಸೂಕ್ಷ್ಮವತನಕ್ಕೆ ಬಾಪದಾದಾರವರ ಬಳಿಗೆ ತೆಗೆದುಕೊಂಡು ಹೋಗಿ.... ಬಾಪದಾದಾರವರು ತರಂಗಗಳನ್ನು ಹರಿಸುತ್ತಿದ್ದಾರೆ....ಜ್ಞಾನ.... ಶಾಂತಿ.... ಪ್ರೀತಿ.... ಪವಿತ್ರತೆ.... ಸುಖ.... ಆನಂದ.... ಶಕ್ತಿ.... ಸಂಪನ್ನವಾಗುತ್ತಿದೆ ಎಂದು ಅನುಭವ ಮಾಡಿ.

ಮತ್ತೆ ಕೆಲವೊಮ್ಮೆ ಬೆಳೆಯನ್ನು ಪರಮಧಾಮಕ್ಕೆ ಕೊಂಡೊಯ್ದು ಗಹನವಾದ ಶಾಂತಿಯ ಅನುಭೂತಿ ಮಾಡಿ.... ಪ್ರಕಾಶಮಯ ಜ್ಯೋತಿ.... ಪರಮಾತ್ಮನಿಂದ ಹೊರಬರುತ್ತಿರುವ ಕಿರಣಗಳು ಪ್ರತಿಯೊಂದು ಗಿಡದ ಮೇಲೂ ಹರಿದು ಬರುತ್ತಿವೆ.... ಎಲ್ಲೆಡೆಯಲ್ಲೂ ಅಪಾರವಾದ ಶಾಂತಿಯು ವ್ಯಾಪಿಸುತ್ತಿದೆ.... ಜಮೀನು ಮತ್ತು ಬೆಳೆಗೆ ಅನುಭೂತಿ ಮಾಡಿಸಿರಿ....

ಜಮೀನನ್ನು ಶಕ್ತಿಶಾಲಿ ಮಾಡಲು ಗೊಬ್ಬರವನ್ನು ತಯಾರಿಸುವಾಗ, ಗೊಬ್ಬರವನ್ನು ಯೋಗಯುಕ್ತರಾಗಿ ಪರಮಾತ್ಮನ ಶಕ್ತಿಯಿಂದ ಸಂಪನ್ನಗೊಳಿಸಿರಿ.... ಈ ಗೊಬ್ಬರವು ಬೆಳೆಯನ್ನು ನಿರೋಗಿ ಹಾಗೂ ಶಕ್ತಿಶಾಲಿಯನ್ನಾಗಿ ಮಾಡಲು ಸಹಕರಿಸುತ್ತದೆ.... ಗೊಬ್ಬರದ ಮೇಲೆ ವರದಾನದ ಹಸ್ತವನ್ನಿಟ್ಟು ನಾನು ಆತ್ಮನ ಈ ಕೈಗಳ ಮೂಲಕ ಪರಮಾತ್ಮನ ಶಕ್ತಿಯ ಪ್ರಕಂಪನಗಳು ಗೊಬ್ಬರಕ್ಕೆ ಹರಿಯುತ್ತಿವೆ ಎಂದು ಸಂಕಲ್ಪ ಮಾಡಿರಿ.... ಗೊಬ್ಬರದಲ್ಲಿ ಶಕ್ತಿಯು ವೃದ್ಧಿಯಾಗುತ್ತಿದೆ.... ಯಾವುದೇ ಕೀಟನಾಶಕ ದ್ರಾವಣವನ್ನು ತಯಾರಿಸುವಾಗ ಈ ಅಭ್ಯಾಸವನ್ನು ಮಾಡಿರಿ.... ಸಿಂಪಡಿಸುವಾಗಲೂ ಯೋಗಯುಕ್ತರಾಗಿ ಪರಮಾತ್ಮನ ಶಕ್ತಿಗಳ ಜೊತೆ ಸಿಂಪಡಿಸಿರಿ.....

ರೋಗ ಮತ್ತು ಕೀಟನಾಶಕ ಔಷಧಿಗಳನ್ನು ತಯಾರಿಸುವಾಗಲೂ ಪವಿತ್ರತೆಯ ಪ್ರಕಂಪನವನ್ನು ತುಂಬಿರಿ.... ಧಾನ್ಯಗಳನ್ನು ಕೂಡ ಬಾಪದಾದಾರವರ ಮುಂದಕ್ಕೆ ಕೊಂಡೊಯ್ದು ಶಕ್ತಿಯ, ಪವಿತ್ರತೆಯ ಪ್ರಕಂಪನವನ್ನು ಕೊಡಿಸಿರಿ.....

# ಜಮೀನನ್ನು ಶಕ್ತಿಶಾಲಿ ಮಾಡಲು

ಪ್ರಕೃತಿಯು ನೀಡಿರುವ ಗಿಡಮರಗಳಿಗೆ ಪೋಷಣೆಯ ವ್ಯವಸ್ಥೆಯು ಅವು ಎಲ್ಲೆವೆಯೋ ಅಲ್ಲಿಯೇ ದೊರೆಯುತ್ತವೆ. ಅವು ಎಲ್ಲಿರುತ್ತವೆಯೋ ಅಲ್ಲಿಯೇ ತಮಗೆ ಬೇಕಾದ್ದನ್ನು ನಿರ್ಮಾಣ ಮಾಡಿಕೊಳ್ಳುವ ಶಕ್ತಿಯನ್ನು ಪ್ರಕೃತಿಯು ದಯಪಾಲಿಸುತ್ತದೆ. ಇಂದು ವೃಕ್ಷಗಳನ್ನು ಕಡಿದಿರುವುದು, ರಾಸಾಯನಿಕ ಗೊಬ್ಬರ, ತೃಣನಾಶಕ ಹಾಗೂ ಕೀಟನಾಶಕಗಳ ಬಳಕೆಯಿಂದ ವನಸ್ಪತಿಗಳ ಪೋಷಣೆಯ ವ್ಯವಸ್ಥೆಯು ಹದಗೆಟ್ಟಿದೆ. ಜಮೀನಿನ ಶಕ್ತಿಯು ಹೀನವಾಗಿದೆ. ಅಂತಹ ಜಮೀನನ್ನು ಮತ್ತೆ ಶಕ್ತಿಶಾಲಿಯನ್ನಾಗಿ ಮಾಡಲು ಗಿಡಮರಗಳನ್ನು ನೆಡುವುದು ಮತ್ತು ಜಮೀನಿಗೆ ಸಾವಯವ – ಜೈವಿಕ ಗೊಬ್ಬರಗಳನ್ನು ಬಳಸುವುದು ಅತ್ಯಾವಶ್ಯಕವಾಗಿದೆ. ಇಂದು ಪ್ರಕೃತಿಯ ಜೊತೆಯಲ್ಲಿ ಹೊಂದಾಣಿಕೆ ಮಾಡಿಕೊಂಡು ಮುನ್ನಡೆಯುವುದು ಅತ್ಯಗತ್ಯ. ಇದಕ್ಕಾಗಿ ಆಧ್ಯಾತ್ಮಿಕತೆಯನ್ನು ಆಧಾರ ಮಾಡಿಕೊಳ್ಳುವುದು ತುಂಬಾ ಅಗತ್ಯ.

**ಸಾವಯವ ಗೊಬ್ಬರದ ತಯಾರಿಕೆಯ ವಿಧಾನ :–**

1) **ಎಲ್ಲದಕ್ಕಿಂತ ಮುಖ್ಯವಾಗಿ ಗಮನವಿರಲಿ :–** ಬೆಳೆಯಿಂದ ಕಾಳುಗಳನ್ನು ತೆಗೆದ ನಂತರ ವ್ಯರ್ಥವಾದ ಯಾವ ಭಾಗವಿದೆಯೋ ಅದನ್ನು ಜಮೀನಿನೊಳಕ್ಕೆ ಸೇರಿಸಿರಿ. ಉದಾ : ಬೆಳೆಯ ಬೇರು, ಕಾಂಡ, ಹುಲ್ಲು–ಕಡ್ಡಿ, ಧಾನ್ಯದ ಹೊಟ್ಟು. ಗೋದಿಯ ಭೂಸ, ಕಡಲೆಕಾಯಿಯ ಸಿಪ್ಪೆ, ಕಬ್ಬಿನ ಗರಿ ಇತ್ಯಾದಿಗಳನ್ನು ಭೂಮಿಗೆ ಹರಡಿರಿ. ಇಲ್ಲವೆ ನೇಗಿಲಿನಿಂದ ಉತ್ತು ಭೂಮಿಗೆ ಸೇರಿಸಿಬಿಡಿ. ಇದರಿಂದ ಭೂಮಿಯಲ್ಲಿ ಸಾವಯವ ಪದಾರ್ಥಗಳ ಪ್ರಮಾಣವು ಹೆಚ್ಚುತ್ತದೆ.

2) ಒಂದು ಎಕರೆ ಭೂಮಿಗೆ ಕೊನೆಯ ಪಕ್ಷ ಆರು ಟನ್ ಸಗಣಿ ಗೊಬ್ಬರವನ್ನು ಬಳಸುವುದು ತುಂಬಾ ಅಗತ್ಯ. ಇದರಿಂದ ಜಮೀನಿನಲ್ಲಿ ಜೀವಾಣುಗಳು ಸ್ಥಿರವಾಗಿರುತ್ತವೆ.

3) ಹಾಗೇನಾದರೂ ಸಗಣಿ ಗೊಬ್ಬರವು ಸಿಗಲಿಲ್ಲವೆಂದರೆ "ಹಸಿರು ಗೊಬ್ಬರ" ವನ್ನು ಕೊಡುವುದು. ಸೆಣಬು 5 ಕಿಲೊ; ಡಯಂಚಾ 5 ಕಿಲೊ, ಹೆಸರು ಒಂದು ಕಿಲೊ, ಉದ್ದು ಒಂದು ಕಿಲೊ, ಕಡಲೆ ಒಂದು ಕಿಲೊ, ಮೆಂತ್ಯ ಒಂದು ಕಿಲೊ, ಜೋಳ ಒಂದು ಕಿಲೊ, ಹವೀಜ ಒಂದು ಕಿಲೊ, ಅಲಸಂದೆ ಎರಡು ಕಿಲೊ, ಅಗಸೆ ಒಂದು ಕಿಲೊ, ರಾಜಗಿರಿ 200 ಗ್ರಾಂ. ಈ ಎಲ್ಲವನ್ನು ಮಿಶ್ರಮಾಡಿ ಒಂದು ಎಕರೆ ಜಮೀನಿನಲ್ಲಿ ಬಿತ್ತಿರಿ. 45–50 ದಿನಗಳ ನಂತರ ಬೆಳೆಯನ್ನು ಜಮೀನಿನೊಳಕ್ಕೆ ಸೇರಿಸಿರಿ.

ಕಬ್ಬಿನ ಮತ್ತು ಬಾಳೆಗಿಡಗಳಿಗೆ ಈ ಹಸಿರು ಬೆಳೆಯನ್ನು ಕತ್ತರಿಸಿ ಭೂಮಿಯ ಮೇಲೆ ಹರಡಿರಿ.

4) **ಜೀವಾಮೃತ :–**

ದೇಶಿ ಹಸುವಿನ ಸಗಣಿ 10 ಕಿಲೊ, 5 ಲೀಟರ್ ಗೋಮೂತ್ರ, ಕೆಮಿಕಲ್ ರಹಿತ ಬೆಲ್ಲ 2 ಕಿಲೊ, 250 ಗ್ರಾಂ ದೇಶಿ ಹಸುವಿನ ತುಪ್ಪ (ಇದು ಸಿಗಲಿಲ್ಲವೆಂದರೆ ಕಡಲೆಕಾಯಿ ಎಣ್ಣೆ ಅಥವಾ ಸೋಯಾಬೀನ್ ಎಣ್ಣೆ), 2 ಲೀಟರ್ ದೇಶಿ ಹಸುವಿನ ಮೊಸರು, 2 ಕಿಲೊ ಕಡಲೆ(ಅಥವಾ ಅಲಸಂದೆ/ಹೆಸರು/ಉದ್ದು)ಯ ಹಿಟ್ಟು, ಆಲದ ಮರದ ಬುಡದ ಮಣ್ಣು 1 ಕಿಲೊ, (ಯಾವ ಜಮೀನಿಗೆ ಜೀವಾಮೃತವನ್ನು ಬಳಸುವಿರೋ ಆ ಬೆಳೆಯ ಬುಡದ ಮಣ್ಣು) 200 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಒಂದು ತೊಟ್ಟಿಯಲ್ಲಿ ಎಂಟು ದಿನಗಳವರೆಗೆ ಬಟ್ಟೆಯಿಂದ ಅದರ ಬಾಯನ್ನು ಕಟ್ಟಿ, ಇಡೀ ದಿನದಲ್ಲಿ ಎರಡು ಸಾರಿ ಕೋಲಿನಿಂದ ತಿರುವಿರಿ. (ಇದರಿಂದ ಜೀವಾಣುಗಳು ಹೆಚ್ಚಾಗುತ್ತವೆ. ಆಮ್ಲಜನಕವೂ ದೊರೆಯುತ್ತದೆ.)

ಈ ಮಿಶ್ರಣವನ್ನು ಒಂದು ಎಕರೆ ಜಮೀನಿಗೆ ಹಸಿಯಾಗಿದ್ದಾಗ ಸಂಜೆಯ ವೇಳೆ ಸಿಂಪಡಿಸಿ ಅಥವಾ ಬೆಳೆಗೆ

ನೀರನ್ನು ಹರಿಸುವಾಗ ಇದನ್ನು ಬೆರೆಸಿ ಹರಿಸಿರಿ.

ಈ ಜೀವಾಮೃತವನ್ನು ಬೆಳೆಗೆ ಕೊನೆಯ ಪಕ್ಷ ತಿಂಗಳಿಗೊಮ್ಮೆಯಾದರೂ ಕೊಡುವುದು.

ಸೂಚನೆ – ಯಾವುದೇ ಅರ್ಕವನ್ನು ತಯಾರಿಸಿ ಕೋಲಿನಿಂದ ತಿರುಗಿಸುವಾಗ ಗಡಿಯಾರದ ಮುಳ್ಳಿನಂತೆ ಬಲಭಾಗಕ್ಕೆ ತಿರುಗಿಸಿರಿ. ಎಂದಿಗೂ ಎಡಭಾಗಕ್ಕಲ್ಲ.

5) **ಧಾನ್ಯದ ಗೊಬ್ಬರ** :– ಮುಸುಕಿನ ಜೋಳ 10 ಕಿಲೊ, ಸೋಯಾಬೀನ್ 10 ಕಿಲೊ, ಜೋಳ 10 ಕಿಲೊ, ಗೋದಿ 10 ಕಿಲೊ, ಅಕ್ಕಿ 10 ಕಿಲೊ, ಉದ್ದು 2 ಕಿಲೊ, ಹೆಸರು 2 ಕಿಲೊ, ಅಲಸಂದೆ 2 ಕಿಲೊ, ಕಡಲೆ 2 ಕಿಲೊ, ರಾಗಿ 2 ಕಿಲೊ –ಈ ಎಲ್ಲವನ್ನೂ ಮಿಶ್ರಣ ಮಾಡಿ ದಪ್ಪ ರವೆಯಂತೆ ಬೀಸಿಸುವುದು. ಒಂದು ಎಕರೆ ಜಮೀನಿಗೆ ಬೆಳೆಯ ಮೇಲೆ ಇದನ್ನು ಎರಚಿ ಮತ್ತು ಜಮೀನಿಗೆ ನೀರನ್ನು ಹರಿಸಿರಿ.

ಮರುದಿನ ಸಂಜೆ ವೇಳೆ 200 ಲೀಟರ್ ಜೀವಾಮೃತವನ್ನು ಬೆಳೆಗೆ ಅನುಸಾರವಾಗಿ ಸಾರಜನಕ, ಪಿಎಸ್‌ಬಿ ಜೀವಾಣು ಸಂವರ್ಧಕವನ್ನು ಮಿಶ್ರಣ ಮಾಡಿ ಜಮೀನು ಹಸಿಯಾಗಿದ್ದಾಗ ಅಥವಾ ನೀರಿನ ಜೊತೆ ಹರಿಸಿರಿ. ಇದರಿಂದ ಜೀವಾಣುಗಳ ಸಂಖ್ಯೆಯು ಅಪಾರವಾಗಿ ಬೆಳೆಯುತ್ತದೆ ಹಾಗೂ ಜಮೀನು ಶಕ್ತಿಶಾಲಿಯಾಗುತ್ತದೆ. ಬೆಳೆಗೆ ಅವಶ್ಯಕತೆಗನುಗುಣವಾಗಿ ಒಂದು, ಎರಡು ಅಥವಾ ಮೂರು ಸಾರಿಯಾದರೂ ಈ ಗೊಬ್ಬರವನ್ನು ಯಾವ ಬೆಳೆಗಾದರೂ ಬಳಸಬಹುದು.

6) **ಬೆಳೆಯ ಮೇಲೆ ಸಿಂಪಡಿಸುವ ಟಾನಿಕ್** :– ದೇಶಿ ಹಸುವಿನ ಹಾಲು 3 ಲೀಟರ್, ಗೋಮೂತ್ರ 3 ಲೀಟರ್, ಎಳನೀರು 3 ಲೀಟರ್, ಕೆಮಿಕಲ್ ರಹಿತ ಬೆಲ್ಲ 1 ಕಿಲೊ, 200 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಯಾವುದೇ ಬೆಳೆಗಾದರೂ ಅವಶ್ಯಕತೆಗನುಸಾರವಾಗಿ ಸಿಂಪಡಿಸಿರಿ.

7) **ಬೀಜಾಮೃತ** :– ದೇಶಿ ಹಸುವಿನ ಗೊಬ್ಬರ 1 ಕಿಲೊ, ಗೋಮೂತ್ರ 1 ಲೀಟರ್, ದೇಶಿ ಹಸುವಿನ ಹಾಲು 200 ಮಿ.ಲೀ., ಬೇಯಿಸದೆ ಇರುವ ಸುಣ್ಣ 50 ಗ್ರಾಂ, ಇಂಗು 10 ಗ್ರಾಂ ಇವುಗಳನ್ನು 10 ಲೀಟರ್ ನೀರಿನಲ್ಲಿ 2 ರಾತ್ರಿ ನೆನೆಸಿರಿ. ಪ್ರತಿದಿನ ಮಿಶ್ರಣವನ್ನು ಕೋಲಿನಿಂದ ತಿರುವುತ್ತಿರಿ. ಬಟ್ಟೆಯಿಂದ ತೊಟ್ಟಿಯ ಬಾಯನ್ನು ಕಟ್ಟಿರಿ. 2 ದಿನಗಳ ನಂತರ ಇದನ್ನು ಬೀಜಗಳನ್ನು ಸಂಸ್ಕಾರಗೊಳಿಸಲು ಬಳಸಬಹುದು.

8) **ಎರೆ ಗೊಬ್ಬರ**– ಒಂದು ಎಕ್ಕರೆ ಜಮೀನಿಗೆ ಒಂದು ಟನ್ ಎರೆ ಗೊಬ್ಬರವನ್ನು ಜಮೀನು ಹಸಿಯಾಗಿದ್ದಾಗ, ಮೂರುತಿಂಗಳಿಗೊಮ್ಮೆ ಬಳಸುವುದು. ಇದರಿಂದ ಜಮೀನು ತುಂಬಾ ಶಕ್ತಿ ಶಾಲಿಯಾಗುತ್ತದೆ.

9) **ಬೀಜಗಳನ್ನು ಸಂಸ್ಕಾರ ಗೊಳಿಸುವ ವಿಧಾನ** :–

**(ಎ) ಏಕದಳ ಬೀಜಗಳಿಗಾಗಿ ಬೀಜ ಸಂಸ್ಕಾರ ಮಾಡುವ ವಿಧಾನ –**

ಮೆಕ್ಕೆಜೋಳ, ಜೋಳ, ಗೋದಿ, ರಾಗಿ, ಭತ್ತ, ಹತ್ತಿ, ಎಲೆಕೋಸು, ಹೂಕೋಸು, ಸೂರ್ಯಕಾಂತಿ, ಕಬ್ಬು, ಸಜ್ಜೆ ಮತ್ತು ತರಕಾರಿಗಳಲ್ಲಿ ಗಜ್ಜರಿ, ಪಾಲಕ್, ದಂಟು, ಹಾಗಲ, ಮೆಣಸಿನಕಾಯಿ, ಬದನೆ, ಟೊಮೆಟೊ ಇವುಗಳಿಗೆ 15 ರಿಂದ 20 ಕಿಲೊಗಳವರೆಗೆ ಬೀಜಾಮೃತವನ್ನು ಸಿಂಪಡಿಸಿ ನೆನೆಸಿರಿ. 250 ಗ್ರಾಂ ಅಜಟೊಬಕ್ಟರ್ ಜೀವಾಣು ಸಂವರ್ಧಕ, 250 ಗ್ರಾಂ ಪಿಎಸ್‌ಬಿಯನ್ನು ಲೇಪಿಸಿ ಅಥವಾ ಈ ಎರಡು ಜೀವಾಣು ಸಂವರ್ಧಕಗಳನ್ನು ಬೀಜಾಮೃತದಲ್ಲಿ ಮಿಶ್ರಣ ಮಾಡಿ ಮೇಲಿನಿಂದ ಲೇಪ ಹಾಕಿ, ಬೀಜ ಕೆಡದಂತೆ ಗಮನ ಹರಿಸಿ. ಈ ಬೀಜವನ್ನು

ನೆರಳಿನಲ್ಲಿ ಒಣಗಿಸಿ 8–10 ಗಂಟೆಯೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತನೆ ಮಾಡಿರಿ.

**(ಬಿ) ದ್ವಿದಳ ಧಾನ್ಯಗಳಿಗಾಗಿ ಬೀಜ ಸಂಸ್ಕಾರ ಮಾಡುವ ವಿಧಾನ** :–

ಅಲಸಂದೆ, ಕಡಲೆಕಾಯಿ, ಹೆಸರು, ತೊಗರಿ, ಉದ್ದು, ಅವರೆ, ಬಟಾಣಿ, ಗೋರಿ, ಸೆಣಬು, ಕಡಲೆ, ಸೋಯಾಬೀನ್, ಬೆಳ್ಳುಳ್ಳಿ ಗರಿ ಈ ಬೆಳೆಗಳಿಗೆ 15–20 ಕಿಲೊ ಬೀಜಗಳ ಮೇಲೆ ಬೀಜಾಮೃತವನ್ನು ಸಿಂಪಡಿಸಿ ಮತ್ತು 250 ಗ್ರಾಂ ರಾಯ್‌ಜೊಬೀಯಂ, 250 ಗ್ರಾಂ ಪಿಎಸ್‌ಬಿಯನ್ನು ಲೇಪಿಸಿ ಅಥವಾ ಈ ಎರಡು ಜೀವಾಣುಗಳನ್ನು ಬೀಜಾಮೃತಕ್ಕೆ ಮಿಶ್ರಣ ಮಾಡಿ ಬೀಜದ ಮೇಲೆ ಲೇಪಿಸಿ, ಬೀಜಗಳು ಕೆಡದಂತೆ ನೋಡಿಕೊಳ್ಳಿ. ಈ ಬೀಜಗಳನ್ನು ನೆರಳಿನಲ್ಲಿ ಒಣಗಿಸಿ, 8–10 ಗಂಟೆಗಳೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

10) **ಜೈವಿಕ ಗೊಬ್ಬರ (ಜೀವಾಣು ಸಂವರ್ಧಕ)** :–

(ಎ) **ರಾಯ್‌ಜೊಬೀಯಂ ಜೀವಾಣು ಸಂವರ್ಧಕ** – ಇದನ್ನು ಅಲಸಂದೆ, ನೆಲಗಡಲೆ, ಹೆಸರು, ತೊಗರಿ, ಉದ್ದು, ಅವರೆ, ಕಾಡು ಹೆಸರು, ಬಟಾಣಿ, ಗೋರಿ, ಸೆಣಬು, ಕಡಲೆ, ಸೋಯಾಬೀನ್, ಬೆಳ್ಳುಳ್ಳಿ ಹುಲ್ಲು ಇತ್ಯಾದಿ ಬೆಳೆಗಳಿಗೆ ಬಳಸಬಹುದು. ಇದರಿಂದ.....

(1) ಬೆಳೆಯಲ್ಲಿ ಶೇ. 15–20 ರಷ್ಟು ವೃದ್ಧಿಯಾಗುತ್ತದೆ.

(2) ಬೀಜಗಳ ಮೊಳಕೆಯ ದಕ್ಷತೆ ಹೆಚ್ಚುತ್ತದೆ.

(3) ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ.

(4) ಭೂಮಿಯಲ್ಲಿ ಸಾರಜನಕದ ಪ್ರಮಾಣ ಹೆಚ್ಚುತ್ತದೆ.

(5) ಜಮೀನಿನಲ್ಲಿ ಇಂಗಾಲ–ಸಾರಜನಕದ ಪ್ರಮಾಣವನ್ನು ಯೋಗ್ಯ ರೀತಿಯಲ್ಲಿಟ್ಟು ಭೂಮಿಯನ್ನು ಶಕ್ತಿಶಾಲಿಗೊಳಿಸುತ್ತದೆ.

**(ಬಿ) ಅಜಿಟೊಬಕ್ಟರ್ ಜೀವಾಣು ಸಂವರ್ಧಕ** :– ಇದನ್ನು ಜೋಳ, ರಾಗಿ, ಗೋದಿ, ಭತ್ತ, ಹತ್ತಿ, ಕಬ್ಬು, ಹೂಕೋಸು, ಎಲೆಕೋಸು, ಸೂರ್ಯಕಾಂತಿ, ನವಣೆ, ಮೆಕ್ಕೆಜೋಳ ಮತ್ತು ತರಕಾರಿಗಳಲ್ಲಿ ಕ್ಯಾರೆಟ್, ಪಾಲಕ್, ದಂಟು, ಹಾಗಲ, ಮೆಣಸಿನಕಾಯಿ, ಬದನೆ,ಟೊಮೆಟೋ ಇತ್ಯಾದಿಗಳಲ್ಲಿ ಬಳಸಲಾಗುತ್ತದೆ. ಇದರಿಂದ

(1) ಬೆಳೆಯಲ್ಲಿ ಉತ್ಪಾದನಾ ಶಕ್ತಿ ಹೆಚ್ಚುತ್ತದೆ.

(2) ಬೀಜಗಳ ಮೊಳಕೆ ಶಕ್ತಿ ಹೆಚ್ಚುತ್ತದೆ.

(3) ಗಿಡಗಳ ಬೇರುಗಳು ವೃದ್ಧಿಯಾಗುತ್ತವೆ.

(4) ಬೆಳೆಯ ಉತ್ಪಾದನಾ ಗುಣಮಟ್ಟವು ಹೆಚ್ಚುತ್ತದೆ.

(5) ವಿಷಜನ್ಯ ರೋಗಗಳನ್ನು ತಡೆಗಟ್ಟಲು ಸಹಕರಿಸುತ್ತದೆ.

(6) ತರಕಾರಿ ಬೆಳೆಗಳಲ್ಲಿ ಓಜೋನ್ ದ್ರವ್ಯದ ವೃದ್ಧಿ, ಬಟಾಣಿಯಲ್ಲಿ ಪಿಷ್ಟ, ಗೆಣಸು ಮತ್ತು ಕಬ್ಬಿನಲ್ಲಿ ಸಕ್ಕರೆ ಪ್ರಮಾಣವು ಹೆಚ್ಚುತ್ತದೆ.

**(ಸಿ) ಅಜೋಸ್ಪಿರಿಲಿಮ್ ಜೀವಾಣು ಸಂವರ್ಧಕ** :– ಈ ಜೀವಾಣು ಸಂವರ್ಧಕವು ಮೆಕ್ಕೆಜೋಳ,ಜೋಳ, ಭತ್ತ,

ನವಣೆ, ಗೋದಿ, ಕಬ್ಬು ಮತ್ತು ಹುಲ್ಲಿನಂತಹ ಬೆಳೆಗೆ ಬೇಕಾಗುತ್ತದೆ. ಈ ಜೀವಾಣುವು ಅಜಟೋಬಕ್ಟರ್ ಜೀವಾಣುಗಿಂತಲೂ ಶೇ. 20 ರಷ್ಟು ಹೆಚ್ಚಾಗಿ ಗಾಳಿಯಿಂದ ಸಾರಜನಕವನ್ನು ಬೆಳೆಗಳಿಗೆ ಒದಗಿಸುತ್ತದೆ. ಆದ್ದರಿಂದ ಶೇ. 15–16 ಹೆಚ್ಚು ಉತ್ಪಾದನೆ ಸಿಗುತ್ತದೆ. ಇದರ ಬಳಕೆಯಿಂದ ಪ್ರತಿ ಎಕರೆಗೆ 8 ಕಿಲೊ ಸಾರಜನಕವು ಸ್ಥಿರವಾಗಿ ನಿಲ್ಲುತ್ತದೆ.

**(ಡಿ) ಸ್ಫುರದ (ಪಿ.ಎಸ್.ಬಿ) ಜೀವಾಣು ಸಂವರ್ಧಕ :–** ಈ ಜೀವಾಣು ಎಲ್ಲಾ ಬಗೆಯ ಬೆಳೆಗಳಿಗೆ ತುಂಬಾ ಅವಶ್ಯಕವಾಗಿದೆ. ಇದರಿಂದ ಸಾಯಟ್ರಿಕ್, ಲೈವಟೀಕ್, ಸವಿಸಮಿಕ್, ಮೌಲಿಕ್ ಮತ್ತು ಫ್ಯೂಮರಿಕ್‌ನಂತಹ ಸಾವಯವ ದ್ರಾವಣವು ಪ್ರಾಪ್ತಿಯಾಗುತ್ತದೆ. ಈ ದ್ರಾವಣವು ಅವಿದ್ರಾವ್ಯ ಸ್ವರೂಪದಲ್ಲಿರುವಂತಹ ಜೀವಾಣು ಸಂವರ್ಧಕವನ್ನು ದ್ರಾವಣ ಸ್ವರೂಪದಲ್ಲಿ ರೂಪಾಂತರಗೊಳಿಸುತ್ತದೆ. ಇದರಿಂದ ಭೂಮಿಯಲ್ಲಿ ಕ್ಷಾರ ಪದಾರ್ಥವು ಕಡಿಮೆಯಾಗಿ ಕ್ಯಾಲ್ಸಿಯಂ, ಮೆಗ್ನೇಸಿಯಂ, ಲೋಹ, ಅಲ್ಯುಮಿನಿಯಂ ಇತ್ಯಾದಿ ಮೂಲದ್ರವ್ಯಗಳು ಶಾಶ್ವತಗೊಳ್ಳುತ್ತವೆ. ಇವು ಪಿಎಸ್‌ಬಿ ಜೊತೆಯಲ್ಲಿ ಸಂಯೋಗವಾಗುವುದಿಲ್ಲ ಮತ್ತು ಪಿಎಸ್‌ಬಿಯು ಅರ್ಥೋಪಾಸ್ಫೇಟ್ ಸ್ವರೂಪದಲ್ಲಿರುವುದರಿಂದ ಬೆಳೆಗೆ ಪ್ರಾಪ್ತಿಯಾಗುತ್ತದೆ.

**(ಇ) ಜೀವಾಣು ಗೊಬ್ಬರವನ್ನು ಬಳಸುವ ವಿಧಾನ** :

ಒಂದು ಎಕರೆ ಜಮೀನಿಗಾಗಿ

(1) ಒಂದು ಕಿಲೊ ರಾಯ್‌ಜೋಬೀಯಂ ಅಥವಾ ಒಂದು ಕಿಲೊ ಅಜಿಟೊಬಕ್ಟರ್ ಅಥವಾ ಒಂದು ಕಿಲೊ ಅಜೋಸ್ಪಿರಿಲಿಮ್, 25 ಕಿಲೊ ಸಗಣಿ ಗೊಬ್ಬರದಲ್ಲಿ ಮಿಶ್ರಣ ಮಾಡಿ, ಮೇಲಿಂದ ನೀರನ್ನು ಸಿಂಪಡಿಸಿ ಒಂದು ಅಥವಾ ಎರಡು ದಿನಗಳವರೆಗೆ ನೆರಳಿನಲ್ಲಿಡಿ.

(2) ಜೊತೆಗೆ ಒಂದು ಕಿಲೊ ಪಿ.ಎಸ್.ಬಿ.ಯನ್ನು 25 ಕಿಲೊ ಗೊಬ್ಬರದ ಜೊತೆ ಮಿಶ್ರಣ ಮಾಡಿ ಮೇಲಿಂದ ನೀರನ್ನು ಸಿಂಪಡಿಸಿ ಒಂದು ಅಥವಾ ಎರಡು ದಿನಗಳ ಕಾಲ ನೆರಳಿನಲ್ಲಿಡಿ.

(3) ಬೆಳೆಗನುಸಾರವಾಗಿ ಶಕ್ತಿಯನ್ನು ಉತ್ಪಾದನೆ ಮಾಡುವಂತಹ ಒಂದು ಕಿಲೊ ಜೀವಾಣು ಸಂವರ್ಧಕ, 25 ಕಿಲೊ ಸಗಣಿ ಗೊಬ್ಬರದಲ್ಲಿ ಮಿಶ್ರಣ ಮಾಡಿ. ಮೇಲಿಂದ ನೀರನ್ನು ಸಿಂಪಡಿಸಿ ಒಂದು ಅಥವಾ ಎರಡು ದಿನಗಳವರೆಗೆ ನೆರಳಿನಲ್ಲಿಡಿ.

ಈ ಮೂರನ್ನು ಮಿಶ್ರಣ ಮಾಡಿ ಜಮೀನು ಹಸಿಯಾಗಿದ್ದಾಗ ಸಂಜೆಯ ವೇಳೆಯಲ್ಲಿ ಜಮೀನಿಗೆ ಮಿಶ್ರಣ ಮಾಡಿ. ದ್ರಾವಣ ರೂಪದಲ್ಲಿರುವ ಜೀವಾಣುವನ್ನು ಹರಿಯುವ ನೀರಿನ ಮೂಲಕ ಜಮೀನಿಗೆ ಹಾಯಿಸಿರಿ.

**(ಎಫ್) 'ನಡೆಪ' ಪದ್ಧತಿಯಿಂದ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸುವ ವಿಧಾನ :–**

ಈ ಪದ್ಧತಿಯಿಂದ ಗೊಬ್ಬರ ತಯಾರಿಸಲು 15 ಅಡಿ ಉದ್ದ, 5 ಅಡಿ ಅಗಲ ಮತ್ತು 3 ಅಡಿ ಎತ್ತರದ ಇಟ್ಟಿಗೆಯ ಚೆಂಬರ್ ಮಾಡುವುದು ಅತೀ ಅಗತ್ಯ. ಗೋಡೆಯ ದಪ್ಪ 9 ಅಂಗುಲವಿರಲಿ. ಸುತ್ತಲೂ ಗೋಡೆಯಲ್ಲಿ ಒಂದು ಇಟ್ಟಿಗೆ ಅಗಲದಷ್ಟು ಎಷ್ಟು ರಂಧ್ರಗಳನ್ನು ಬೇಕಾದರೂ ನಿರ್ಮಿಸಿರಿ. ಇದರಿಂದ ಗಾಳಿಯು ಒಳಗೆ ನುಗ್ಗುವಂತಿರಲಿ. ಇಟ್ಟಿಗೆ ಗೋಡೆಯನ್ನು ಒಳಗೆ ಹೊರಗೆ ಸೆಗಣಿ ಮತ್ತು ನೀರಿನ ಬಗ್ಗಡದಿಂದ ಬಳಿಯಿರಿ ಮತ್ತು ಒಣಗಿದ ನಂತರ ಈ ಚೆಂಬರನ್ನು ಬಳಸಿಕೊಳ್ಳಬಹುದು.

ಈ ನಡೆಪ ಪದ್ಧತಿಯಲ್ಲಿ ಚೆಂಬರನ್ನು ತುಂಬಲು ಜಮೀನಿನಲ್ಲಿ ಉಳಿಯುವ ವ್ಯರ್ಥವಾದ ವಸ್ತುಗಳು ಅಂದರೆ ಬೆಳೆಗಳ ಬೇರು, ಕಾಂಡ, ಹುಲ್ಲು ಅಥವಾ ಧಾನ್ಯದ ಭೂಸಾ, ಗೋದಿಯ ಭೂಸಾ, ಕಡಲೆಕಾಯಿಯ ಸಿಪ್ಪೆ, ಸೋಯಾಬೀನ್‌ನ ಭೂಸಾ, ಕಬ್ಬಿನ ತರಗು ಅಥವಾ ಹಸುವಿನ ಸಗಣಿ ಗೊಬ್ಬರ ಇತ್ಯಾದಿಗಳನ್ನು ಬಳಸಿಕೊಳ್ಳಬಹುದು.

ಚೆಂಬರನಲ್ಲಿ ಮೊದಲು ಸಗಣಿ ಮತ್ತು ನೀರನ್ನು ಮಿಶ್ರಣ ಮಾಡಿಕೊಂಡು ಗೋಡೆ ಹಾಗು ನೆಲಕ್ಕೆ ಸಿಂಪಡಿಸಿರಿ. ಮತ್ತೆ ಆರು ಅಂಗುಲ ದಪ್ಪಕ್ಕೆ ಜಮೀನಿನ ವ್ಯರ್ಥವಾದ ವಸ್ತುಗಳನ್ನು ತುಂಬಿರಿ. ಇದರ ಮೇಲೆ ಕಹಿಬೇವಿನ ಎಲೆ, ಆಡುಮುಟ್ಟದ ಸೊಪ್ಪು, ಗ್ಲಿರಿಸೀಡಿಯಾ ಇತ್ಯಾದಿ ಹಸಿರು ಎಲೆಗಳನ್ನು ಮಿಶ್ರಣ ಮಾಡಿ ಹರಡಿರಿ.

ಇದರ ಮೇಲೆ 4 ಕಿಲೊ ದೇಶಿ ಹಸುವಿನ ಸಗಣಿ ಗೊಬ್ಬರವನ್ನು 150 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ. ಇದರ ಮೇಲೆ 50–60 ಕಿಲೊ ಜಮೀನಿನ ಮಣ್ಣು ಸಮವಾಗಿ ಹರಡಿರಿ. ಮತ್ತು ಮಣ್ಣು ನೆನೆಯುವವರೆಗೆ ನೀರನ್ನು ಸಿಂಪಡಿಸಿ. ಈಗ ಒಂದು ಹಂತವು ಪೂರ್ಣಗೊಂಡಿತು. ಮತ್ತೆ ಇದರ ಮೇಲೆ ಹಾಗೆಯೇ ಇನ್ನೊಂದು ಹಂತವನ್ನು ಪೇರಿಸಿರಿ. ಮತ್ತು ಚೆಂಬರಿನ ಮೇಲೆ ಎರಡುವರೆ ಅಡಿ ಎತ್ತರದವರೆಗೆ ತುಂಬುತ್ತಾ ಹೋಗಿರಿ. ಚೆಂಬರ್ ತುಂಬಿದ ನಂತರ 400–500 ಕಿಲೊ ಮಣ್ಣನ್ನು ನೆನೆಸಿ 3 ಅಂಗುಲದಷ್ಟು ದಪ್ಪವಾಗಿ ಲೇಪವನ್ನು ಏರಿಸಿರಿ. ಅದರ ಮೇಲೆ ಸಗಣಿಯ ಬಗ್ಗಡದ ಲೇಪ ಹಾಕಿರಿ. ಬಿಸಿಲಿಗೆ ಮಣ್ಣು ಒಡೆಯುತ್ತದೆ. ಅದನ್ನು ಸಗಣಿ ಬಗ್ಗಡದಿಂದ ಮುಚ್ಚುತ್ತಾ ಹೋಗಿರಿ. ಬಿಸಿಲಿನ ಬೇಗೆ ಹೆಚ್ಚಾಗಿದ್ದರೆ ಮೇಲ್ಭಾಗದಲ್ಲಿ ಹುಲ್ಲು–ಸೊಪ್ಪು (ವ್ಯರ್ಥವಾದವು)ಗಳನ್ನು ಹರಡಿರಿ. 90 ರಿಂದ 120 ದಿನಗಳೊಳಗೆ ಕಾಂಪೋಸ್ಟ್ ಗೊಬ್ಬರವು ಸಿದ್ಧಗೊಳ್ಳುವುದು. ಈ ಗೊಬ್ಬರವನ್ನು ಒಣಗಲು ಬಿಡಬೇಡಿ. ಶೇ. 20 ರಷ್ಟು ಹಸಿಯಾಗಿರಲಿ.

ಇದರಲ್ಲಿ ಮೂರುವರೆಯಿಂದ ನಾಲ್ಕು ಟನ್ ಕಾಂಪೋಸ್ಟ್ ಗೊಬ್ಬರವು ದೊರೆಯುತ್ತದೆ. ಈ ಗೊಬ್ಬರದಲ್ಲಿ 0.5% ರಿಂದ 01% ರಷ್ಟು ಸಾರಜನಕ, 0.5% ರಿಂದ 08 ರಷ್ಟು ಸ್ಫುರದ ಮತ್ತು 1.2% ರಿಂದ 1.4% ಪೊಟಾಷ್ (ಪೊಟ್ಯಾಷ್) ಸಿಗುತ್ತದೆ.

**(ಜಿ). ಎರೆಹುಳುವಿನ ಗೊಬ್ಬರವನ್ನು ತಯಾರಿಸುವ ವಿಧಾನ :–**

ಎರೆಗೊಬ್ಬರ ತಯಾರಿಸಲು ನೆರಳಿನ ಅಗತ್ಯವಿದೆ. ಸೂರ್ಯನ ಬೆಳಕು ಮತ್ತು ಮಳೆಯಿಂದ ರಕ್ಷಿಸಲು ಚಪ್ಪರವನ್ನು ಹಾಕಬೇಕು. ಅದರ ಕೆಳಗಡೆ ಮೂರು ಅಡಿ ಅಗಲ ಮತ್ತು 8–10 ಅಡಿ ಉದ್ದದ ಜಾಗದಲ್ಲಿ ಎರಡೂವರೆ ಅಡಿ ಎತ್ತರದ ನಾಲ್ಕು ಅಂಗುಲದ ಗೋಡೆಯನ್ನು ನಿರ್ಮಿಸಿ. ಮೊದಲು ನೀರನ್ನು ಭೂಮಿಯ ಮೇಲೆ ಸಿಂಪಡಿಸಿ, ತೇವ ಮಾಡಿರಿ.੍ ಮೊದಲು ವ್ಯರ್ಥವಸ್ತುಗಳು ಅಂದರೆ ಧಾನ್ಯದ ಭೂಸ, ಗೋದಿ ಭೂಸ, ಕಬ್ಬಿನ ಗರಿ ಇತ್ಯಾದಿಗಳನ್ನು (ಇವು ಬೇಗ ಕೊಳೆಯುವುದಿಲ್ಲ, ಅಂತಹ ವಸ್ತುಗಳನ್ನು) 15 ರಿಂದ 20 ಸೆಂಟಿಮೀಟರನಷ್ಟು ದಪ್ಪವಾಗಿ ಹರಡಿರಿ. ಇದರ ಮೇಲೆ ನೀರನ್ನು ಸಿಂಪಡಿಸಿ ಹಸಿಮಾಡಿ, ಇದರ ಮೇಲೆ ಸಿದ್ಧವಾಗಿರುವ ಸಗಣಿಗೊಬ್ಬರ ಅಥವಾ ಕಾಂಪೋಸ್ಟ್ ಗೊಬ್ಬರ ಅಥವಾ ಜಮೀನಿನ ಮಣ್ಣನ್ನು 5 ಸೆಂಟಿಮೀಟರನಷ್ಟು ದಪ್ಪಕ್ಕೆ ಹರಡಿರಿ. ಇದರಿಂದ ಎರೆಹುಳು ಸುರಕ್ಷಿತವಾಗಿರುತ್ತವೆ. ಇದರ ಮೇಲಕ್ಕೆ ಪೂರ್ಣವಾಗಿ ಸಿದ್ಧವಾಗಿರುವ ಎರೆಹುಳುಗಳನ್ನು

ಬಿಡಿ. ಪ್ರತಿ 10 ಚದರ ಅಡಿಯಲ್ಲಿ ಎರಡು ಸಾವಿರ ಎರೆಹುಳು ಬಿಡಿ. ಇದರ ಮೇಲ್ಭಾಗವನ್ನು ಎಲೆಗಳಿಂದ ಮುಚ್ಚಿರಿ. ಶೇಕಡ 40 ರಿಂದ 45ರಷ್ಟು ಹಸಿಯಾಗಿರುವಂತೆ ಗಮನದಲ್ಲಿಟ್ಟುಕೊಳ್ಳಿ. ಚಪ್ಪರದಡಿಯಲ್ಲಿ 20 ರಿಂದ 30ರಷ್ಟು ಸೆಂಟಿಗ್ರೇಡ್ ಬಿಸಿಯಿರಲಿ. ಎರೆಹುಳುವನ್ನು ರಕ್ಷಿಸಲು ಒಳಕ್ಕೆ ಯಾವುದೇ ಕೀಟಗಳು ಅಥವಾ ಇರುವೆಗಳು ಹೋಗದಂತೆ ತುಂಬಾ ಚೆನ್ನಾಗಿ ನೋಡಿಕೊಳ್ಳಬೇಕು. ಒಂದು–ಎರಡು ದಿನಗಳಿಗೊಮ್ಮೆ ಅವಶ್ಯಕತೆಗನುಸಾರವಾಗಿ ನೀರನ್ನು ಸಿಂಪಡಿಸಿರಿ. 30–40 ದಿನಗಳಲ್ಲಿ ಪೂರ್ಣಪ್ರಮಾಣದ ಎರೆಗೊಬ್ಬರವು ಸಿದ್ಧವಾಗುವುದು. ಎರೆಹುಳುಗಳನ್ನು ಬೇರ್ಪಡಿಸಿ, ಗೊಬ್ಬರವನ್ನು ಜಮೀನು ಹಸಿಯಾಗಿದ್ದಾಗ ಜಮೀನಿಗೆ ಸೇರಿಸಿರಿ.

**ಶಿವ ಭಗವಾನುವಾಚ**

**ಪರಮಾತ್ಮನ ನೆನಪೆಂಬ ಜಲವನ್ನಿತ್ತು ಸ್ವ ಸ್ವರೂಪದ ಧೂಪವನ್ನಿತ್ತು ಬೀಜಗಳನ್ನು ಫಲೀಭೂತಗೊಳಿಸಿರಿ.**

# ಬೆಳೆಗಳ ಸಂರಕ್ಷಣೆ

ಪ್ರಕೃತಿಯಲ್ಲಾಗುವ ಬದಲಾವಣೆಗಳನ್ನು ಸಹಿಸಿಕೊಳ್ಳುವ ಮತ್ತು ಆಘಾತಗಳನ್ನು ಎದುರಿಸುವ ಶಕ್ತಿಯನ್ನು ಪ್ರಕೃತಿಯು ಎಲ್ಲಾ ವೃಕ್ಷಗಳಿಗೂ ನೀಡಿದೆ. ಹಾಗೇನಾದರೂ ಜಮೀನು ಶಕ್ತಿಶಾಲಿಯಾಗಿದ್ದರೆ, ಜಮೀನಿನಲ್ಲಿ ಜೀವಾಣುಗಳ ಸಂಖ್ಯೆ ಅಪಾರವಾಗಿದ್ದರೆ, ಶೇ. 99 ರಷ್ಟು ಯಾವುದೇ ಕೀಟ ಅಥವಾ ವಿಷಕಾರಕ ರೋಗಗಳು ಬೆಳೆಗಳ ಮೇಲೆ ಬರುವುದಿಲ್ಲ. ಆದರೆ ಜಮೀನಿನಲ್ಲಿ ಶಕ್ತಿಯ ಕೊರತೆಯಾದಾಗ ಬೆಳೆಯು ದುರ್ಬಲವಾಗುತ್ತದೆ. ಇದರಿಂದ ಅನೇಕಾನೇಕ ಕೀಟ ಅಥವಾ ರೋಗಗಳು ಬೆಳೆಗೆ ಬರುತ್ತವೆ. ಪ್ರಕೃತಿಯ ನಿಯಮಾನುಸಾರ ರೈತರುಗಳು ಯಾವ ಅವಧಿಯಲ್ಲಿ ಯಾವ ಬೆಳೆಯನ್ನು ಬೆಳೆಯಬೇಕಿರುವುದೋ ಆ ಅವಧಿಯಲ್ಲಿ ಆ ಬೆಳೆಯನ್ನು ಬೆಳೆಯಬೇಕು. ವನಸ್ಪತಿಗಳೂ ಕೂಡ ಆ ಅವಧಿಯಲ್ಲಿ ತಮ್ಮನ್ನು ಸಂರಕ್ಷಣೆ ಮಾಡಿಕೊಳ್ಳುತ್ತವೆ ಮತ್ತು ಕಡಿಮೆ ಖರ್ಚಿನಲ್ಲಿ ಹೆಚ್ಚು ಉತ್ಪಾದನೆಯು ದೊರಕುತ್ತದೆ.

ಇಂದು ರಾಸಾಯನಿಕ ಗೊಬ್ಬರದಿಂದ ಭೂಮಿಯು ಶಕ್ತಿಹೀನವಾಗಿದೆ ಮತ್ತು ಕೀಟನಾಶಕಗಳ ಮೂಲಕ ಬೆಳೆಯು ದುರ್ಬಲವಾಗಿದೆ. ಕೀಟಗಳು ಬೆಳೆಗಳ ಮೇಲೆ ಅಕ್ರಮಣ ಮಾಡಿದಾಗ ಗಿಡಗಳು ಸಂಪೂರ್ಣವಾಗಿ ಜಮೀನಿಗೆ ಸಂದೇಶವನ್ನು ಕೊಡುತ್ತವೆ ಮತ್ತು ಎಲ್ಲಾ ಗಿಡಗಳು ಈ ಕೀಟಗಳ ಅಥವಾ ರೋಗಗಳನ್ನು ಎದುರಿಸಲು ಪ್ರೇರಣೆಗೊಳ್ಳುತ್ತವೆ. ಇದರ ನಂತರ ದುರ್ಬಲವಾದ ಗಿಡಗಳು ಸಾಯುತ್ತವೆ ಮತ್ತೆ ಉಳಿದ ಗಿಡಗಳು ಸುರಕ್ಷಿತವಾಗಿರುತ್ತವೆ.

ಉದಾ: ಸಕ್ಕರೆ ಅಥವಾ ಬೆಲ್ಲ ನೆಲದ ಮೇಲೆ ಬಿದ್ದರೆ ಇರುವೆಗಳು ಬರುತ್ತವೆ. ಸತ್ತ ಪ್ರಾಣಿಗಳನ್ನು ತಿನ್ನಲು ಹದ್ದುಗಳು ಒಟ್ಟಾಗಿ ಹಾರಿ ಬರುತ್ತವೆ. ಎಲ್ಲಿಯೂ ಕಾಣದೇ ಇರುವಂತಹ ಹದ್ದು ಕಾಗೆಗಳು ಎಲ್ಲಿಂದ ಬರುತ್ತವೆ? ಇದು ಪ್ರಕೃತಿಯು ರೂಪಿಸಲ್ಪಟ್ಟಿರುವ ವ್ಯವಸ್ಥೆ. ಹಾಗೆಯೇ ಬೆಳೆಗಳ ಮೇಲೆ ಕೀಟಗಳು ಬಂದಾಗ ಪರಭಕ್ಷಕ ಕೀಟಗಳು ಬರುತ್ತವೆ ಮತ್ತು ಅವುಗಳನ್ನೂ ತಿಂದು ಹಾಕುತ್ತವೆ. ಆದರೆ ಆ ಪರಭಕ್ಷಕ ಕೀಟಗಳಿಗಾಗಿ ಸೂಕ್ಷ್ಮವಾದ ಯಾವ ಪರ್ಯಾವರಣದ ವ್ಯವಸ್ಥೆ ಇತ್ತೋ ಅದನ್ನು ನಾವು ನಾಶ ಮಾಡಿದ್ದೇವೆ. ಆದುದರಿಂದ ಈ ಕೀಟಗಳನ್ನು ನಾಶ ಮಾಡುವ ಕೆಲಸವನ್ನು ಈಗ ನಾವು ಮಾಡಬೇಕಾಗಿದೆ. ಈ ಸೃಷ್ಠಿಯಲ್ಲಿ ಶೇ. ಒಂದರಷ್ಟು ಕೀಟಗಳು ಶಾಖಾಹಾರಿಗಳಾಗಿವೆ. ಇವು ಎಲೆ, ಹಣ್ಣು, ಹೂಗಳನ್ನು ತಿಂದು ನಷ್ಟವನ್ನುಂಟು ಮಾಡುತ್ತವೆ. ಆದರೆ ಅಂತಹ ಕೀಟಗಳನ್ನೂ ತಿನ್ನುವ ಕೀಟಗಳು ಶೇ. 99 ರಷ್ಟಿವೆ. ಅವು ಮೂಲತಃ ಮಾಂಸಹಾರಿಗಳಾಗಿವೆ. ಅವುಗಳಿಂದ ನಮಗೇನು ನಷ್ಟವಿಲ್ಲ. ಯಾವಾಗ ನಾವು ಶೇ. ಒಂದರಷ್ಟು ಕೀಟಗಳನ್ನು ನಾಶ ಮಾಡುತ್ತೇವೊ ಆಗ ಶೇ. 99 ರಷ್ಟು ಕೀಟಗಳು ಸಾಯುತ್ತವೆ.

ಇವು ನಮಗೆ ಹಾನಿಕಾರಕವಾಗಿವೆ. ಆದುದರಿಂದ ಸಾಧ್ಯವಾದಷ್ಟು ಪ್ರಕೃತಿಯ ನಿಯಮಕ್ಕನುಸಾರವಾಗಿ ಸೂಕ್ಷ್ಮ ಪರ್ಯಾವರಣವನ್ನು ನಿರ್ಮಿಸುವುದು ತುಂಬಾ ಅಗತ್ಯ. ಮತ್ತು ಜಮೀನನ್ನು ಶಕ್ತಿಶಾಲಿಯನ್ನಾಗಿ ಮಾಡುವುದು ಅಷ್ಟೇ ಅಗತ್ಯವೆನಿಸಿದೆ.

**ಬೆಳೆಯನ್ನು ಶಕ್ತಿಶಾಲಿಯನ್ನಾಗಿ ಮಾಡಲು ಹಾಗೂ ರೋಗ ಕೀಟಕಗಳನ್ನು ನಿಯಂತ್ರಿಸಲು ಕೆಲವು ಉಪಾಯಗಳು:**

1) **ದಶಪರ್ಣಿ ಅರ್ಕ :–**

| | |
|---|---|
| 1) ಕಹಿ ಬೇವಿನ ಎಲೆ 5 ಕಿಲೋ. | 2) ಸೀತಾಫಲದ ಎಲೆ 3 ಕಿಲೋ |
| 3) ಬಿಳಿ ದತ್ತೂರಿ ಎಲೆ 2 ಕಿಲೋ | 4) ಕಣಿಗಲೆ ಎಲೆ 2 ಕಿಲೋ |
| 5) ಎಕ್ಕದ ಎಲೆ 2 ಕಿಲೋ | 6) ಪರಂಗಿ ಎಲೆ 2 ಕಿಲೋ |
| 7) ಹರಳಿನ ಎಲೆ 2 ಕಿಲೋ | 8) ಹೊಂಗೆ ಎಲೆ 2 ಕಿಲೋ |
| 9) ಅಮೃತಬಳ್ಳಿ ಎಲೆ 2 ಕಿಲೋ | 10) ಪಪ್ಪಾಯಿ ಎಲೆ 2 ಕಿಲೋ |
| 11) ಹಸಿರು ಮೆಣಸಿನ ಕಾಯಿ 2 ಕಿಲೋ (ಕುಟ್ಟಿದ) | 12) ಗೋಮೂತ್ರ 200 ಮಿಲಿ ಲಿ. |

ಈ ಎಲ್ಲವನ್ನು 200 ಲೀಟರ್ ನೀರಿನಲ್ಲಿ ನೆನೆಸಿ 30 ರಿಂದ 40 ದಿನಗಳವರೆಗೆ ಕೊಳೆಯಲು ಬಿಡಿ. ಅದನ್ನು ಪಾತ್ರೆಗೆ ಹಾಕಿ ಪಾತ್ರೆಯ ಬಾಯಿಯನ್ನು ಬಟ್ಟೆಯಿಂದ ಕಟ್ಟಿ ಇಡಿ. ಈಗ ಶೇಖರಿಸಿದ ದ್ರಾವಣವು ಸಿದ್ಧವಾಗುತ್ತದೆ. ಇದರಲ್ಲಿ ಒಂದು ಲೀಟರ್ ದ್ರಾವಣವನ್ನು 15 ಲೀಟರ ನೀರಿಗೆ ಮಿಶ್ರಣ ಮಾಡಿ 9ಕೀಟಗಳ ತೀವ್ರತೆ ನೋಡಿ) ಬೆಳೆಯ ಮೇಲೆ ಸಿಂಪಡಿಸಬಹುದು. ಇದು ಅನೇಕ ಬಗೆಯ ವಿಷಕಾರಕ ರೋಗ ನಾಶಕ್ಕಾಗಿ ಹಾಗೂ ಕೀಟನಾಶಕ್ಕಾಗಿ ಬಳಸಲಾಗುತ್ತದೆ. ಹಾಗೇನಾದರೂ ಈ ಮಿಶ್ರಣವನ್ನು ಯಾವುದೇ ಬೆಳೆಯಾಗಿರಲಿ, ಯಾವುದೇ ರೋಗಗಳು ಅಥವಾ ಕೀಟಗಳು ಬರುತ್ತವೆಂದು ಗೊತ್ತಾದಾಗ ಮೊದಲೇ ಈ ದ್ರಾವಣವನ್ನು ಸಿಂಪಡಿಸುವುದರಿಂದ ಲಾಭವಾಗುತ್ತದೆ, ಒಮ್ಮೆ ತಯಾರಾದ ದ್ರಾವಣವನ್ನು ಆರು ತಿಂಗಳವರೆಗೆ ಬಳಸಬಹುದು.

2) **ಬೇವಿನ ದ್ರಾವಣ :–**

5 ಕಿಲೋ ಕಹಿ ಬೇವಿನ ಬೀಜವನ್ನು ಕುಟ್ಟಿ 9 ಲೀಟರಿನಲ್ಲಿ ಇಡೀ ರಾತ್ರಿ ನೆನೆಸಿರಿ ಮತ್ತು ಇದಕ್ಕೆ 500 ಗ್ರಾಂ ಹಸಿಮೆಣಸಿನಕಾಯನ್ನು ಚೆನ್ನಾಗಿ ಅರೆದು ಬೆರಸಿರಿ. ಇದರಿಂದ ಬೇವಿನ ಅರ್ಕವು ಶಕ್ತಿ ಶಾಲಿಯಾಗುತ್ತದೆ. ಜೊತೆಗೆ ಒಂದು ಲೀಟರ್ ನೀರಿಗೆ ಯಾವುದಾದರು ವಾಷಿಂಗ್ ಪೌಡರನ್ನು ಬೆರೆಸಿರಿ. ಮರುದಿನ ಈ ಎರಡು ಮಿಶ್ರಣಗಳನ್ನು ಜರಡಿ ಹಿಡಿಯಿರಿ ಮತ್ತು 100 ಲೀಟರ್ ನೀರಿನಲ್ಲಿ ಮಿಶ್ರಣ ಮಾಡಿ ಯಾವ ದಿನ ಬಳಸುವಿರೊ ಅದಕ್ಕೆ ಮೊದಲು ಒಂದು ದಿನ ಇದನ್ನು ತಯಾರಿಸಿ ಇಟ್ಟುಕೊಳ್ಳಿ. ಇದರಿಂದ ಅನೇಕ ಬಗೆಯ ಕೀಟಗಳು ಮತ್ತು ವಿಷಕಾರಕ ರೋಗಗಳನ್ನು ನಿಯಂತ್ರಿಸ ಬಹುದು.

3) **ಲೀಫ್ ಮೈನರ್ ನಿಯಂತ್ರಣಕ್ಕಾಗಿ ;–**

250 ಮಿಲಿ. ಮಜ್ಜಿಗೆ, 50 ಗ್ರಾಂ. ನಿಂಬೆರಸ, 100 ಗ್ರಾಂ ಬೆಲ್ಲ, 100 ಮಿಲಿ ಹುಣಸೆ ಹಣ್ಣಿನರಸ, 10 ಗ್ರಾಂ ಹಿಂಗು, 10 ಗ್ರಾಂ ಕರ್ಪೂರವನ್ನು 15 ಲೀ.ನೀರಿಗೆ ಮಿಶ್ರಣ ಮಾಡಿ ಬೆಳೆಯ ಮೇಲೆ ಸಿಂಪಡಿಸಿ. ಇದರಿಂದ ಎಲ್ಲಾ ಬಗೆಯ ಕೀಟಗಳು ಓಡುತ್ತವೆ. ವಿಶೇಷವಾಗಿ ಲೀಫ್ ಮೈನರ್‌ಕ್ಕಾಗಿ ಇದೊಂದು ಬಹಳ ಪ್ರಭಾವಿ ಔಷದಿಯಾಗಿದೆ.

4) **ಮಿಲಿಬಗ್ಜ ಮತ್ತು ತ್ರಿಪ್ಸ (ರಸ ಹೀರುವ ಕೀಟ ಮತ್ತು ಬಿಳಿ ನೊಣ)ದ ನಿಯಂತ್ರಣಕ್ಕಾಗಿ :–**

200 ಲೀಟರ ನೀರಿನಲ್ಲಿ 5 ಕಿಲೋ ದೇಸಿ ಆಕಳದ ಗೊಬ್ಬರ, 5 ಲೀಟರ ಗೊಮೂತ್ರ ಇವೆರಡನ್ನು 24 ಘಂಟೆ ನೆನೆಯಿಸಿ ನಂತರ ಅದನ್ನು ಸಾಣಿಸಿ ಸಿಂಪಡಿಸಬೇಕು. ಇದರಿಂದ ಡಾವುನಿ ತ್ರಿಪ್ಸ ರೋಗಗಳು ಕಡಿಮೆಯಾಗುತ್ತವೆ. ಮತ್ತು ಎಲ್ಲ ಪ್ರಕಾರದ ಅನ್ನ ದ್ರವ್ಯಗಳು ಬೆಳೆಗಳಿಗೆ ಸಿಗುತ್ತವೆ.

ಅಥವಾ

* 5% ಬೇವಿನ ದ್ರಾವಣ, 3% ಗೊಮೂತ್ರ ಮಿಶ್ರಣ ಮಾಡಿ ಸಿಂಪಡಿಸಬೇಕು.

ಅಥವಾ

* 15 ಲೀಟರ ನೀರು, 30 ಗ್ರಾಂ ವ್ಹರ್ಟಿಸೀಲಿಯಂ ಬುರಸಿ, 500 ಮಿಲಿ ಲೀಟರ ಹಾಲು ಮಿಶ್ರಣ ಮಾಡಿ ಸಿಂಪಡಿಸಬೇಕು.

5) **ಘಫುಂದಿಗಾಗಿ (ಘಫುಂದಿರೋಧಕ) :–**

ಟ್ರಾಯಿಕೋಡಾರ್ಮ 1 ಕಿಲೊ ವನ್ನು 200 ಲೀ. ನೀರಿನಲ್ಲಿ ಮಿಶ್ರಣ ಮಾಡಿ ಸಂಜೆ ವೇಳೆ ಜಮೀನು ಹಸಿಯಾಗಿದ್ದಾಗ 1 ಎಕರೆ ಜಮೀನಿಗೆ ಸಿಂಪಡಿಸಿ. ಅನುಕೂಲವಾದರೆ ಬೇವಿನ ಕೊಂಬೆಗಳ ಮೂಲಕ ಸಿಂಪಡಿಸಿರಿ.

ಅಥವಾ

50 ಕಿಲೊ ಸಗಣಿಗೊಬ್ಬರ ಅಥವಾ 50 ಕಿಲೊ ಹಸಿ ಮಣ್ಣಿಗೆ 1 ಕಿಲೊ ಟ್ರಾಯಕೊಡಾರ್ಮ ಮಿಶ್ರಣಮಾಡಿ ಸಂಜೆ ವೇಳೆ ಜಮೀನು ಹಸಿಯಾಗಿದ್ದಾಗ ಸಿಂಪಡಿಸಿ (1 ಎಕರೆಗೆ.)

ಅಥವಾ

200 ಲೀ. ನೀರಿಗೆ 1 ಕಿಲೊ ಟ್ರಾಕೊಡಾರ್ಮವನ್ನು ಮಿಶ್ರಣಮಾಡಿ ಸಂಜೆಯ ವೇಳೆ (ಬಿಸಿಲು ಕಡಿಮೆಯಾದ ನಂತರ) ಬೆಳೆಗಳ ಮೇಲೆ ಸಿಂಪಡಿಸಿರಿ.

ಅಥವಾ

200 ಗ್ರಾಂ ವಾಯವಿಡಂಗವನ್ನು ಕುಟ್ಟಿ ಪುಡಿಮಾಡಿ ಮತ್ತು 3 ಲೀ. ಗೊಮೂತ್ರವನ್ನು 200 ಲೀ. ನೀರಿನಲ್ಲಿ ಮಿಶ್ರಣ ಮಾಡಿ 2 ದಿನಗಳ ಕಾಲ ಟಾಕಿಯಲ್ಲಿ ನೆನೆಸಿರಿ. ಟಾಕಿಯ ಪಾತ್ರೆಯ ಬಾಯನ್ನು ಬಟ್ಟೆಯಿಂದ ಕಟ್ಟಿರಿ. ಪ್ರತಿ ದಿನ ಈ ಮಿಶ್ರಣವನ್ನು 2 ಸಾರಿ ದೊಣ್ಣೆಯಿಂದ ತಿರುವುತ್ತಿರಿ. ನಂತರ ಜರಡಿಸಿ ಸಿಂಪಡಿಸಿ.

ಅಥವಾ

5 ಲೀ. ದೇಶಿ ಹಸುವಿನ ಮಜ್ಜಿಗೆಯನ್ನು ತಾಮ್ರದ ಪಾತ್ರೆಯಲ್ಲಿ ಚೆನ್ನಾಗಿ ಹುಳಿ ಬರುವಂತೆ ಇಡಿ. ನಂತರ ಇದನ್ನು 200 ಲೀ. ನೀರಿಗೆ ಬೆರೆಸಿರಿ. ಜೊತೆಗೆ 100 ಗ್ರಾಂ ಹಿಂಗು, 100 ಗ್ರಾಂ ಅರಿಸಿನವನ್ನು ಮಿಶ್ರಣಮಾಡಿ ಬೆಳೆಗಳ ಮೇಲೆ ಸಿಂಪಡಿಸಿರಿ.

6) **ಫಪುಂದಿಯ ಪ್ರಕಾರಗಳು ಮತ್ತು ಅದಕ್ಕಾಗಿ ಮಾಡಿದ ಉಪಾಯಗಳು :–**

1. **ಕರಪಾ (ಎಲೆಗಳ ಸುಡುವಿಕೆ)ದ ನಿಯಂತ್ರಣಕ್ಕಾಗಿ –**

**ಅ**) ಸೂರ್ಯೋದಯದ ಪೂರ್ವ ಮುಂಜಾನೆ ಯಾವ ದಿಕ್ಕಿನಿಂದ ಗಾಳಿ ಬೀಸುತ್ತದೆಯೋ ಆದಿಕ್ಕಿನಲ್ಲಿ ದೇಸಿ ಆಕಳಿನ ಸೆಗಣಿಯಿಂದ ತಯಾರಿಸಿದ ಕುಳ್ಳನ್ನು ಸುಟ್ಟು ಹೊಗೆ ಎಬ್ಬಿಸಿರಿ. ನಂತರ ಅದರ ಬೂದಿಯನ್ನು ಫಸಲಿನ ಮೇಲೆ ಎಸೆಯಿರಿ.

**ಬ**) 5 ಲೀಟರ ದೇಸಿ ಆಕಳದ ಮಜ್ಜಿಗೆಯನ್ನು 2 ದಿನಗಳ ವರೆಗೆ ತಾಮ್ರದ ಪಾತ್ರೆಯಲ್ಲಿ ಇಟ್ಟು 200 ಲೀಟರ ನೀರಿನ ಜೊತೆಗೆ 100 ಗ್ರಾಂ ಹೀಂಗ, 100 ಗ್ರಾಂ ಅರಿಶಿಣ ಮಿಶ್ರಣ ಮಾಡಿ ಫಸಲಿನ ಮೇಲೆ ಸಿಂಪಡಿಸಿರಿ.

2. **ತಾಂಬೇರಾ (ಜಂಗ ಹತ್ತುವದು) :–**

(ಅಕ್ಕಿ, ಸೋಯಾಬೀನ, ಗೋದಿ ಇಂಥಹ ಬೆಳೆಗಳ ಮೇಲೆ ಬರುವ ರೋಗಗಳು)

**ಅ**) ತಾಮ್ರ ರೋಗವನ್ನು ತಡೆಯಲು......... ಕಹಿಬೇವಿನ ಎಣ್ಣೆ 100 ಮಿಲಿ.ಲಿ. ಕರಂಜಿ (ಹೊಂಗೆ) ಎಣ್ಣೆ 100 ಮಿಲಿ ಲಿ. ಗೊಮೂತ್ರ 100 ಮಿಲಿ ಲಿ., ಸ್ಟಿಕರ 10 ಮಿಲಿ ಲಿ., (ಎಬ್ಸಾ 80, ಆಮವೇ, 20 ಗ್ರಾಂ ಸಾಬೂನ ಪಾವುಡರ), ಇವುಗಳನ್ನು 15 ಲೀಟರ್ ನೀರಿಗೆ ಮಿಶ್ರಣಮಾಡಿ ಸಿಂಪಡಿಸಿ.

ಅಥವಾ

**ಬ**) (ಕರಪಾ ರೋಗದ 'ಬಿ' ವಿಧಾನವನ್ನು ಪ್ರಯೋಗ ಮಾಡಬಹುದು.)

3. **ಭೂರಿ ಮತ್ತು ಡಾವುನೀ ಮಿಲ್ಡ್ಯೂದ ನಿಯಂತ್ರಣಕ್ಕಾಗಿ :–**

**ಎ**) ದೇಸಿ ಪಪ್ಪಾಯಿ ಎಲೆ 2 ಕಿಲೋ, ಸಹಜನದ ಎಲೆ 2 ಕಿಲೋ, 4 ಲೀಟರ ಗೊಮೂತ್ರ, 200 ಲೀಟರ ನೀರಿನಲ್ಲಿ ಮಿಶ್ರಣ ಮಾಡಿ 3 ದಿನ ಟಾಕಿಯಲ್ಲಿ (ಟಾಕಿಯ ಬಾಯಿಯನ್ನು ದಪ್ಪ ಬಟ್ಟೆಯಿಂದ ಕಟ್ಟಿ ಮುಚ್ಚಿರಿ)

ಕೊಳೆಯಲು ಬಿಡಿ. ಈ ಮಿಶ್ರಣವನ್ನು ಪ್ರತಿದಿನ ಎರಡು ಸಲ ಬಡಿಗೆಯಿಂದ ಗಡಿಯಾರದ ದಿಸೆಯಲ್ಲಿ ತಿರುಗಿಸಿರಿ ಮತ್ತು ಚಾಣಿಸಿ ಸಿಂಪಡಿಸಿರಿ.

ಅಥವಾ

**ಬಿ)** (ಕರಪಾ ರೋಗದ 'ಬಿ' ವಿಧಾನವನ್ನು ಪ್ರಯೋಗ ಮಾಡಬಹುದು.)

7). **ಬಿಳಿನುಸಿ (ಹೂಮನಿ) ಅಥವಾ ಗೆದ್ದಲು (ಉದಈ) ಬಂದರೆ :–**

1. ಒಂದು ಕಿ.ಲೋ ಬಚ (ವೆಖಂಡ) ನ್ನು ಕುಟ್ಟಿ ಪುಡಿ ಮಾಡಿರಿ. ಅದನ್ನು 6 ಲೀಟರ್ ನೀರಿನಲ್ಲಿ ಹಾಕಿ 3 ಲೀಟರನಷ್ಟಾಗುವ ವರೆಗೆ ಕುದಿಸಿರಿ. ಈ ಮಿಶ್ರಣ ತಣ್ಣಗಾದನಂತರ 500 ಗ್ರಾಂ ಹಿಂಗು, 200 ಲೀಟರ್ ನೀರಿನಲ್ಲಿ ಮಿಶ್ರಣಮಾಡಿ ಒಂದು ಎಕರೆ ಭೂಮಿಗೆ ಅದು ಹಸಿ ಇದ್ದಾಗ ಸಿಂಪಡಿಸಿರಿ ಇಲ್ಲವೇ ನೀರಿನೊಂದಿಗೆ ಹರಿಬಿಡಿರಿ.

ಅಥವಾ

2. ಒಂದು ಕಿಲೋ ಎಕ್ಕದ ಗಿಡದ ಹಸಿಯಾದ ಕಡ್ಡಿಗಳನ್ನು ಸಣ್ಣ ಸಣ್ಣ ತುಂಡುಗಳನ್ನಾಗಿ ಮಾಡಿ 6 ಲೀಟರ್ ನೀರಿನಲ್ಲಿ ಹಾಕಿ 3 ಲೀಟರ್ ಬರುವನತಕ ಚೆನ್ನಾಗಿ ಕುದಿಸಿ. ತಣ್ಣಗಾದನಂತರ 200 ಲೀಟರ್ ನೀರಿನ ಜೊತೆಗೆ ಭೂಮಿಗೆ ಹಸಿಯಾಗಿದ್ದಾಗ ಸಿಂಪಡಿಸಿ ಇಲ್ಲವೇ ನೀರಿನೊಂದಿಗೆ ಹರಿಬಿಡಿರಿ.

ಅಥವಾ

3. ಒಂದು ಕಿಲೋ ಮೆಟರೀಜೀಯಂ ಎನಿಸೋಪಲೀಇ 1.0% ಕರಗಬಲ್ಲ ಚೂರ್ಣ ಒಂದು ಎಕರೆ ಜಮೀನನಲ್ಲಿ 50 ಕಿಲೋ ಮಣ್ಣಿನಲ್ಲಿ ಇಲ್ಲವೇ ಗೊಬ್ಬರದಲ್ಲಿ ಮಿಶ್ರಣ ಮಾಡಿ ಜಮೀನ ಹಸಿ ಇದ್ದಾಗ ಸಂಜೆ ಸಮಯದಲ್ಲಿ ಸಿಂಪಡಿಸಿರಿ ಇಲ್ಲವೇ ನೀರಿನೊಂದಿಗೆ ಹರಿಬಿಡಿರಿ. ಅಥವಾ 100 ಲೀಟರ ನೀರಿನಲ್ಲಿ ಕೂಡಿಸಿ ಸಂಜೆ ಸಮಯ ಜಮೀನು ಹಸಿ ಇದ್ದಾಗ ಸಿಂಪಡಿಸಿರಿ.

8) **ಹಣ್ಣಿನ ಗಾತ್ರ ಹೆಚ್ಚಿಸಲು :–** ಯಾವುದೇ ಬಗೆಯ ಹಣ್ಣಿನ ಗಾತ್ರವನ್ನು ಹೆಚ್ಚಿಸಲು 200 ಗ್ರಾಂ ಜ್ಯೇಷ್ಠಮಧ, 200 ಗ್ರಾಂ ಎಳ್ಳನ್ನು ಪುಡಿಮಾಡಿ, 5 ಲೀಟರ್ ನೀರಿನಲ್ಲಿ ಹಾಕಿ 2.5 ಲೀಟರ್ ಆಗುವವರೆಗೆ ಕುದಿಸಿ. ತಣ್ಣಗಾದ ನಂತರ 500 ಗ್ರಾಂ ಬೆಲ್ಲವನ್ನು ಸೇರಿಸಿ ಇದನ್ನು 200 ಲೀ. ನೀರಿಗೆ ಬೆರೆಸಿ, ಸಿಂಪಡಿಸಿ.

# ಜಮೀನಿಗೆ ಅನುಕೂಲವಾದ ಪರ್ಯಾವರಣ

ಜಮೀನಿನಲ್ಲಿ ಸೂಕ್ಷ್ಮವಾದ ಪರ್ಯಾವರಣವನ್ನು ನಿರ್ಮಿಸಲು ಅನೇಕ ಬಗೆಯ ವನಸ್ಪತಿಗಳನ್ನು ಬೆಳಸುತ್ತಾರೆ. ಮೊದಲು ಜಮೀನಿನ ದಡ (ತೆವರಿ)ದ ಮೇಲೆ ಅನೇಕ ವೃಕ್ಷಗಳು ಇರುತ್ತಿದ್ದವು. ಇದರಿಂದಲೂ ನೈಸರ್ಗಿಕವಾಗಿ ಪರ್ಯಾವರಣವನ್ನು ರಕ್ಷಣೆ ಮಾಡಬಹುದಾಗಿತ್ತು. ಆದರೆ ಸ್ವಚ್ಛತೆಯ ಆಂದೋಲನದಲ್ಲಿ ದಡದಲ್ಲಿದ್ದ ಎಲ್ಲಾ ಮರಗಳನ್ನು ತೆಗೆದು ಹಾಕಿದ್ದಾರೆ. ಇದರಿಂದ ಎರಡು ಬಗೆಯ ನಷ್ಟಗಳಾದವು. ಒಂದು, ಜಮೀನಿನ ಬಿಸಿಯು ನಿಷ್ಕ್ರಿಯವಾಗುತ್ತದೆ. ಎರಡು, ಮಿತ್ರ ಕೀಟಗಳು ನಾಶವಾಗುತ್ತವೆ. ಪೂರ್ವದಿಕ್ಕಿಗೆ ಹರಿಯವ ನೀರನ್ನು ದಡದಲ್ಲಿರುವ ವೃಕ್ಷಗಳು ತಡೆಯುತ್ತಿದ್ದವು ಮತ್ತು ನೀರು ಜಮೀನಿನಲ್ಲಿ ಸುರಿಯುತ್ತಿತ್ತು. ದಡದ ಮೇಲೆ ಅನೇಕ ಮಿತ್ರ ಪಕ್ಷಿಗಳು ಮತ್ತು ಕೀಟಗಳು ವಾಸಿಸುತ್ತಿದ್ದವು. ಅವು ಜಮೀನಿನ ಮೇಲೆ ಆಕ್ರಮಣ ಮಾಡುವ ಕೀಟಗಳನ್ನು ತಿಂದು ತಮ್ಮ ಜೀವನವನ್ನು ಸಾಗಿಸುತ್ತಿದ್ದವು. ಈ ರೀತಿ ತನಗೆ ತಾನೇ ಪ್ರಾಣಿ, ವನಸ್ಪತಿ(ಜೈವಿಕ)ಗಳನ್ನು ನಿಯಂತ್ರಸಲಾಗುತ್ತಿತ್ತು ಜೋರಾಗಿ ಬೀಸುವ ಗಾಳಿ, ಬಿಸಿ ಗಾಳಿಯ ಹೊಡೆತಗಳು, ವಾತಾವರಣದ ತೇವಾಂಶ – ಈ ಎಲ್ಲಾ ಮಾತುಗಳು ಒಡ್ಡಿನ ಮೇಲಿನ ವೃಕ್ಷಗಳಿಂದ ನಿಯಂತ್ರಸಲ್ಪಡುತ್ತಿದ್ದವು. ಆದುದರಿಂದ ನಾವೀಗ ಅಂತಹ ವೃಕ್ಷ ವನಸ್ಪತಿಗಳನ್ನು ಒಡ್ಡಿನ ಮೇಲೆ ಬೆಳೆಸಬೇಕಾಗಿದೆ.

ಜಮೀನಿನ ದಡದಲ್ಲಿ ಪಶ್ಚಿಮ ದಿಕ್ಕಿಗೆ ಬೇವು, ಹೊಂಗೆ, ಕರಿಬೇವು, ಸೀತಾಫಲ, ಗಿರಿಪುಷ್ಪ, (ಗ್ಲೆರೀಶೀಡಿಯ) ಹರಳುಗಿಡ, ಬುರುಗ, ಎಕ್ಕ ಮತ್ತು ದಕ್ಷಿಣ ದಿಕ್ಕಿಗೆ ಅಶೋಕ, ಸುರುಗೆ, ಸಿಲ್ವರಓಕ್ ನಂತಹ ಮರಗಳನ್ನು ನೆಡಬಹುದು. ಜಮೀನದಲ್ಲಿ ಪ್ರತಿ ಸಾವಿರ ಸ್ಕ್ವೆಯರ್ ಫೂಟನಲ್ಲಿ ಒಂದು ತುಳಸಿಯ ಗಿಡ ಮತ್ತು ಒಂದು ಚೆಂಡು ಹೂವಿನ ಗಿಡವನ್ನು ಹಚ್ಚುವದು ಅವಶ್ಯವಿರುತ್ತದೆ.

## ಜಮೀನದಲ್ಲಿ ವೃಕ್ಷ ಮತ್ತು ವನಸ್ಪತಿಗಳ ಮಹತ್ವ :–

1. **ಕಹಿಬೇವಿನ ಮರ** :– ಇದು 250 ಬಗೆಯ ವಿಷಗಳಿಂದ ಬರುವ ರೋಗಗಳನ್ನು ತಡೆಗಟ್ಟುತ್ತದೆ. ಇದರಿಂದ ವಾತಾವರಣವು ಶುದ್ದವಾಗುತ್ತದೆ ಮತ್ತು ಮಿತ್ರ ಕೀಟಗಳಿಗೆ ಆಶ್ರಯವು ದೊರೆಯುತ್ತದೆ.
2. **ಸೀತಾಫಲ** :– ಮಿಲಿಬಗ್ಗ ಎಂಬ ಕೀಟವು ಈ ವೃಕ್ಷದ ಮೇಲೆ ಕೂರುತ್ತದೆ. ಆದುದರಿಂದ ಪಕ್ಕದ ಜಮೀನಿಗೆ ಈ ಕೀಟವು ಹರಡುವುದಿಲ್ಲ.
3. **ಕರಿಬೇವು** :– ಬುಲ್‌ಬುಲ್ ನಂತಹ ಪಕ್ಷಿಗಳು ಇದರ ಮೇಲೆ ಗೂಡು ಕಟ್ಟುತ್ತವೆ. ಇವು ಅನೇಕ ಕೀಟಗಳನ್ನು ತಿನ್ನುತ್ತವೆ.
4. **ಚೆಂಡುಹೂವು** ;– ಚೆಂಡು ಹೂವಿನ ಬೇರುಗಳಿಂದ ತಂತುಹುಳು(ನಿಮಟೋಡೆ) ವನ್ನು ತಡೆಯಬಹುದು ಮತ್ತು ಲೇಡಿಬರ್ಡ್ ಬೀಟಲ್ ಎಂಬ ಹೆಸರಿನ ದುಂಬಿಯು ಲೋಕರಿಮಾವ ಮತ್ತು ಮಿಲಿಬಗ್ಗಗಳನ್ನು ತಿನ್ನುತ್ತದೆ. ಇವು ಚೆಂಡು ಹೂವಿನ ಗಿಡದ ಮೇಲೆ ಕೂರುತ್ತವೆ
5. **ಜಮೀನಿನಲ್ಲಿ ತುಳುಸಿ** :– ಇದರಿಂದ ಓಜೋನ್ ವಾಯುವಿನ ನಿರ್ಮಾಣವಾಗುತ್ತದೆ. ಸಣ್ಣ ಮೊಟ್ಟೆಗಳನ್ನಿಡುವ ಬಿಳಿ ನೊಣಗಳಲ್ಲಿ ನರಪತಂಗವು ನಪುಂಸಕವಾಗಿ ಬಿಡುತ್ತದೆ. ಇದರಿಂದ ನೊಣಗಳು ಓಡಿಹೋಗುತ್ತವೆ.
6. **ಗಿರಿಪುಷ್ಪ** :– ಇದು ಗಾಳಿಯಲ್ಲಿರುವ ಸಾರಜನಕವನ್ನು ಸ್ಥಿರಗೊಳಿಸುತ್ತದೆ. ಇದರ ಎಲೆಗಳನ್ನು ಜಮೀನಿಗೆ ಸೇರಿಸುವುದರಿಂದ ಸಾರಜನಕವು ಉತ್ಪತ್ತಿಯಾಗುತ್ತದೆ.

7. **ತೊಗಚಿ** :– ಇದನ್ನು ಹಸಿರು ಗೊಬ್ಬರದ ರೂಪದಲ್ಲೂ ಬಳಸುತ್ತಾರೆ.

8. **ಸಬ್ಜ ಮತ್ತು ಅಡೂಸ** :– ಇದು ಆಯುರ್ವೇದದ ಔಷಧಿ. ಅಡೂಸಾದ ಎಲೆಗಳನ್ನು ಎರೆಗೊಬ್ಬರವನ್ನು ತಯಾರಿಸುವಾಗ ಬಳಸುತ್ತಾರೆ.

9. ನಿಂಬೆ, ಸೀತಾಫಲ, ಹರಳು, ಹೊಂಗೆ, ಹತ್ತಿಯ ಎಲೆಗಳಿಂದ ದಶಪರ್ಣಿ ಅರ್ಕವು ತಯಾರಾಗುತ್ತದೆ.

10. ಅಶೋಕ, ಸುರುಗೆ ಇತ್ಯಾದಿ ಮರಗಳನ್ನು ಬೆಳೆಸುವುದರಿಂದ ಜೋರಾಗಿ ಬೀಸುವ ಗಾಳಿಯಿಂದ ಬೆಳೆಯನ್ನು ರಕ್ಷಿಸಬಹುದು.

**ಶಿವ ಭಗವಾನುವಾಚ :**

ಪರಮಾತ್ಮನಲ್ಲಿ ನಿಶ್ಚಯ ಮತ್ತು ನಿಶ್ಚಿಂತ ಸ್ಥಿತಿಯನ್ನಿಟ್ಟು ಕೊಂಡಿದ್ದಾದರೆ ಅಸಂಭವವನ್ನು ಸಂಭವಗೊಳಿಸಬಹುದು.

# ಶಾಶ್ವತ ಯೌಗಿಕ ಬೇಸಾಯ ಮಾಡುವ ರೈತರಿಗೆ
# ಸಲಹೆ ಮತ್ತು ನೀಯಮಗಳು

1) ಶಾಶ್ವತ ಯೌಗಿಕ ಬೇಸಾಯ ಮಾಡುವ ಜಮೀನಿನಲ್ಲಿ ಪರಮಾತ್ಮ ಶಿವನ ಧ್ವಜವನ್ನು ಹಾರಿಸುವುದು. ಬಾವುಟದಲ್ಲಿ ಹಳದಿ ಮತ್ತು ಕೆಂಪು ಬಣ್ಣಗಳಿವೆ. ಇದರಿಂದ ಬೆಳೆ ಶಕ್ತಿಶಾಲಿಯಾಗಲು ಹಾಗೂ ನಿರೋಗಿಯಾಗಲು ತುಂಬಾ ಸಹಾಯವಾಗುತ್ತದೆ. ಗಾಳಿ ಬೀಸುವುದರಿಂದ ಬಾವುಟವು ಹಾರಾಡುವಾಗ ಸೂರ್ಯನ ಕಿರಣವು ಕೆಂಪು ಬಣ್ಣದ ಮೇಲೆ ಬಿದ್ದು ಪ್ರತಿಬಿಂಬಿಸಿ ಬೆಳೆಯವರೆಗೆ ತಲುಪುವುದರಿಂದ ಬೆಳೆಯು ಶಕ್ತಿಶಾಲಿಯಾಗುತ್ತದೆ. ಜೊತೆಗೆ ವೃದ್ಧಿಸುತ್ತದೆ. ಹಳದಿ ಬಣ್ಣದಿಂದ ಕೀಟಗಳನ್ನು ನಿಯಂತ್ರಿಸಬಹುದು. ಮೊಟ್ಟೆಯನ್ನಿಡುವ ಪತಂಗಗಳು ಹಳದಿ ಬಣ್ಣವನ್ನು ನೋಡುತ್ತಿದ್ದಂತೆ ಅದನ್ನು ಹೂವೆಂದು ತಿಳಿದುಕೊಂಡು ಬಂದು ಕೂರುತ್ತವೆ. ಯಾವುದೇ ಪತಂಗಗಳಾದರೂ ಹೂವೆಂದು ತಿಳಿದುಕೊಂಡು ಹಳದಿ ಬಣ್ಣದ ಮೇಲೆ ಮೊಟ್ಟೆಯನ್ನುಡುತ್ತವೆ. ಮೊಟ್ಟೆಗಳಿಂದ ಹುಳುಗಳು ಹೊರ ಬರುತ್ತಿದಂತೆ ಅವುಗಳಿಗೆ ಪೋಷಕಾಂಶವು ಸಿಗುವುದಿಲ್ಲ. ಅವುಗಳು ಸತ್ತುಹೋಗುತ್ತವೆ. ಆದುದರಿಂದ ಕೊನೆಯ ಪಕ್ಷ ಒಂದು ಬೃಹತ್ ಪ್ರಮಾಣದ ಬಾವುಟವು ಬೆಳೆಗಿಂತಲೂ 5 ಅಡಿ ಎತ್ತರದಲ್ಲಿ ಹಾರಾಡುತ್ತಿರಲಿ

2) ಸ್ವ ಪ್ರಯತ್ನ ಮತ್ತು ಪುರುಷಾರ್ಥ (ಸಾಧನೆ) ದಿಂದಲೇ ಉನ್ನತಿಯನ್ನು ಸಾಧಿಸಬಹುದು.

3) ಯೌಗಿಕ ಕೃಷಿಗಾಗಿ ಬೇಸಾಯಗಾರರು ಜಮೀನಿನಲ್ಲಿ ಉಳುಮೆಯಿಂದ ಹಿಡಿದು ಬೆಳೆಯನ್ನು ಮನೆಗೆ ತರುವವರೆಗೆ ಕೆಳಗೆ ತಿಳಿಸಿರುವಂತೆ ನಡೆದುಕೊಳ್ಳಬೇಕು.

   **ಅ)** ಜಮೀನಿನಲ್ಲಿ ಬೇರೆ ಬೇರೆ ಕಾರ್ಯಗಳನ್ನು ನಿರ್ವಹಿಸುವಾಗ ಬೇರೆ ಬೇರೆ ಯೋಗದ ಸಂಕಲ್ಪಗಳನ್ನು ಮಾಡಬಹುದು.

   **ಆ)** ಜಮೀನಿನಲ್ಲಿ ಕೆಲಸ ಮಾಡುವಾಗ ರೈತರಿಗೆ ಆಧ್ಯಾತ್ಮಿಕ ಜ್ಞಾನದ ಹಾಡುಗಳನ್ನು ನುಡಿಸುವುದು ಅಥವಾ ಕೇಳಲು ಪ್ರೇರಣೆ ನೀಡುವುದು. ರೈತರು ಹಾಡು ಅಥವಾ ವಾದ್ಯ ಸಂಗೀತವನ್ನು ಕೇಳುತ್ತಾ ಕೆಲಸ ಮಾಡುವುದರಿಂದ ತುಂಬಾ ಸಂತೋಷವಾಗಿರುತ್ತಾರೆ. ಇದರ ಪ್ರಭಾವವು ವನಸ್ಪತಿಗಳ ಮೇಲೂ ಬೀಳುತ್ತದೆ. ಗಿಡಮರಗಳೂ ಕೂಡ ಖುಷಿಯಿಂದ ನಲಿದಾಡುತ್ತವೆ.

1) ಓಂಶಾಂತಿ ಶಾಂತಿ ಶಾಂತಿ...
2) ಗಿಡಮರವೆಲ್ಲವ ಲೇಖನಿ...
3) ಬಾಬಾ ಪ್ರಿಯ ಬಾಬಾ...
4) ಯೋಗಿಯಾಗು ನೀನು...
5) ಬಾಬಾ ಬಾಬಾ ಎನ್ನುತ್ತಿರು...
6) ಸತ್ಯಂ ಶಿವಂ ಸುಂದರಂ...
7) ಶಾಂತಿಯ ಮಾರ್ಗದಿ...
8) ಜ್ಞಾನಸಾಗರ ಪರಮಾತ್ಮ...
9) ಪವಿತ್ರರಾಗಿ ಯೋಗಿಗಳಾಗಿ...
10) ಶಿವಪಿತನ ಸದಾ ನೆನೆ ಮನವೆ...
11) ಪರಮಪಿತ ಶಿವ ಪರಮಾತ್ಮ...
12) ಜ್ಯೋತಿರ್‌ಬಿಂದು ಧರೆಗೆ ಬಂದು...
13) ಪಡೆದೆನು ನಾನು ಸತ್ಯಂ ಶಿವಂ ಸುಂದರಂ...
14) ಬಾಬಾ ನಿನ್ನ ಪ್ರೀತಿಯಲಿ...
15) ಪರಮಜ್ಯೋತಿ ಧರೆಗೆ ಬಂದು...
16) ನೀ ನನ್ನ ತಂದೆ...
17) ಪವಿತ್ರತೆಯ ಹೇ ಮಂತ್ರ ದಾತ...
18) ಸ್ನೇಹ ಪ್ರೀತಿಯ ಸೂತ್ರದಿ...

## ನೀಂಯುಮಗಳು :–

1. ಪರಿವಾರದಲ್ಲಿ ಎಲ್ಲರ ಜೊತೆ ಪ್ರೀತಿ, ಆತ್ಮೀಯತೆ ಹಾಗೂ ಸೌಹಾರ್ದತೆಯಿಂದ ಇರುವುದು. ಮನೆಯಲ್ಲಿ ಎಲ್ಲರೂ ಒಟ್ಟಾಗಿ ಕುಳಿತು ಊಟ ಮಾಡುವ ಹಾಗೂ ಪ್ರತಿದಿನ ಧ್ಯಾನ ಮಾಡುವಂತಹ ಅಭ್ಯಾಸದಿಂದ ಮನೆಯು ಮಂದಿರವಾಗುತ್ತದೆ. ಜೀವನವು ಸುಂದರವಾಗುತ್ತದೆ.
2. ದೇಹ ಹಾಗೂ ಮನಸ್ಸಿನ ಸ್ವಚ್ಛತೆಯನ್ನು ಕಾಪಾಡುವುದು ಆರೋಗ್ಯಕರವಾದ ಜೀವನಕ್ಕೆ ತಳಹದಿಯಾಗಿದೆ.
3. ಸಾಕು ಪ್ರಾಣಿಗಳ ಬಗ್ಗೆ ಪ್ರೀತಿ, ದೇಶೀ ಹಸುಗಳನ್ನು ಪ್ರೀತಿಯಿಂದ ಪಾಲಿಸುತ್ತಾ, ಅವುಗಳ ಸಗಣಿ ಹಾಗೂ ಗೋಮೂತ್ರವನ್ನು ವ್ಯವಸಾಯದಲ್ಲಿ ಬಳಸುವುದು.
4. ಅಮೃತವೇಳೆಯ ಮಹತ್ವವನ್ನು ಅರಿತುಕೊಂಡು ಯೋಗಾಭ್ಯಾಸವನ್ನು ಮಾಡುವುದು.
5. ಏಕಾಂತಪ್ರಿಯರು ಹಾಗೂ ಪರಮಾತ್ಮನ ಸ್ನೇಹಿಗಳಾಗಿರಬೇಕು.
6. ಆತ್ಮವಿಶ್ವಾಸ, ಪರಮಾತ್ಮನ ಬಗ್ಗೆ ಸಂಪೂರ್ಣ ನಿಶ್ಚಯ ಹಾಗೂ ದೃಢ ವಿಶ್ವಾಸ ವಿರಬೇಕು
7. ಯಾರ ಜೊತೆಯಲ್ಲಿಯೂ ವೈರತ್ವದ ಭಾವನೆಯನ್ನಿಟ್ಟು ಕೊಳ್ಳಬಾರದು, ಶುಭ ಮತ್ತು ಶಕ್ತಿಶಾಲಿ ಭಾವನೆಗಳಿಂದ ಸಂಪನ್ನರಾಗಿರಬೇಕು.
8. ರೈತರಿಗೆ ಯಾವುದೇ ದುರಭ್ಯಾಸವಿರಬಾರದು, ಮದ್ಯಪಾನ, ಧೂಮ್ರಪಾನ ಹಾಗೂ ಗುಟಕಾಗಳ ಸೇವನೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು.
9. ಪವಿತ್ರತೆಯ ಮಹತ್ವವನ್ನು ಅರಿತುಕೊಂಡು ಬ್ರಹ್ಮಚರ್ಯವನ್ನು ಪಾಲಿಸುವುದು.
10. ಶುದ್ಧ ಹಾಗೂ ಸಾತ್ವಿಕ ಸಸ್ಯಾಹಾರಿಗಳಾಗಿದ್ದು, ಭಗವಂತನ ನೆನಪಿನಲ್ಲಿ ಆಹಾರವನ್ನು ತಯಾರಿಸಿ, ಸೇವಿಸುವ ಅಭ್ಯಾಸವನ್ನು ಬೆಳೆಸಿಕೊಳ್ಳಿ.
11. ಶುಭ ಚಿಂತನೆ ಹಾಗೂ ಪ್ರತಿದಿನ ಈಶ್ವರನ ಮಹಾವಾಕ್ಯಗಳ ಅಧ್ಯಯನ ಅಥವಾ ಶ್ರವಣ ಮಾಡುವುದು ತುಂಬಾ ಅಗತ್ಯ. ಏಕೆಂದರೆ ಸಕಾರಾತ್ಮಕ ಚಿಂತನೆಗಳಿಗೆ ಇದೊಂದೇ ಆಧಾರ.
12. ವ್ಯರ್ಥ ಮತ್ತು ಕಲುಷಿತ ಚಿಂತನೆ ಮಾಡಬಾರದು, ವ್ಯರ್ಥವನ್ನು ಸಮರ್ಥವಾಗಿ ಹಾಗೂ ಕಲುಷಿತ ಚಿಂತನೆಗಳನ್ನು ಸಕರಾತ್ಮಕವಾಗಿ ಪರಿವರ್ತಿಸಿಕೊಳ್ಳುವಂತಹ ಶುಭ ಮತ್ತು ಶಕ್ತಿಶಾಲಿ ಭಾವನೆಗಳಿಂದ ಸಂಪನ್ನರಾಗಿರಬೇಕು.
13. ರೈತ ಸಹೋದರ–ಸಹೋದರಿಯರು ಕೃಷಿ ಕಾರ್ಮಿಕರನ್ನು ವ್ಯಸನ್ಮುಕ್ತರನ್ನಾಗಿ ಮಾಡುವುದು ಕೂಡ ಪುಣ್ಯದ ಸೇವೆಯಾಗಿದೆ. ಸಾಧ್ಯವಾದರೆ ಅವರಿಗೂ ಸಾಪ್ತಾಹಿಕ ಶಿಕ್ಷಣವನ್ನು ಕೊಡಿಸುವುದು.

# ಬೇರೆ ಬೇರೆ ಫಸಲುಗಳ ಬಗ್ಗೆ ಗಮನಹರಿಸಬೇಕಾದ ವಿಚಾರಗಳು

(1) **ಜೋಳದ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು...**

1. ಪ್ರತಿ ಎಕರೆಗೆ 6 ಟನ್ ಸಗಣಿ ಗೊಬ್ಬರ ಅಥವಾ ಹಸಿರು ಗೊಬ್ಬರವನ್ನು ಜಮೀನಿಗೆ ಸೇರಿಸಿ ಹದಗೊಳಿಸಬೇಕು.
2. ಬೀಜವನ್ನು ಬಿತ್ತುವಾಗ ಮತ್ತು ಅದರ ನಂತರ ಪ್ರತಿ 20–20 ದಿನಗಳ ಅಂತರದಲ್ಲಿ 200 ಲೀ.ಜೀವಾಮೃತವನ್ನು ಒಂದು ಎಕರೆ ಜಮೀನಿಗೆ, ಜಮೀನು ಹಸಿಯಾಗಿದ್ದಾಗ ಸಂಜೆ ವೇಳೆ ಸಿಂಪಡಿಸುವುದು ಅಥವಾ ನೀರಿನ ಜೊತೆ ಹರಿಸಬಹುದು.ಅಥವಾ ಡ್ರಿಪನ ಮುಖಾಂತರವೂ ಹರಿಸಬಹುದು.
3. ಬೆಳೆಗೆ ಒಂದು ತಿಂಗಳಾದಾಗ, ಜಮೀನು ಹಸಿಯಾಗಿದ್ದಾಗ ಒಂದು ಟನ್ ಎರೆ ಗೊಬ್ಬರವನ್ನು ಒಂದು ಎಕರೆ ಜಮೀನಿಗೆ ಬಳಸಬಹುದು. (ಜಮೀನದ ಪೋಷಣೆ ಮತ್ತು ಸ್ಥಾನದ ವಾತಾವರಣಕ್ಕನುಸಾರವಾಗಿಯೇ ಈ ಪ್ರಯೋಗವನ್ನು ಮಾಡಬೇಕು.)

**ಮಿಶ್ರ ಬೆಳೆ...**

1. ಮುಂಗಾರು ಸಮಯದಲ್ಲಿ ಜೋಳದ ಜೊತೆಗೆ ತೊಗರಿ, ಹೆಸರು, ಉದ್ದಿನಂತಹ ಬೆಳೆಯನ್ನು ಮಿಶ್ರಣ ಮಾಡುವುದು ಅತಿ ಅಗತ್ಯ.ಉದಾ:– 6 ಸಾಲು ಜೋಳದ ನಂತರ, ಮತ್ತೆ ಒಂದು ಸಾಲು ತೊಗರಿ ಅಥವಾ 2 ಸಾಲು ಹೆಸರು ಹಾಗೂ ಉದ್ದು–ಹೀಗೆ ಮಿಶ್ರಣಮಾಡಬಹುದು.
2. ಹಿಂಗಾರು ಮಳೆಯ ಸಮಯದಲ್ಲಿ ಜೋಳದ ಜೊತೆಗೆ ಶೇ.10 ರಷ್ಟು ಹವೀಜವನ್ನು ಮಿಶ್ರಣಮಾಡಿ ಬೆಳೆಯಬೇಕು.

**ಬೀಜ ಸಂಸ್ಕಾರ**

20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ಹಾಕಿ ನೆನಸಿ, ಬೀಜದ ಮೇಲಿನಿಂದ ಮೊದಲು ಅಜಟೊಬಕ್ಟರ್ ಅಥವಾ ಅಜೋಸ್ಪರಿಲಿಯಮ್ ಜೀವಾಣು ಸಂವರ್ಧಕ 250 ಗ್ರಾಂ. ಮತ್ತು ಪಿ.ಎಸ್.ಬಿ ಜೀವಾಣು ಸಂವರ್ಧಕ 250 ಗ್ರಾಂನ ಲೇಪ ಹಾಕಿರಿ. ನಂತರ ಬೀಜವನ್ನು ನೆರಳಿನಲ್ಲಿ ಒಣಗಿಸಿ.8–10 ಗಂಟೆಗಳೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತನೆ ಮಾಡಿರಿ.

**ಬೆಳೆಗಳ ಸಂರಕ್ಷಣೆ**

1. ಗಿಡಗಳ ಕಾಂಡದಲ್ಲಿ ಬರುವ ಕೀಟಗಳು, ರಸವನ್ನು ಹೀರುವ ಕೀಟ, ಸಣ್ಣ–ಪುಟ್ಟ ಹುಳುಗಳು ಹಾಗೂ ಮಿಲಿಬಗ್ಗ ಗಳು ಈ ಎಲ್ಲವೂ ಕಾಣಿಸಿಕೊಳ್ಳುತ್ತಿದ್ದಂತೆ ವಾರದಲ್ಲಿ ಒಂದು ಅಥವಾ ಎರಡು ಸಾರಿ ಶೇ. 4 ರಷ್ಟು ಗೋಮೂತ್ರ, ಬೇವಿನ ಅರ್ಕ ಅಥವಾ ದಶಪರ್ಣಿ ಅರ್ಕಗಳಲ್ಲಿ ಯಾವುದಾದರೂ ಒಂದನ್ನು ಸಿಂಪಡಿಸಿ. ಹಾಗೇನಾದರೂ ಮೂರೂ ಸಿಕ್ಕಿದರೆ ಒಳ್ಳೆಯದು, ಇಲ್ಲವೆಂದರೆ ಯಾವುದಾದರೂ ಒಂದನ್ನಾದರೂ ಸಿಂಪಡಿಸಬಹುದು.
2. ಟಾರಫೂಲ ರೋಗ– ನೀರಿನ ಕೊರತೆಯಾದಾಗ ಇದು ಕಾಣಿಸಿ ಕೊಳ್ಳುತ್ತದೆ.ಅದಕ್ಕಾಗಿ ಬೀಜಗಳಿಗೆ ಬೀಜಾಮೃತವನ್ನು ಹಾಕಿ 10% ಧನಿಯಾವನ್ನು ಮಿಶ್ರಣ ಮಾಡಿರಿ.

(2) **ನವಣೆ/ಸಜ್ಜೆಯು ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು.....** ಜೋಳದ ನಿಯಮವನ್ನೇ ಅನುಸರಿಸ ಬಹುದು.

**ಮಿಶ್ರ ಬೆಳೆ**

ನವಣೆಯ ಜೊತೆ ತೊಗರಿ,ಹೆಸರು, ಉದ್ದು ಅಥವಾ ಕಾಡು ಹೆಸರಿನಂತಹ ಬೆಳೆಯನ್ನು ಮಿಶ್ರಣ ಮಾಡಬಹುದು. 6 ಸಾಲು ನವಣೆ, ಮತ್ತೆ ಒಂದುಸಾಲು ತೊಗರಿ ಅಥವಾ 2 ಸಾಲು ಹೆಸರು,ಉದ್ದು ಅಥವಾ ಕಾಡುಹೆಸರು ಇವುಗಳಲ್ಲಿ ಒಂದನ್ನು ಹೀಗೆ ಮಿಶ್ರಣಮಾಡಿ.

**ಬೀಜ ಸಂಸ್ಕಾರ**

10. ಲೀ. ನೀರಿನಲ್ಲಿ 2 ಕಿಲೊ ಉಪ್ಪನ್ನು ಮಿಶ್ರಣ ಮಾಡಿ ಅದಕ್ಕೆ 10 ಕಿಲೊ.ನವಣೆಯ ಬೀಜವನ್ನು ಹಾಕಿರಿ ಮತ್ತು ಅಲುಗಾಡಿಸಿರಿ. ನೀರಿನ ಮೇಲೆ ತೇಲಿಬರುವ ಬೀಜಗಳನ್ನು ತೆಗೆದು ಹಾಕಿರಿ. ಮುಳುಗಿದ್ದ

ಧಾನ್ಯವನ್ನು 2–3 ಸಾರಿ ಸ್ವಚ್ಛಗೊಳಿಸಿ ಬೀಜವನ್ನು ಒಣಗಿಸಿ. ಹೀಗೆ ಎಷ್ಟು ಬೇಕಾಗುತ್ತದೋ ಅಷ್ಟನ್ನು ಈ ರೀತಿ ಆರಿಸಿಕೊಳ್ಳಿ.ಅದರಲ್ಲಿ 20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ಮುಳುಗಿಸಿ. ಮೇಲಿನಿಂದ ಅಜಟೋಬಕ್ಟರ್ ಅಥವಾ ಅಜೊಸ್ಪಿರಿಲಿಯಂ 250 ಗ್ರಾಂ ಮತ್ತು ಪಿ.ಎಸ್.ಬಿ 250 ಗ್ರಾಂ ನ ಲೇಪಹಾಕಿರಿ. ಬೀಜವನ್ನು ನೆರಳಿನಲ್ಲಿ ಒಣಗಿಸಿ. 8–10 ಗಂಟೆಯೊಳಗೆ,ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

**ಬೆಳೆಯ ಸಂರಕ್ಷಣೆ**

ಯಾವುದೇ ಬಗೆಯ ಕೀಟ ಅಥವಾ ರೋಗವು ಕಾಣಿಸಿಕೊಂಡಾಗ 8–10 ದಿನಗಳಲ್ಲಿ ಒಂದು ಸಾರಿ ಮೊದಲು ಬೇವಿನ ಅರ್ಕ ,ಎರಡನೆ ಸಾರಿ ದಶಪರ್ಣಿ ಅರ್ಕ ಮತ್ತು ಮೂರನೆ ಸಾರಿ ಶೇ.4 ರಷ್ಟು ಗೋಮೂತ್ರ– ಈ ರೀತಿ ಕೀಟಗಳು ಅಥವಾ ರೋಗಗಳು ಕಡಿಮೆಯಾಗುವವರೆಗೆ ಸಿಂಪಡಿಸಿ. (ಸೊಸೆ ಅಥವಾ ಹೀಂಗೆಯಂಥಹ ಕೀಟಗಳಿಗಾಗಿ)

(3) **ಮೆಕ್ಕೆ ಜೋಳದ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು**... ಜೋಳದ ವಿಧಾನವನ್ನೇ ಅನುಸರಿಸಿರಿ.

**ಮಿಶ್ರ ಬೆಳೆ**

1) ಮುಂಗಾರು ಮಳೆಗಾಲದಲ್ಲಿ 2 ಸಾಲು ಮೆಕ್ಕೆ ಜೋಳ,2 ಸಾಲು ಅಲಸಂದೆ, ಅಥವಾ ಸೊಯಾಬೀನ ಹೀಗೆ ಮಿಶ್ರಣ ಮಾಡುವುದು ಅಗತ್ಯ.
2) ಹಿಂಗಾರು ಮಳೆಯಲ್ಲಿ ಮೆಕ್ಕೆ ಜೋಳದ ಜೊತೆಗೆ ಹುಚ್ಚೆಳ್ಳು, ಹವೀಜ, ಮೆಂತ್ಯವನ್ನು ಶೇ. 10 ರಷ್ಟು ಮಿಶ್ರಣ ಮಾಡುವುದು ಅಗತ್ಯ.

* ಬೀಜ ಸಂಸ್ಕಾರ.......ಜೋಳದ ವಿಧಿಯನ್ನೇ ಅನುಸರಿಸಿರಿ.

* ಬೆಳೆ ರಕ್ಷಣೆ.....ಜೋಳದ 1ನೆ ವಿಧಿಯನ್ನೆ ಅನುಸರಿಸಿರಿ.

(4) **ಕಡಲೆ ಕಾಯಿ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು**..... ಜೋಳದ ನಿಯಮವನ್ನೇ ಅನುಸರಿಸ ಬಹುದು.

**ಮಿಶ್ರ ಬೆಳೆ :–**

ಕಡಲೆಕಾಯಿಯ ಜೊತೆ ಶೇ. 2 ರಷ್ಟು ಸೂರ್ಯಕಾಂತಿಯನ್ನು ಮಿಶ್ರಣ ಮಾಡಿ.ಇದರಿಂದ ಪರಾಗಸ್ಪರ್ಶವು ಚೆನ್ನಾಗಿ ನಡೆಯುತ್ತದೆ. ಶೇ. 2 ರಿಂದ 5 ರಷ್ಟು ಅಲಸಂದೆಯನ್ನು ಮಿಶ್ರಣ ಮಾಡಿ ಇದರಿಂದ ಮಾವಾ ಮಿಲಿಬಗ್ಗ ಕೀಟವು ಅಲಸಂದೆಯ ಮೇಲೆ ಕುಳಿತುಕೊಳ್ಳುತ್ತದೆ. ಕಡಲೆಕಾಯಿಗೆ ಹರಡುವುದಿಲ್ಲ.

ಸೂಚನೆ – ಹೆಸರು ಉದ್ದನ್ನು ಇಲ್ಲಿ ಬಳಸಬಾರದು.

**ಬೀಜ ಸಂಸ್ಕಾರ :–**

20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ನೆನೆಸಿ ಮತ್ತು ಮೇಲಿನಿಂದ ಮೊದಲು ಟ್ರಾಯಕೊಡಾರ್ಮ 100 ಗ್ರಾಂ.,ಮತ್ತೆ ರಾಯಜೊಬಿಯಂ ಮತ್ತು ಪಿ.ಎಸ್.ಬಿ. 250 ಗ್ರಾಂ ಇವುಗಳನ್ನು ಲೇಪಿಸಿ,ಬೀಜಗಳನ್ನು ನೆರಳಿನಲ್ಲಿ ಒಣಗಿಸಿ. 8–10 ಗಂಟೆಯೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

**ಬೆಳೆಯ ಸಂರಕ್ಷಣೆ :–**

1. ಮಾವಾ (ಮಿಲಿಬಗ್ಗ) ಮತ್ತು ರಸ ಹೀರುವ ನೊಣಗಳು ಹಾಗೂ ಸಣ್ಣ ಹುಳಗಳ ನಿಯಂತ್ರಣಕ್ಕಾಗಿ 4%

ಗೊಮೂತ್ರ, ಬೇವಿನ ಅರ್ಕವನ್ನು ಅದಲಿ ಬದಲಿ ಮಾಡಿ ಸಿಂಪಡಿಸಿರಿ.

2. ಟೀಕಾ ಹಾಗೂ ತಾಮ್ರದ (ಗಂಜನಾ) ರೋಗವನ್ನು ನಿಯಂತ್ರಿಸಲು– ಶೇ. 5 ರಷ್ಟು ಬೇವಿನ ಅರ್ಕವನ್ನು ಸಿಂಪಡಿಸಿ. 100 ಮಿಲಿ ಬೇವಿನಎಣ್ಣೆ, 100 ಮಿಲಿ ಹೊಂಗೆ ಎಣ್ಣೆ, 100ಮಿಲಿ ಗೋಮೂತ್ರ, 10 ಗ್ರಾಂ. ಬೆಲ್ಲ ಅಥವಾ ಬಟ್ಟೆ ತೊಳೆಯುವ ಪುಡಿಯನ್ನು 15 ಲೀ. ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ.

(5) **ಸೋಯಾಬೀನ್ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು...** ಜೋಳದ ವಿಧಾನವನ್ನೇ ಅನುಸರಿಸಿರಿ.

**ಮಿಶ್ರ ಬೆಳೆ :–** ಸೋಯಾಬೀನನಲ್ಲಿ ಶೇ.2 ರಷ್ಟು ಮೆಕ್ಕೆಜೋಳ ಅಥವಾ ಶೇ. 2ರಷ್ಟು ಜೋಳವನ್ನು ಮಿಶ್ರಣಮಾಡಿ.
**ಬೀಜ ಸಂಸ್ಕಾರ :–** ಕಡಲೆ ಕಾಯಿ ವಿಧಾನವನ್ನು ಅನುಸರಿಸಿರಿ.
**ಬೆಳೆಯ ಸಂರಕ್ಷಣೆ :–** ಕಡಲೆ ಕಾಯಿ ವಿಧಾನವನ್ನು ಅನುಸರಿಸಿರಿ.

(6) **ತೊಗರಿ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು...** ಜೋಳದ ವಿಧಾನವನ್ನೇ ಅನುಸರಿಸಿರಿ.

**ಮಿಶ್ರ ಬೆಳೆ :–** 2 ಸಾಲು ತೊಗರಿ ಮತ್ತು 4 ಸಾಲು ಜೋಳ ಅಥವಾ ಕಡಲೆಕಾಯಿ ಅಥವಾ ಸೋಯಾಬೀನ್ ಅಥವಾ ಕಡಲೆ ಅಥವಾ ಉದ್ದು–ಇವುಗಳಲ್ಲಿ ಒಂದನ್ನು ಮಿಶ್ರಣ ಮಾಡಿ.

**ಬೀಜ ಸಂಸ್ಕಾರ :–**

20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ನೆನೆಸಿ, ಮತ್ತು ಮೇಲಿನಿಂದ ರಾಯಜೊಬಿಯಮ್ ಮತ್ತು ಪಿ.ಎಸ್.ಬಿ. 250 ಗ್ರಾಂ. ನ ಲೇಪ ಹಾಕಿ, ಬೀಜವನ್ನು ನೆರಳಿನಲ್ಲಿ ಒಣಗಿಸಿ. 8–10 ಗಂಟೆಯೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

**ಬೆಳೆಯ ಸಂರಕ್ಷಣೆ :–**

1. ಸಣ್ಣ ಹುಳುಗಳು, ಕೀಟಗಳು, ಮರರೋಗಗಳನ್ನು ನಿಯಂತ್ರಿಸಲು ತೊಗರಿಯಲ್ಲಿ ಜೋಳವನ್ನು ಮಿಶ್ರಣ ಮಾಡಿ.
2. ಹಣ್ಣು–ಹೂ ಬಿಡುವಾಗ ಆರಂಭದಲ್ಲೇ ಕೀಟಗಳನ್ನು ನಿಯಂತ್ರಿಸಲು 4% ಗೋಮೂತ್ರ ಅಥವಾ 5% ಬೇವಿನ ಅರ್ಕ ಅಥವಾ ದಶಪರ್ಣಿ ಅರ್ಕವನ್ನು ವಾರದಲ್ಲಿ ಒಂದು ಸಾರಿ ಅದಲು ಬದಲು ಮಾಡಿ ಸಿಂಪಡಿಸಿ.
3. ಒಂದು ಎಕರೆ ಜಮೀನಿನಲ್ಲಿ 12–15 ಮರದ ಅಂಟೆನಾ(ಟಿ ಆಕಾರದ) ಗಳನ್ನು ನೆಡುವುದು. ಇವುಗಳ ಮೇಲೆ ಹಕ್ಕಿಗಳು ಕೂರುವುದರಿಂದ ಕೀಟಗಳನ್ನು ನಿಯಂತ್ರಿಸಬಹುದು.

(7) **ಹೆಸರು/ಉದ್ದಿನ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು...**ಜೋಳದ ವಿಧಾನವನ್ನೇ ಅನುಸರಿಸಿರಿ.

**ಮಿಶ್ರ ಬೆಳೆ :–**

ಹೆಸರು ಅಥವಾ ಉದ್ದು 4 ಸಾಲುಗಳ ನಂತರ ಒಂದು ಸಾಲು ಮೆಕ್ಕೆ ಜೋಳ ಅಥವಾ ಜೋಳವನ್ನು ಮಿಶ್ರಣ ಮಾಡುವುದು ಅಗತ್ಯ.

**ಬೀಜ ಸಂಸ್ಕಾರ :–**

20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ನೆನೆಸಿ ಮತ್ತು ಮೇಲಿನಿಂದ ರಾಯಜೊಬಿಯಮ್ ಮತ್ತು ಪಿ.ಎಸ್.ಬಿ. 250 ಗ್ರಾಂ. ನ ಲೇಪ ಹಾಕಿ, ಬೀಜವನ್ನು ನೆರಳಿನಲ್ಲಿ ಒಣಗಿಸಿ. 8–10 ಗಂಟೆಯೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

**ಬೆಳೆಯ ಸಂರಕ್ಷಣೆ :–**

ಜೋಳದ ಒಂದನೇ ವಿಧಾನವನ್ನೇ ಅನುಸರಿಸಿರಿ.

(8) **ಕಡಲೆಯ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು**...ಜೋಳದ ವಿಧಾನವನ್ನೇ ಅನುಸರಿಸಿರಿ.

**ಮಿಶ್ರ ಬೆಳೆ :–**

1) ಈ ಬೆಳೆಯ ಸುತ್ತಲೂ ಒಂದು ಅಥವಾ 2 ಸಾಲು ಮೆಕ್ಕೆ ಜೋಳವನ್ನು ಹಾಕಿರಿ. 6 ಸಾಲು ಕಡಲೆ, 3 ಸಾಲು ಹುಚ್ಚೆಳ್ಳು ಮತ್ತು ಒಂದು ಸಾಲು ಹವೀಜ ಹೀಗೆ ಮಿಶ್ರಣ ಮಾಡುವುದು ಅತಿ ಅಗತ್ಯ.
2) ಮೆಕ್ಕೆ ಜೋಳದಿಂದ ಮಿತ್ರ ಕೀಟಗಳು ಹೆಚ್ಚಾಗುತ್ತವೆ. ಧನಿಯಾದ ಮೇಲೆ ಟ್ರಾಯಕೊ ಗ್ರಾಮ್ ಹೆಚ್ಚುತ್ತದೆ. ಇದರಿಂದ ಕೀಟಗಳನ್ನು ನಿಯಮತ್ರಿಸ ಬಹುದು. ಜೇನುನೊಣಗಳ ಸಂಖ್ಯೆಯು ಹೆಚ್ಚಾಗುವುದು. ಇದರಿಂದ ಪರಾಗಸ್ಪರ್ಶವು ಚೆನ್ನಾಗಿ ನಡೆಯುತ್ತದೆ.ಹುಚ್ಚೆಳ್ಳಿನ ಮೇಲೆ ಹೆಚ್ಚು ಪಕ್ಷಿಗಳು ಕೂರುತ್ತವೆ ಇದರಿಂದ ಹುಳುಗಳನ್ನು ನಿಯಂತ್ರಿಸ ಬಹುದು,

**ಬೀಜ ಸಂಸ್ಕಾರ :–**

20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ನೆನೆಸಿ ಮತ್ತು ಮೇಲಿನಿಂದ ಮೊದಲು ಟ್ರಾಯಕೊಡಾರ್ಮ 100 ಗ್ರಾಂ.,ಮತ್ತೆ ರಾಯಜೊಬಿಯಂ ಮತ್ತು ಪಿ.ಎಸ್.ಬಿ. 250 ಗ್ರಾಂ ಇವುಗಳನ್ನು ಲೇಪಿಸಿ, ಬೀಜಗಳನ್ನು ನೆರಳಿನಲ್ಲಿ ಒಣಗಿಸಿ. 8–10 ಗಂಟೆಯೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

**ಬೆಳೆಯ ಸಂರಕ್ಷಣೆ :–**

ತೊಗರಿಯ ಮೂರನೆಯ ವಿಧಿ ಮತ್ತು ಜೋಳದ ಮೊದಲನೆ ವಿಧಾನವನ್ನು ಅನುಸರಿಸರಿ.

(9) **ಗೋಧಿಯ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು**...ಜೋಳದ ವಿಧಾನವನ್ನೇ ಅನುಸರಿಸಿರಿ

**ಮಿಶ್ರ ಬೆಳೆ :–**

ಗೋಧಿಯಲ್ಲಿ ಸಾಸುವೆಯನ್ನು 2% ರಿಂದ 3% ರಷ್ಟು ಮಿಶ್ರಣ ಮಾಡುವದು.

**ಬೀಜ ಸಂಸ್ಕಾರ :–**

ಜೋಳದ ವಿಧಿಯನ್ನೇ ಅನುಸರಿಸಿರಿ.

**ಬೆಳೆಯ ಸಂರಕ್ಷಣೆ :–**

(1) ಕಡಲೆ ಕಾಯಿಯ ವಿಧಾನವನ್ನೆ ಅನುಸರಿಸಿರಿ.
(2) ಜೊತೆಗೆ ಕಾಳು ಕಟ್ಟುವಾಗ 2 ಸಾರಿ 5% ರಷ್ಟು (2 ದಿನಗಳ ಕಾಲ ತಾಮ್ರದ ಪಾತ್ರೆಯಲ್ಲಿಟ್ಟದ್ದ) ಮಜ್ಜಿಗೆಯನ್ನು ಗೋಧಿಯ ಮೇಲೆ ಸಿಂಪಡಿಸುವುದರಿಂದ ಅದರ ಹೊಳಪು ಹೆಚ್ಚುತ್ತದೆ.

(10) **ಭತ್ತದ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು**...ಜೋಳದ ವಿಧಾನವನ್ನೇ ಅನುಸರಿಸಿರಿ

ಜೊತೆಗೆ ಬೆಳೆಗೆ ಒಂದು ತಿಂಗಳಾದಾಗ ಒಂದು ಎಕರೆ ಜಮೀನಿಗೆ ಒಂದು ಟನ್ ಎರೆ ಗೊಬ್ಬರವನ್ನು ಜಮೀನಿಗೆ ಹಾಕಿರಿ.

**ಮಿಶ್ರ ಬೆಳೆ**...ಭತ್ತದ ಬೆಳೆಯಲ್ಲಿ

**ಬೀಜ ಸಂಸ್ಕಾರ :–**

10. ಲೀ. ನೀರಿನಲ್ಲಿ 300 ಗ್ರಾಂ ಉಪ್ಪನ್ನು ಮಿಶ್ರಣ ಮಾಡಿ ಅದಕ್ಕೆ 10 ಕಿಲೊ. ಭತ್ತದ ಬೀಜವನ್ನು ಹಾಕಿರಿ ಮತ್ತು ಅಲುಗಾಡಿಸಿರಿ. ನೀರಿನ ಮೇಲೆ ತೇಲಿಬರುವ ಬೀಜಗಳನ್ನು ತೆಗೆದು ಹಾಕಿರಿ. ಮುಳುಗಿದ್ದ ಧಾನ್ಯವನ್ನು 2–3 ಸಾರಿ ಸ್ವಚ್ಛಗೊಳಿಸಿ ಬೀಜವನ್ನು ಒಣಗಿಸಿ. ಹೀಗೆ ಎಷ್ಟು ಬೇಕಾಗುತ್ತದೋ ಅಷ್ಟನ್ನು ಆರಿಸಿಕೊಳ್ಳಿ. ಅದರಲ್ಲಿ 20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ಮುಳುಗಿಸಿ. ಮೇಲಿನಿಂದ ಟ್ರಾಯಕೊಡಾರ್ಮ 50 ಗ್ರಾಂ,ಮತ್ತೆ ಅಜಟೋಬಕ್ಟರ್ 250 ಗ್ರಾಂ. ಮತ್ತು ಪಿ.ಎಸ್.ಬಿ 250.ಗ್ರಾಂ.ನ ಲೇಪಹಾಕಿರಿ. ಬೀಜವನ್ನು ನೆರಳಿನಲ್ಲಿ ಒಣಗಿಸಿ. 8–10 ಗಂಟೆಯೊಳಗೆ,ಜಮೀನು ಹಸಿಯಾಗಿದ್ದಾಗ ಬಿತ್ತಿರಿ. ಹಾಗೇನಾದರೂ ಗಿಡಗಳನ್ನು ನೆಡುವಂತಿದ್ದರೆ 5 ಲೀ. ಬೀಜಾಮೃತದಲ್ಲಿ 250 ಗ್ರಾಂ ಅಜಟೊಬಕ್ಟರ್ ಮತ್ತು 250 ಗ್ರಾಂ ಪಿ.ಎಸ್. ಬಿ. ಜೀವಾಣು ಸಂವರ್ಧಕಗಳನ್ನು ಮಿಶ್ರಣ ಮಾಡಿ ಗಿಡಗಳ ಬೇರನ್ನು ಅದರಲ್ಲಿ 15–20 ನಿಮಿಷಗಳ ಕಾಲಮುಳುಗಿಸಿ ನಂತರ ನೆಡಬಹುದು.

**ಬೆಳೆಯ ಸಂರಕ್ಷಣೆ...**

1) ಜೋಳದ ಮೊದಲನೆಯ ವಿಧಾನ ವನ್ನು ಅನುಸರಿಸಿರಿ.
2) ಗಿಡಗಳು ಸಾಯುತ್ತಿವೆ ಎಂದೆನಿಸಿದಾಗ ಒಂದು ಕಿಲೊ ಟ್ರಾಯಕೊಡಾರ್ಮವನ್ನು 200ಲೀ. ನೀರಿನಲ್ಲಿ ಮಿಶ್ರಣಮಾಡಿ ಕೂಡಲೆ ಬೆಳೆಯ ಮೇಲೆ ಸಿಂಪಡಿಸಿ.
3) ಕರಪಾರೋಗ– ಗೋಬ್ಬಳಿ ಮರದ ಚಿಗುರು 200 ಗ್ರಾಂ 2 ಲೀ. ನೀರಿನಲ್ಲಿ ಹಾಕಿ ಒಂದು ಲೀ. ನೀರು ಆಗುವವರೆಗೆ ಕುದಿಸಿರಿ. ಇದಕ್ಕೆ 200 ಲೀ. ನೀರನ್ನು ಮಿಶ್ರಣ ಮಾಡಿ ಸಿಂಪಡಿಸಿ. ಇಲ್ಲವೆ ದೇಶಿ ಹಸುವಿನ ಕಚ್ಚಾಹಾಲು 5 ಲೀ., 2 ಲೀ. ಗೋಮೂತ್ರ, ಅಥವಾ 2 ಲೀ. ತೆಂಗಿನ ನೀರನ್ನು 200 ಲೀ. ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ.

**11. ಹತ್ತಿ ಬೆಳೆ.**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು**...ಜೋಳದ ವಿಧಾನವನ್ನೇ ಅನುಸರಿಸಿರಿ

**ಮಿಶ್ರ ಬೆಳೆ :–**

ಹತ್ತಿಯ ಜಮೀನಿನ ಸುತ್ತಲೂ ಮೆಕ್ಕೆ ಜೋಳದ ಒಂದು ಸಾಲನ್ನು ಹಾಕಿರಿ. ಹತ್ತಿಯ ಸಾಲಿನಲ್ಲಿ ಒಂದು ಹತ್ತಿಯ ಗಿಡ ಮತ್ತು ಒಂದು ಮೆಕ್ಕೆ ಜೋಳದ ಗಿಡವನ್ನು ಮಿಶ್ರಣ ಮಾಡಿ.ಹತ್ತಿಯ 2 ಸಾಲಿನ ಮಧ್ಯದಲ್ಲಿ ಹೆಸರು, ಉದ್ದು ಅಥವಾ ಸೊಯಾಬೀನ್‌ನ್ನು ಮಿಶ್ರಣಮಾಡಿ. ಹತ್ತಿ 8 ಸಾಲುಗಳ ನಂತರ ಒಂದು ಸಾಲು ಅಲಸಂದೆಯನ್ನು ಹಾಕಿರಿ. ಪ್ರತಿ ಒಂದು ಸಾವಿರ ಚ.ಅ.ಗೆ ಒಂದು ಚೆಂಡು ಹೂವು ಮತ್ತು ಒಂದು ತುಳಸಿ ಗಿಡವನ್ನು ನೆಡಿರಿ .

**ಬೀಜ ಸಂಸ್ಕಾರ :–**

20 ಕಿಲೊ ಬೀಜವನ್ನು ಬೀಜಾಮೃತದಲ್ಲಿ ನೆನೆಸಿ ಮತ್ತು ಮೇಲಿನಿಂದ ಮೊದಲು ಟ್ರಾಯಕೊಡಾರ್ಮ 100 ಗ್ರಾಂ.,ಮತ್ತೆ ಅಜಟೊಬಕ್ಟರ್ ಮತ್ತು ಪಿ.ಎಸ್.ಬಿ. 250 ಗ್ರಾಂ ಇವುಗಳನ್ನು ಲೇಪಿಸಿ, ನೆರಳಿನಲ್ಲಿ ಒಣಗಿಸಿ. 8–10 ಗಂಟೆಯೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

**ಬೆಳೆಯ ಸಂರಕ್ಷಣೆ :–**

1). ಜೋಳದ ಮೊದಲನೆಯ ವಿಧಾನವನ್ನು ಅನುಸರಿಸರಿ.
2) ಎಲೆಗಳಮೇಲೆ ಚುಕ್ಕೆಗಳು ಕಾಣಿಸಿ ಕೊಂಡರೆ 25 ಗ್ರಾಂ ಟ್ರಾಯಕೊಡಾರ್ಮ, 50 ಮಿಲಿ ಹಾಲು, 10 ಲೀ. ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ.
3) ಗಿಡಗಳು ಸಾಯುತ್ತಿವೆ ಎಂದೆನಿಸಿದಾಗ ಒಂದು ಕಿಲೊ ಟ್ರಾಯಕೊಡಾರ್ಮವನ್ನು 200ಲೀ. ನೀರಿನಲ್ಲಿ

4) ಲೀಫ್‌ಮೈನರ್ –15 ಲೀ. ನೀರು, 250 ಮಿಲಿ ಮಜ್ಜಿಗೆ, 50 ಮಿ ಗ್ರಾಂ ನಿಂಬೆ ರಸ, 100 ಗ್ರಾಂ ಬೆಲ್ಲ, 100 ಮಿಲಿ ಹುಣಸೆ ರಸ, 10 ಗ್ರಾಂ. ಹಿಂಗು, 10 ಗ್ರಾಂ ಕರ್ಪೂರವನ್ನು ಮಿಶ್ರಣ ಮಾಡಿ ಸಿಂಪಡಿಸಿ
5) ಕರಪಾರೋಗ– ಗೋಬ್ಬಳಿ ಮರದ ಚಿಗುರು ಎಲೆಗಳು 200 ಗ್ರಾಂ 2 ಲೀ. ನೀರಿನಲ್ಲಿ ಹಾಕಿ ಒಂದು ಲೀ. ನೀರು ಆಗುವವರೆಗೆ ಕುದಿಸಿರಿ ಇದಕ್ಕೆ 100 ಲೀ. ನೀರನ್ನು ಮಿಶ್ರಣ ಮಾಡಿ ಸಿಂಪಡಿಸಿ
6) 200 ಗ್ರಾಂ. ವಾಯುವಿಡಂಗವನ್ನು ಕುಟ್ಟಿ ಪುಡಿ ಮಾಡಿ 2 ಲೀ. ನೀರಿನಲ್ಲಿ ಹಾಕಿ 1 ಲೀ ನೀರು ಬರುವವರೆಗೆ ಕುದಿಸಿ. 5 ಲೀ ಹಾಲನ್ನು ಕುದಿಸಿ ಕೆನೆಯನ್ನು ತೆಗೆಯಿರಿ. ಎರಡನ್ನು 200 ಲೀ.ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ.
7) ಸೂರ್ಯೋದಯಕ್ಕೆ ಮೊದಲೇ ಯಾವ ಕಡೆಯಿಂದ ಗಾಳಿ ಬೀಸುತ್ತದೋ ಆ ದಿಕ್ಕಿನಿಂದ ದೇಶಿ ಹಸುವಿನ ಸಗಣಿಯ ಬೆರಣಿಯ ಹೊಗೆ ಹಾಕಿರಿ ನಂತರ ಬಂದ ಬೂದಿಯನ್ನು ಸಿಂಪಡಿಸಿ.

**12. ಕಬ್ಬಿನ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು...**

1) ಜೋಳದ ಮೊದಲನೇ ವಿಧಾನವನ್ನೇ ಅನುಸರಿಸಿರಿ.
2) ಬೀಜದ ಬಿತ್ತನೆಗೆ ಮೊದಲೇ ಒಂದು ಸಾರಿ 60 ಕಿಲೊ ಧಾನ್ಯದ ಗೊಬ್ಬರವನ್ನು ಒಂದು ಎಕರೆ ಜಮೀನಿಗೆ ನೀಡುವುದು. ಬೆಳೆಗೆ 4 ತಿಂಗಳಾದಾಗ ಮಣ್ಣನ್ನು ಮಗಚುವಾಗ ಮತ್ತೆ 60 ಕಿಲೊ ಮತ್ತು ಮಳೆ ಬೀಳವಾಗ(ಜೂನ್) 60 ಕಿಲೊ ಧಾನ್ಯದ ಗೊಬ್ಬರವನ್ನು ನೀಡಿ.
3) ಬೆಳೆಗೆ 4 ತಿಂಗಳಾದಾಗ ಮಣ್ಣನ್ನು ಮಗಚುವಾಗ ಒಂದು ಎಕರೆ ಜಮೀನಿಗೆ ,ಜಮೀನು ಹಸಿಯಾಗಿದ್ದಾಗ ಒಂದು ಟನ್ ಎರೆಗೊಬ್ಬರವನ್ನು ನೀಡುವುದು.
4) ಬೀಜಗಳನ್ನು ಬಿತ್ತುವಾಗ ಒಂದು ಎಕರೆ ಜಮೀನಿಗೆ 200 ಲೀ. ಜೀವಾಮೃತವನ್ನು ನೀರಿನ ಜೊತೆಗೆ ಅಥವಾ ಜಮೀನು ಹಸಿಯಾಗಿದ್ದಾಗ ಹಾಕಿರಿ.ಮತ್ತೆ ತಿಂಗಳಿಗೊಮ್ಮೆ ಒಂದು ವರ್ಷದವರೆಗೆ 200.ಲೀ. ಜೀವಾಮೃತವನ್ನು ನೀರಿನ ಜೊತೆಗೆ ಅಥವಾ ಡ್ರಿಪ್‌ನ ಮುಖಾಂತರ ಅಥವಾ ಜಮೀನು ಹಸಿಯಾಗಿದ್ದಾಗ ಸಿಂಪಡಿಸಿ.
5) ಕಬ್ಬಿನ ಗದ್ದೆಯಲ್ಲಿ ಮಣ್ಣನ್ನು ಮಗಚುವಾಗ ಮತ್ತು ಜೂನ್ ತಿಂಗಳಿನಲ್ಲಿ ಈ ರೀತಿ ಎರಡು ಸಾರಿ ಜೀವಾಮೃತಕ್ಕೆ 1 ಕಿಲೊ ಅಜಟೊಬಕ್ಟರ್ ಅಥವಾ ಅಜೊಸ್ಪಿರಿಲಿಯಮ್, 1 ಕಿಲೊ ,ಪಿ. ಎಸ್. ಬಿ ಜೀವಾಣು ಸಂವರ್ಧಕವನ್ನು ಮತ್ತು ಪೊಟಾಷನ್ನು ಉತ್ಪಾದಿಸುವ ಜೀವಾಣು ಸಂವರ್ಧಕ ಒಂದು ಕಿಲೊ ಮಿಶ್ರಣ ಮಾಡಿ ನೀರಿನ ಜೊತೆಗೆ ಅಥವಾ ಜಮೀನು ಹಸಿಯಾಗಿದ್ದಾಗ ಹರಿಸಿರಿ.

**ಬೀಜ ಸಂಸ್ಕಾರ** :– 200 ಲೀ. ಬೀಜಾಮೃತಲ್ಲಿ ಒಂದು ಟ್ರಾಯಕೊಡಾರ್ಮ,2 ಕಿಲೊ ಅಜಟೊಬಕ್ಟರ್ ಮತ್ತು 2 ಕಿಲೊ ಪಿ.ಎಸ್.ಬಿ. ಇವುಗಳನ್ನು ಮಿಶ್ರಣ ಮಾಡಿ ಅರ್ಧ ಗಂಟೆಯವರೆಗೆ ಬೀಜಗಳನ್ನು ಮುಳುಗಿಸಿ ನಂತರ ಬಿತ್ತಿರಿ.

**ಬೆಳೆಯ ಸಂರಕ್ಷಣೆ :–**

.1) ಜೋಳದ ಮೊದಲನೆಯ ವಿಧಾನವನ್ನು ಅನುಸರಿಸರಿ.
2) ಮಾವ ಹಾಗೂ ಮಿಲಿಬಗ್ಗ ನಿಯಂತ್ರಿಸಲು– 30 ಗ್ರಾಂ.ವ್ಹರ್ಟಿಸಿಲಿಯಮ ಪುಡಿ, 50 ಮಿಲಿ ಹಾಲನ್ನು 15 ಲೀ. ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ.

**(13) ಬದನೆಯ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು......**

1) ಜೋಳದ ಮೊದಲ ವಿಧಾನವನ್ನೇ ಅನುಸರಿಸಿರಿ
2) ಗಿಡಗಳನ್ನು ನೆಟ್ಟನಂತರ 15 ದಿನಗಳಿಂದ ಗಿಡಗಳ ಹತ್ತಿರ ಅರ್ಧ ಅಡಿ ಅಂತರದಲ್ಲಿ ಪ್ರತಿಯೊಂದು ಗಿಡಕ್ಕೂ 50 ಗ್ರಾಂ ಎರೆ ಗೊಬ್ಬರವನ್ನು ಜಮೀನು ಹಸಿಯಾಗಿದ್ದಾಗ ಹಾಕಿರಿ.
3) ಗಿಡಗಳನ್ನು ನೆಡುವಾಗ 200 ಲೀ. ಜೀವಾಮೃತವನ್ನು ಒಂದು ಎಕರೆ ಜಮೀನಿನಲ್ಲಿ ಜಮೀನು ಹಸಿಯಾಗಿದ್ದಾಗ ಸಂಜೆಯ ವೇಳೆಯಲ್ಲಿ ಹಾಕಿರಿ. ನಂತರ ಪ್ರತಿ 20 ದಿನಗಳಿಗೊಮ್ಮೆ 200–200 ಲೀ.ಜೀವಾಮೃತವನ್ನು ಬಳಸಿ
4) ಗಿಡಗಳನ್ನು ನೆಡುವಾಗ, ಹಣ್ಣು–ಹೂವು ಬಿಡುವಾಗ ಮತ್ತು 3 ತಿಂಗಳ ನಂತರ ಹೀಗೆ 3 ಸಾರಿ ಸಾರಜನಕ, ಪಾಸ್ಪರಸ್, ಪೊಟಾಷ್‌ನ್ನು ಉತ್ಪಾದಿಸುವಂತಹ ಜೀವಾಣು ಸಂವರ್ಧಕವನ್ನು ಒಂದು ಕಿಲೊ ಜೀವಾಮೃತದಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ.
5) ಹಣ್ಣು–ಹೂವುಗಳು ಬಿಡುವಾಗ ಮತ್ತು 3 ತಿಂಗಳ ನಂತರ ಹೀಗೆ 2 ಸಾರಿ 30 ಕಿಲೊ ಧಾನ್ಯದ ಗೊಬ್ಬರ ಮತ್ತು 1 ಟನ್ ಎರೆಗೊಬ್ಬರವನ್ನು ಜಮೀನು ಹಸಿಯಾಗಿದ್ದಾಗ ಹಾಕಿರಿ.
6) ಬೇವಿನ ಹಿಂಡಿ 50 ಕಿಲೊವನ್ನು ತಿಂಗಳಿಗೊಮ್ಮೆ ಗಿಡಗಳ ಮೇಲಿನಿಂದ ಜಮೀನಿಗೆ ಹಾಕಿರಿ.

**ಮಿಶ್ರ ಬೆಳೆ :–**

ಬದನೆಯ ಸುತ್ತಲೂ 2 ಸಾಲು ಮೆಕ್ಕೆ ಜೋಳ, 1 ಸಾಲು ಅಲಸಂದೆ, 8 ಸಾಲು ಬದನೆ, 1 ಸಾಲು ಚೆಂಡು ಹೂವಿನ ಗಿಡ ಮತ್ತೆ ಬದನೆ ಹೀಗೆ ಮಿಶ್ರಣ ಮಾಡಿರಿ. ಪ್ರತಿ ಒಂದು ಸಾವಿರ ಸ್ಕ್ವೆಯರ್ ಫೂಟನಲ್ಲಿ 1 ತುಳಸಿ ಗಿಡವಿರಲಿ.

**ಬೀಜ ಸಂಸ್ಕಾರ :–**

1) 100 ಗ್ರಾಂ ಬೀಜವನ್ನು ಬೀಜಾಮೃತದಲ್ಲಿ ನೆನೆಸಿರಿ. ಮೇಲಿನಿಂದ ಮೊದಲು 2 ಗ್ರಾಂ ಟ್ರಾಯಕೊಡಾರ್ಮ, 2 ಗ್ರಾಂ ಅಜಟೊಬಕ್ಟರ್ ಮತ್ತು 2 ಗ್ರಾಂ. ಪಿ.ಎಸ್ ಬಿ.ಗಳನ್ನು ಲೇಪಿಸಿದ ನಂತರ ಬಿತ್ತಿರಿ. ಮೇಲಿನಿಂದ ಒಂದು ಲೀ. ಜೀವಾಮೃತವನ್ನು ನೀರಿನಲ್ಲಿ ಮಿಶ್ರಣ ಮಾಡಿ ಹರಿಸಿರಿ. ಅಲ್ಲಿ ಸಗಣಿ ಗೊಬ್ಬರ ಮತ್ತು ಎರೆ ಗೊಬ್ಬರವನ್ನು ಜಮೀನಿಗೆ ಹಾಕಿರಿ.
2) ಗಿಡವನ್ನು ನೆಡುವುದಕ್ಕೆ ಮೊದಲೇ 10 ಲೀ. ನೀರಿನಲ್ಲಿ 40 ಗ್ರಾಂ ಟ್ರಾಯಕೊಡಾರ್ಮ ಮತ್ತು 500 ಮಿಲಿ. ಬೇವಿನ ಅರ್ಕವನ್ನು ಮಿಶ್ರಣ ಮಾಡಿ ಗಿಡದ ಬೇರುಗಳನ್ನು 3 ಗಂಟೆಗಳವರೆಗೆ ಮುಳುಗಿಸಿರಿ. ಮತ್ತೆ ಬೇರಿಗೆ ಅಜಟೊಬಕ್ಟರ್ ಮತ್ತು ಪಿ.ಎಸ್. ಬಿ.ಯನ್ನು ಹಾಕಿ ನೆಡಿರಿ.

**ಬೆಳೆಗಳ ಸಂರಕ್ಷಣೆ :–**

1) ಬೀಜವು ಮೊಳೆತ ನಂತರ 15 ದಿನಗಳಲ್ಲಿ 3% ಗೋಮೂತ್ರ ಅಥವಾ 5% ಬೇವಿನ ಅರ್ಕವನ್ನು ಸಿಂಪಡಿಸಿರಿ.
2) ರಸವನ್ನು ಹೀರುವ ಕೀಟಗಳು, ಗಿಡಗಳ ಕಾಂಡದಲ್ಲಿ ಮತ್ತು ಬದನೆಯಲ್ಲಿ ಬರುವ ಕೀಟಗಳನ್ನು ನಿಯಂತ್ರಿಸಲು 4% ಗೊಮೂತ್ರ, 5% ಬೇವಿನ ಅರ್ಕ ಅಥವಾ ದಶಪರ್ಣಿ ಅರ್ಕಗಳಲ್ಲಿ ಒಂದನ್ನು ಅದಲು ಬದಲು ಮಾಡಿ ಸಿಂಪಡಿಸಿರಿ.

**(14) ಎಲೆ ಕೋಸು ಮತ್ತು ಹೂ ಕೋಸಿನ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು**

1) ಜೋಳದ ಮೊದಲ ಮತ್ತು ಎರಡನೆಯ ವಿಧಾನವನ್ನೇ ಅನುಸರಿಸಿರಿ
2) ಬೆಳೆಗೆ 1 ತಿಂಗಳಾದಾಗ 1 ಎಕರೆ ಜಮೀನಿಗೆ ಎರೆಗೊಬ್ಬರ ಮತ್ತು 60 ಕಿಲೊ ಧಾನ್ಯದ ಗೊಬ್ಬರ ಮತ್ತು ಸಾರಜನಕ,ಪಾಸ್ಪರಸ್, ಪೊಟಾಷ ಉತ್ಪಾದಿಸುವಂತಹ ಒಂದು ಕಿಲೊ ಜೀವಾಣು ಸಂವರ್ಧಕಗಳನ್ನು ಮಿಶ್ರಣ ಮಾಡಿ , ಜಮೀನು ಹಸಿಯಾಗಿದ್ದಾಗ ಹರಿಸಿರಿ.
3) ಬೇವಿನ ಹಿಂಡಿ 50 ಕಿಲೊವನ್ನು ತಿಂಗಳಿಗೊಮ್ಮೆ ಗಿಡಗಳ ಮೇಲಿನಿಂದ ಜಮೀನಿಗೆ ಹಾಕಿರಿ.

**ಮಿಶ್ರ ಬೆಳೆ :–**

ಬೆಳೆಯ ಸುತ್ತಲೂ 2 ಸಾಲು ಮೆಕ್ಕೆ ಜೋಳ, 1 ಸಾಲು ಅಲಸಂದೆ, 20 ಸಾಲು ಎಲೆ ಕೋಸು, 1 ಸಾಲು ಸಾಸುವೆ, ಮತ್ತು 20 ಸಾಲು ಎಲೆ ಕೋಸು ಅಥವಾ ಹೂ ಕೋಸು ಹೀಗೆ ಮಿಶ್ರಣ ಮಾಡಿ ಹಾಕಿರಿ. 20 ಸಾಲು ಎಲೆ ಕೋಸಿನಲ್ಲಿ 2% ಮೆಕ್ಕೆಜೋಳ ಮತ್ತು. ಪ್ರತಿ 1000 ಚ.ಅ.ಗೆ 1 ಚೆಂಡು ಹೂವಿನ ಗಿಡ ಮತ್ತು 1 ತುಳಸಿ ಗಿಡವಿರಲಿ.

**ಬೀಜ ಸಂಸ್ಕಾರ :–**

1) 100 ಗ್ರಾಂ ಬೀಜವನ್ನು ಬೀಜಾಮೃತದಲ್ಲಿ ನೆನೆಸಿರಿ. ಮೇಲಿನಿಂದ ಮೊದಲು 2 ಗ್ರಾಂ ಟ್ರಾಯಕೊಡಾರ್ಮ, 2 ಗ್ರಾಂ ಅಜಟೊಬಕ್ಟರ್ ಮತ್ತು 2 ಗ್ರಾಂ. ಪಿ.ಎಸ್ ಬಿ.ಗಳನ್ನು . ಲೇಪಿಸಿದ ನಂತರ ಬಿತ್ತಿರಿ. ಮೇಲಿನಿಂದ ಒಂದು ಲೀ. ಜೀವಾಮೃತವನ್ನು ನೀರಿನಲ್ಲಿ ಮಿಶ್ರಣ ಮಾಡಿ ಹರಿಸಿರಿ. ಅಲ್ಲಿ ಸಗಣಿಗೊಬ್ಬರ ಮತ್ತು ಎರೆ ಗೊಬ್ಬರವನ್ನು ಜಮೀನಿಗೆ ಖಂಡಿತಾ ಹಾಕಿರಿ. ಬೀಜವನ್ನು ಬಿತ್ತಿದ ನಂತರ ನೀರಿನ ಜೊತೆ ಒಂದು ಲೀ. ಜೀವಾಮೃತವನ್ನು ನೀಡಿರಿ.
2) ಗಿಡಗಳನ್ನು ಹಾಕುವುದಕ್ಕೆ ಮೊದಲು 2 ಲೀ. ಜೀವಾಮೃತದಲ್ಲಿ 50 ಗ್ರಾಂ ಟ್ರಾಯಕೊಡಾರ್ಮ,250 ಗ್ರಾಂ ಅಜಟೊಬಕ್ಟರ್ ಮತ್ತು 250 ಗ್ರಾಂ ಪಿ ಎಸ್. ಬಿ. ಗಳನ್ನು ಮಿಶ್ರಣಮಾಡಿ ಗಿಡಗಳ ಬೇರುಗಳನ್ನು 15 ನಿಮಿಷಗಳ ಕಾಲ ನೆನೆಸಿರಿ ನಂತರ ನೆಡಿರಿ.

**ಬೆಳೆಯ ಸಂರಕ್ಷಣೆ :–**

1) ಚಿಕ್ಕ ಗಿಡಗಳಿಗೆ 3% ಗೋಮೂತ್ರ ಅಥವಾ 5% ಬೇವಿನ ಅರ್ಕವನ್ನು ಹಾಕಿರಿ.
2) ಜೋಳದ ಒಂದನೇ ವಿಧಾನವನ್ನೇ ಅನುಸರಿಸಿರಿ
3) ತೊಗರಿಯ ಮೂರನೇ ವಿಧಾನವನ್ನು ಅನುಸರಿಸಿರಿ.

**(15) ಮೆಣಸಿನ ಕಾಯಿ ಬೆಳೆ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು.....**

1) ಪ್ರತಿ ಎಕರೆಗೆ 6 ಟನ್ ಸಗಣಿ ಗೊಬ್ಬರ ಅಥವಾ ಹಸಿರು ಗೊಬ್ಬರವನ್ನು ಜಮೀನಿಗೆ ಸೇರಿಸಿ ಹದಗೊಳಿಸಬೇಕು.
2) ಗಿಡಗಳನ್ನು ಮತ್ತು ಅದರ ನಂತರ ಪ್ರತಿ 20–20 ದಿನಗಳ ಅಂತರದಲ್ಲಿ 200 ಲೀ.ಜೀವಾಮೃತವನ್ನು ಒಂದು ಎಕರೆ ಜಮೀನಿಗೆ, ಜಮೀನು ಹಸಿಯಾಗಿದ್ದಾಗ ಸಂಜೆ ವೇಳೆ ಸಿಂಪಡಿಸುವುದು ಅಥವಾ ನೀರಿನ ಜೊತೆ ಹರಿಸಬಹುದು.ಅಥವಾ ಡ್ರಿಪನ ಮುಖಾಂತರವೂ ಹರಿಸಬಹುದು.
3) ಬೇವಿನ ಹಿಂಡಿ 50 ಕಿಲೊವನ್ನು ತಿಂಗಳಿಗೊಮ್ಮೆ ಗಿಡಗಳ ಮೇಲಿನಿಂದ ಜಮೀನಿಗೆ ಹಾಕಿರಿ.
4) ಹೂ ಹಣ್ಣುಗಳು ಬಿಡುವಾಗ ಒಂದು ಎಕ್ಕರೆ ಜಮೀನಿಗೆ ಒಂದು ಟನ್ ಎರೆ ಗೊಬ್ಬರ ಮತ್ತು 20 ಕಿಲೊ. ಧಾನ್ಯದ ಗೊಬ್ಬರ ಮತ್ತು ಟ್ರಾಯಕೊಡರ್ಮ ಒಂದು ಕಿಲೊ, ಅಜಟೊಬಕ್ಟರ ಒಂದು ಕಿಲೊ. ಪಿ.ಎಸ.ಬಿ. ಒಂದು ಕಿಲೊ. ಎಲ್ಲವನ್ನು ಮಿಶ್ರಣ ಮಾಡಿ ಜಮೀನು ಹಸಿಯಾಗಿದ್ದಾಗ ಒಂದು ಎಕರೆ ಜಮೀನಿಗೆ ಹಾಕಿರಿ.

**ಮಿಶ್ರ ಬೆಳೆ :–**

1) ಬೆಳೆಯ ಸುತ್ತಲೂ 2 ಸಾಲು ಮೆಕ್ಕೆ ಜೋಳ, 1 ಸಾಲು ಎಳ್ಳು, 10 ಸಾಲು ಮೆಣಸಿನ ಗಿಡ, 1 ಸಾಲು ಚೆಂಡು ಹೂವಿನ ಗಿಡ ಮತ್ತೆ ಮೆಣಸಿನ ಗಿಡ–ಈ ರೀತಿ ಹಾಕಿರಿ.
2) ಪ್ರತಿ 1000 ಚ.ಅ.ಗೆ 1 ತುಳಸಿ ಗಿಡವಿರಲಿ.ಮತ್ತು ಒಂದು ದೊಡ್ಡ ಸೋಂಪಿನ ಗಿಡವಿರಲಿ.

–ಮೆಕ್ಕೆ ಮತ್ತು ಎಳ್ಳನ್ನು ಹಾಕುವುದರಿಂದ ಎಲೆಗಳು ಮುರುಟಿಕೊಳ್ಳುವುದು ನಿಲ್ಲುತ್ತದೆ.
–ಚೆಂಡಿನ ಹೂವಿನ ಗಿಡದಿಂದ ತಂತುಹುಳುವಿನ ಆಕ್ರಮಣವನ್ನು ತಡೆಯಬಹುದು.
–ದೊಡ್ಡ ಸೋಂಪಿನಿಂದ ಜೇನು ಹುಳ ಬರುತ್ತದೆ. ಪರಾಗಸರ್ಶವು ಚೆನ್ನಾಗಿ ನಡೆಯುತ್ತದೆ.
–ತುಳಸಿಯಲ್ಲಿ 27 ಬಗೆಯ ಅಲ್ಕೊಲೈಡ್‌ಗಳಿರುತ್ತವೆ. ಇದರಿಂದ ಮೆಣಸಿನ ಗಿಡಗಳ ಬೇರುಗಳು

ಕೊಳೆಯುವುದು ಮತ್ತು ಗಿಡಗಳು ಸಾಯುವುದು ನಿಲ್ಲುತ್ತದೆ. ಇದರಿಂದ ಓಜೋನ್ ವಾಯುವಿನ ನಿರ್ಮಾಣವಾಗುತ್ತದೆ.

**ಬೀಜ ಸಂಸ್ಕಾರ :–**

1) ಬದನೆ ಬೆಳೆಯ ಬೀಜ ಸಂಸ್ಕಾರದ ವಿಧಿಯನ್ನು ಅನುಸರಿಸಿರಿ.
2) ಗಿಡಗಳನ್ನು ನೆಡುವುದಕ್ಕೆ ಮೊದಲು 2 ಲೀ. ಬೀಜಾಮೃತದಲ್ಲಿ, 50 ಗ್ರಾಂ ಟ್ರಾಯಕೊಡಾರ್ಮ, 250 ಗ್ರಾಂ ಅಜಟೋಬಕ್ಟರ ಮತ್ತು 250 ಗ್ರಾಂ ಪಿ.ಎಸ್. ಬಿ.ಗಳನ್ನು ಮಿಶ್ರಣ ಮಾಡಿ ಗಿಡದ ಬೇರುಗಳನ್ನು ಅರ್ಧ ಘಂಟೆಯವರೆಗೆ ಮುಳುಗಿಸಿರಿ ಮತ್ತು ನೆಡಿರಿ.

**ಬೆಳೆಯ ಸಂರಕ್ಷಣೆ :–**

1) ಬೀಜವು ಮೊಳೆತ 8 ದಿನಗಳ ನಂತರ 3% ಗೋಮೂತ್ರ ಅಥವಾ 5% ಬೇವಿನ ಅರ್ಕವನ್ನು ಹಾಕಿರಿ.
2) ರಸವನ್ನು ಹೀರುವ ಕೀಟಗಳು, ಎಲೆಗಳು ಮುರುಟಿ ಕೊಳ್ಳುವುದಕ್ಕಾಗಿ 4% ಗೊಮೂತ್ರ, 5% ಬೇವಿನ ಅರ್ಕ ಅಥವಾ ದಶಪರ್ಣಿ ಅರ್ಕಗಳಲ್ಲಿ ಒಂದನ್ನು ಅದಲು ಬದಲು ಮಾಡಿ ಸಿಂಪಡಿಸಿರಿ.
3) ಎಲೆಗಳು ಮುರುಟಿ ಕೊಳ್ಳುವುದು–ಇದಕ್ಕಾಗಿ 5 ಲೀ. ಮಜ್ಜಿಗೆಯನ್ನು 2 ದಿನಗಳ ಕಾಲ ತಾಮ್ರದ ಪಾತ್ರೆಯಲ್ಲಿ ಇಟ್ಟು ಅದಕ್ಕೆ 200 ಗ್ರಾಂ. ವ್ಹರ್ಟಿಸಿಲಿಯಮನ್ನು, 100 ಲೀ. ನೀರಿನಲ್ಲಿ ಮಿಶ್ರಣ ಮಾಡಿ ಸಿಂಪಡಿಸಿ.

(16) **ಟೊಮೆಟೊ :–**

**ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು......**

1) ಜೋಳದ ಒಂದು ಮತ್ತು ಎರಡನೆಯ ವಿಧಿಯನ್ನು ಅನುಸರಿಸಿರಿ.
2) ಹಣ್ಣು–ಹೂಗಳು ಬಿಡುವಾಗ ಒಂದು ಎಕರೆ ಜಮೀನಿಗೆ ಒಂದು ಟನ್ ಎರೆಗೊಬ್ಬರ, 60 ಕಿಲೊ ಧಾನ್ಯದ ಗೊಬ್ಬರ ಮತ್ತು ಒಂದು ಕಿಲೊ ಟ್ರಾಯಕೊಡಾರ್ಮ ಮತ್ತು ಒಂದು ಕಿಲೊ ಸಾರಜನಕ, ಪೊಟಾಷ್, ಪಾಸ್ಪರಸ್‌ನ್ನು ಉತ್ಪಾದನೆ ಮಾಡುವ ಜೀವಾಣು ಸಂವರ್ಧಕಗಳನ್ನು ಮಿಶ್ರಣ ಮಾಡಿ ಜಮೀನು ಹಸಿಯಾಗಿದ್ದಾಗ ಹರಿಸಿರಿ.
3) ಬೇವಿನ ಹಿಂಡಿ 60 ಕಿಲೊ. ಗಿಡಗಳ ಮೇಲೆ ಜಮೀನಿಗೆ ಹಾಕಿರಿ.

**ಮಿಶ್ರ ಬೆಳೆ :–**

1) ಬೆಳೆಯ ಸುತ್ತಲೂ ಒಂದು ಸಾಲು ಮೆಕ್ಕೆ ಜೋಳ, ಒಂದು ಸಾಲು ಅಲಸಂದೆ, 15 ಸಾಲು ಟೊಮೆಟೊ ಮತ್ತೆ ಒಂದು ಅಲಸಂದೆ ಮತ್ತು ಒಂದು ಸಾಲು ಚೆಂಡು ಹೂವಿನ ಗಿಡ– ಹೀಗೆ ನೆಡಿರಿ.
2) ಟೊಮೆಟೊನ 15 ಸಾಲುಗಳಲ್ಲಿ 2% ಮೆಕ್ಕೆ ಜೋಳವನ್ನು ಖಂಡಿತಾ ನೆಡಿರಿ. ಒಂದು 1000 ಚ.ಅ.ಯಲ್ಲಿ ಒಂದು ತುಳಸಿ ಗಿಡವನ್ನು ಖಂಡಿತಾ ನೆಡಿರಿ.

**ಬೀಜ ಸಂಸ್ಕಾರ :–**

1) ಬೀಜವನ್ನು ಬಟ್ಟೆಯಲ್ಲಿ ಕಟ್ಟಿ ಇಡೀರಾತ್ರಿ ಗೋಮೂತ್ರದಲ್ಲಿ ನೆನೆಸಿರಿ ಮತ್ತೆ ಆ ಬೀಜವನ್ನು ಒಣಗಿಸಿ, ಬೀಜಾಮೃತವನ್ನು ಹಾಕಿ ಮೇಲಿನಿಂದ 100 ಗ್ರಾಂ ಬೀಜಕ್ಕೆ 2 ಗ್ರಾಂ. ಟ್ರಾಯಕೊಡಾರ್ಮ ಮತ್ತೆ 2 ಗ್ರಾಂ ಅಜಟೊಬಕ್ಟರ್ ಮತ್ತು 2 ಗ್ರಾಂ ಪಿ.ಎಸ್. ಬಿ.ಗಳನ್ನು ಲೇಪಮಾಡಿ ಬೀಜವನ್ನು ಬಿತ್ತಿರಿ.ಬೀಜವನ್ನು ಬಿತ್ತುವ ಮೊದಲು ಸಗಣಿ ಗೊಬ್ಬರ ಅಥವಾ ಎರೆ ಗೊಬ್ಬರ,ಬೇವಿನ ಹಿಂಡಿಯನ್ನು ಖಂಡಿತಾ ಹಾಕಿರಿ.
2) ಗಿಡವನ್ನು ನೆಡುವುದಕ್ಕೆ ಮೊದಲೇ 2 ಲೀ. ಬೀಜಾಮೃತದಲ್ಲಿ, 50 ಗ್ರಾಂ ಟ್ರಾಯಕೊಡಾರ್ಮ, 250 ಗ್ರಾಂ. ಅಜಟೊಬಕ್ಟರ್ ಮತ್ತು 250 ಗ್ರಾಂ. ಪಿ.ಎಸ್.ಬಿ.ಗಳನ್ನು ಮಿಶ್ರಣ ಮಾಡಿ ಗಿಡದ ಬೇರುಗಳನ್ನು ಅರ್ಧ ಗಂಟೆಯವರೆಗೆ ಮುಳುಗಿಸಿರಿ. ಮತ್ತೆ ನೆಡಿರಿ

**ಬೆಳೆಯ ಸಂರಕ್ಷಣೆ :–**

1) ರಸವನ್ನು ಹೀರುವ ಕೀಟ ಮತ್ತು ಸಣ್ಣಹುಳುಗಳನ್ನು ನಿಯಂತ್ರಿಸಲು 4% ಗೋಮೂತ್ರ, %% ಬೇವಿನ ಅರ್ಕ

ಅಥವಾ ದಶಪರ್ಣಿ ಅರ್ಕಗಳಲ್ಲಿ ಯಾವುದಾದರೂ ಒಂದನ್ನು ಅದಲು ಬದಲು ಮಾಡಿ ಸಿಂಪಡಿಸಿರಿ.

2) ಒಂದು ಎಕರೆ ಜಮೀನಿನಲ್ಲಿ 12–15 ಮರದ ಆಂಟೆನಾಗಳನ್ನು ನೆಡಿರಿ. ಇವುಗಳ ಮೇಲೆ ಹಕ್ಕಿಗಳು ಕುಳಿತುಕೊಳ್ಳುವುದರಿಂದ ಕೀಟಗಳನ್ನು ನಿಯಂತ್ರಿಸಲು ಸಹಜವಾಗುತ್ತದೆ.

3) ಕೀಟದ ಪ್ರಭಾವವು ಹೆಚ್ಚು ಕಾಣಿಸಿಕೊಂಡರೆ 30 ಗ್ರಾಂ. ವ್ಹರ್ಟಿಸಿಲಿಯಮ ಪುಡಿ, 50 ಮಿಲಿ ಹಾಲು 15 ಲೀ. ನೀರಿನಲ್ಲಿ ಬೆರೆಸಿ ಸಿಂಪಡಿಸಿ.

4) ಹತ್ತಿಯ 4,5,6,7, ವಿಧಿಯನ್ನು ಅನುಸರಿಸಿರಿ.

(17) **ಸೌತೇಕಾಯಿ, ಹಾಗಲಕಾಯಿ, ಕುಂಬಳಕಾಯಿ, ಹೀರೇಕಾಯಿ ತುಪ್ಪದ ಹೀರೇಕಾಯಿ**

**ಜಮೀನನ್ನು ಶಕ್ತಿಶಾಲಿಯನ್ನಾಗಿ ಮಾಡಲು....**

1) ಜೋಳದ 1,2 ವಿಧಿಯನ್ನು ಅನುಸರಿಸಿರಿ.

2) ಮೆಣಸಿನ ಕಾಯಿಯ 3 ನೇ ವಿಧಿಯನ್ನು ಅನುಸರಿಸಿರಿ..

**ಮಿಶ್ರ ಬೆಳೆ :–**

1) ಬೆಳೆಯ ಸುತ್ತಲೂ ಒಂದು ಸಾಲು ಮೆಕ್ಕೆ ಜೋಳ, ಒಂದು ಸಾಲು ಅಲಸಂದೆ,5% ಮೆಕ್ಕೆ ಜೋಳವನ್ನು ಮಿಶ್ರಣ ಮಾಡು ವುದು ಅಗತ್ಯ.

2) ಪ್ರತಿ 1000 ಚ.ಅ.ಗೆ 1 ತುಳಸಿ ಗಿಡವಿರಲಿ, ಮತ್ತು ಒಂದು ಚೆಂಡು ಹೂವಿನ ಗಿಡವಿರಲಿ.

**ಬೀಜ ಸಂಸ್ಕಾರ :–**

100 ಗ್ರಾಂ ಬೀಜವನ್ನು ಬೀಜಾಮೃತದಲ್ಲಿ ನೆನೆಸಿರಿ. ಮೇಲಿನಿಂದ ಮೊದಲು 2 ಗ್ರಾಂ ಟ್ರಾಯಕೊಡಾರ್ಮ, 5 ಗ್ರಾಂ ಅಜಟೊಬಕ್ಟರ್ ಮತ್ತು ಪಿ.ಎಸ್ ಬಿ. 5 ಗ್ರಾಂ. ಲೇಪಿಸಿ, ಬೀಜವನ್ನು ನೆರಳಿನಲ್ಲಿ ಒಣಗಿಸಿ 8–10 ಗಂಟೆಯೊಳಗೆ ಜಮೀನು ಹಸಿಯಾಗಿದ್ದಾಗ ಬಿತ್ತಿರಿ.

**ಬೆಳೆಯ ಸಂರಕ್ಷಣೆ :–**

1) ಜೋಳದ 1 ನೇ ವಿಧಿಯನ್ನು ಅನುಸರಿಸಿರಿ.

2) ಕೀಟಗಳ ಪ್ರಭಾವವು ಹೆಚ್ಚಾಗಿ ಕಾಣಿಸಿ ಕೊಂಡರೆ 30 ಗ್ರಾಂ. ವ್ಹರ್ಟಿಸಿಲಿಯಮ ಪುಡಿ, 50 ಮಿಲಿ. ಹಾಲನಲ್ಲಿ ಮಿಶ್ರಣಮಾಡಿ ಸಿಂಪಡಿಸಿರಿ.

3) ಹತ್ತಿಯ 4,5,6,7. ವಿಧಿಯನ್ನು ಅನುಸರಿಸಿರಿ.

(18) **ಬಾಳೆಯ ಬೆಳೆ :–**

ಜಮೀನನ್ನು ಶಕ್ತಿ ಶಾಲಿಯನ್ನಾಗಿ ಮಾಡಲು....

1) ಜೋಳದ 1 ವಿಧಿಯನ್ನು ಅನುಸರಿಸಿರಿ.

2) ಗಿಡವನ್ನು ನೆಡುವಾಗ ಮಧ್ಯದಲ್ಲಿ ಹಸಿರು ಗೊಬ್ಬರವನ್ನು ಹರಡಿರಿ.

3) ಗಿಡವನ್ನು ನೆಟ್ಟ ಒಂದು ತಿಂಗಳ ನಂತರ ಗಿಡಗಳ ಪಕ್ಕದಲ್ಲಿ ಒಂದು ಟನ್ ಎರೆಗೊಬ್ಬರ ಮತ್ತು 60 ಕಿಲೊ ಧಾನ್ಯದ ಗೊಬ್ಬರಗಳನ್ನು ಮಿಶ್ರಣ ಮಾಡಿ ಜಮೀನು ಹಸಿಯಾಗಿದ್ದಾಗ ಹಾಕಿರಿ.

4) ತಿಂಗಳಿಗೊಮ್ಮೆ 200 ಲೀ.ಜೀವಾಮೃತವನ್ನು ಒಂದು ಎಕರೆ ಜಮೀನಿಗೆ, ಜಮೀನು ಹಸಿಯಾಗಿದ್ದಾಗ ಸಂಜೆ ವೇಳೆ ಸಿಂಪಡಿಸುವುದು ಅಥವಾ ನೀರಿನ ಜೊತೆ ಹರಿಸಬಹುದು.

**ಮಿಶ್ರ ಬೆಳೆ :–**

1) ಬೆಳೆಯ ಸುತ್ತಲೂ ಬೂರಗದ ಗೋಡೆಯನ್ನು ಮಾಡಿ.

2) ಮಧ್ಯದಲ್ಲಿ 5% ನುಗ್ಗೆಕಾಯಿಯನ್ನು ಮಿಶ್ರಣ ಮಾಡಿ.

**ಬೀಜ ಸಂಸ್ಕಾರ :–**

ಗಿಡಗಳನ್ನು ಹಾಕುವುದಕ್ಕೆ ಮೊದಲೇ ಗುಂಡಿಯನ್ನು ತೆಗೆಯಿರಿ. ಮತ್ತೆ 200 ಲೀ. ಬೀಜಾಮೃತದಲ್ಲಿ 1 ಕಿಲೊ ಟ್ರಾಯಕೊಡಾರ್ಮ, 2 ಕಿಲೊ ಅಜಟೊಬಕ್ಟರ್, ಮತ್ತು 2 ಕಿಲೊ ಪಿ. ಎಸ್ ಬಿ.ಗಳನ್ನು ಮಿಶ್ರಣ ಮಾಡಿ ಗಿಡಗ[illegible]ದರಲ್ಲಿ ಮುಳುಗಿಸಿ ಅಥವಾ ಗುಂಡಿಗೆ 250 ಮಿಲಿ. ಈ ಮಿಶ್ರಣವನ್ನು ಹಾಕಿ ಗಿಡಗಳನ್ನು ನೆಡಬಹುದು.

**ಸತ್ಯವನ್ನು ಸ್ಥಿರವಾಗಿ ಅರಿಯಿರಿ, ಯೌಗಿಕ ಕೃಷಿಯ ಕಥೆ ಹೇಳಿರಿ**

**ಬೆಳೆಗಳ ಸಂರಕ್ಷಣೆ :–**

# ಶಾಶ್ವತ ಯೌಗಿಕ ಕೃಷಿ ಹಾಗೂ ರಾಸಾಯನಿಕ ಕೃಷಿಯ ತುಲನಾತ್ಮಕ ಅಧ್ಯಯನ

ಮಹಾರಾಷ್ಟ್ರ ರಾಜ್ಯದ ಕೊಲ್ಹಾಪುರ ಜಿಲ್ಲೆಯಲ್ಲಿ ಟೊಮಟೊ ಬೇಸಾಯದ ಮೇಲೆ ನಡೆಸಿದ ಯೌಗಿಕ ಕೃಷಿ ಹಾಗೂ ರಾಸಾಯನಿಕ ಕೃಷಿಯ ತೌಲನಿಕ ಪ್ರಯೋಗವನ್ನು ಶಿರೋಲ ತಾಲ್ಲೋಕು ಚಿಪರಿ ಹಳ್ಳಿಯಲ್ಲಿ ನಡೆಯಿತು. ಈ ಎರಡು ಪ್ರಯೋಗಗಳಲ್ಲಿ ಟೊಮಟೊನಾಮಧಾರಿ 2535 ಜಾತಿಯ ಮೇಲೆ ಪ್ರಯೋಗ ನಡೆಯಿತು. ಎರಡು ಪ್ರಯೋಗಗಳಿಂದ ದೊರೆತ ಬೆಳೆಯಿಂದ ಕೃಷಿ ಪ್ರಯೋಗ ಶಾಲೆಯಲ್ಲಿ ವಿಶ್ಲೇಷಣೆಯನ್ನು ಮಾಡಲಾಯಿತು. ಇದರ ಫಲಿತಾಂಶವು ಕೆಳಗಿನಂತಿದೆ –

| ಯೌಗಿಕ ಕೃಷಿ | ರಾಸಾಯನಿಕ(ಎಟೆಂಡಿರಂಚಿಟೆಮೆಿ) ಕೃಷಿ |
|---|---|
| ರೈತನ ಹೆಸರು : ಕುಮಾರ ಬಾಪೂ ಪೋವಾರ | ದಿನಕರ ತಾತೋಬಾ ಪೊವಾರ |
| ಕ್ಷೇತ್ರಫಲ : 18 ಗುಂಟೆ | 38 ಗುಂಟೆ |
| ಉಳುಮೆ ದಿನಾಂಕ : 24 ಏಪ್ರಿಲ್ 2008 | 25 ಏಪ್ರಿಲ್ 2008 |
| ಸಸಿ ನೆಟ್ಟ ದಿನಾಂಕ : 25 ಮೇ 2008 | 28 ಮೇ 2008 |
| (1) ಈ ಪ್ರಯೋಗದಲ್ಲಿ ಬೆಳೆಗೆ ಯಾವುದೇ ಬಗೆಯ ಜೈವ, ಸೈಂದ್ರಿಯ ಹಾಗೂ ರಾಸಾಯನಿಕ ಗೊಬ್ಬರಗಳನ್ನು ಬಳಸಿಲ್ಲ | (1) ಈ ಪ್ರಯೋಗದಲ್ಲಿ ಯೂರಿಯಾ 50 ಕಿಲೋ, ಪೊಟಾಶ್ 200 ಕಿಲೋ. ಸೂಪರ ಫಾಸ್ಪೆಟ್ 100 ಕಿಲೋ. ಸಂಪೂರ್ಣ (19:19:19) 100 ಕಿ.ಲೋ.ಡಿ.ಎ.ಪಿ. 200 ಕಿಲೋ. ಬೇವಿನ ಹಿಂಡಿ 150 ಕಿಲೋ. |
| (2) ಬೆಳೆಯ ಮೇಲೆ ಯಾವುದೇ ಜೈವಿಕ ಹಾಗೂ ರಾಸಾಯನಿಕ ಕೀಟನಾಶಕ ಔಷಧಿಗಳನ್ನು ಬಳಸಿಲ್ಲ | (2) ಬೆಳೆಯ ಮೇಲೆ ರಾಸಾಯನಿಕ ಕೀಟ ಹಾಗೂ ರೋಗ ನಾಶಕಗಳನ್ನು ಬಳಕೆ ಮಾಡಲಾಗಿದೆ. ಎಮ45–ಒಂದು ಕಿಲೋ. ಟಿಲ್‌ಟಾಪ್ –ಒಂದು ಲೀಟರ್ ಬಾಯೋಕ್ಟೀನ್– ಒಂದು ಕಿಲೋ. ರೋಗರ್– ಒಂದು ಲೀಟರ್ ಡೂನೆಟ–ಒಂದು ಕಿಲೋ. ಟೊಪಾಸ್–ಒಂದು ಕಿಲೋ. |
| (3) ಜಮೀನಿಗೆ 4 ಸಲ ನೀರನ್ನು ಕೊಡಲಾಗಿದೆ | (3) ಜಮೀನಿಗೆ 4 ಸಲ ನೀರನ್ನು ಕೊಡಲಾಗಿದೆ |
| (4) ಈ ಬೆಳೆಯ ಮೇಲೆ ರಾಜಯೋಗದ ಪ್ರಯೋಗವನ್ನು ಮಾಡಲಾಗಿದೆ. | (4) ಈ ಬೆಳೆಯ ಮೇಲೆ ರಾಜಯೋಗದ ಪ್ರಯೋಗ ಮಾಡಿಲ್ಲ |
| (5) ಉಳುಮೆತನಕ ಖರ್ಚು ರೂ.1360/– | (5) ಉಳುಮೆ ತನಕ ಖರ್ಚು ರೂ. 3200/– |
| (6) ಬೀಜ ಕೊಳ್ಳಲು ರೂ. 440/– | (6) ಬೀಜ ಕೊಳ್ಳಲು ರೂ. 660/– |
| (7) ಗೊಬ್ಬರದ ಖರ್ಚು ರೂ. –ಇಲ್ಲ | (7) ಗೊಬ್ಬರದ ಖರ್ಚು ರೂ.9800/– |
| (8) ಬೆಳೆಯ ಸಂರಕ್ಷಣೆಯ ವೆಚ್ಚ –ಇಲ್ಲ | (8) ಬೆಳೆಯ ಸಂರಕ್ಷಣೆಯ ವೆಚ್ಚ ರೂ.3000/ |
| (9) ಇನ್ನಿತರೆ ವೆಚ್ಚ – ರೂ. 4220/– (ಕೂಲಿ,ನೀರು ಕೊಡಲು,ಸುತ್ತಲಿಯಿಂದ ಕಟ್ಟುವುದು) | (9) ಇನ್ನಿತರೆ ವೆಚ್ಚ ರೂ. 10,080/– |
| (10) ಒಟ್ಟು ವೆಚ್ಚ ರೂ. 6020/– | (10) ಒಟ್ಟು ವೆಚ್ಚ ರೂ. 26,740/– |
| (11) ಪ್ರತಿ ಎಕರೆಗೆ –ಒಟ್ಟು ಖರ್ಚು ರೂ. 13,378/– | (11) ಪ್ರತಿ ಎಕರೆಗೆ – ಒಟ್ಟು ಖರ್ಚು ರೂ. 28,147/– |
| (12) ಬೆಳೆ– 6150 ಕಿಲೋ/18 ಗುಂಟೆ | (12) ಬೆಳೆ– 14,400 ಕಿಲೊ/38 ಗುಂಟೆ |
| (13) ಬೆಳೆ ಒಂದು ಎಕರೆಗೆ 13,667 ಕಿಲೊ | (13) ಬೆಳೆ ಒಂದು ಎಕರೆಗೆ 15,158 ಕಿಲೊ |
| (14) ಬೆಳೆಯ ಬೆಲೆ – 1 ಎಕರೆಗೆ– ರೂ.77,446/– | (14) ಬೆಳೆಯ ಬೆಲೆ – 1 ಎಕರೆಗೆ– ರೂ.85,895/– |
| (15) ಲಾಭ– 1 ಎಕರೆಗೆ 64,068/– | (15) ಲಾಭ– 1 ಎಕರೆಗೆ– ರೂ. 57,778/– |

**ಟೊಮೆಟೊದ ಆಹಾರ ವಿಶ್ಲೇಷಣೆ ಕೆಳಗಿನಂತಿದೆ**

| ಪ್ಯಾರಾಮೀಟರ್ | ಪರಿಣಾಮ | ಯೂನಿಟ್ | ಪ್ಯಾರಾಮೀಟರ್ | ಪರಿಣಾಮ | ಯೂನಿಟ್ |
|---|---|---|---|---|---|
| ಫ್ಯಾಟ್ | 0.11 | % | ಫ್ಯಾಟ್ | 0.20 | % |
| ಪ್ರೋಟೀನ್ | 1.13 | % | ಪ್ರೋಟೀನ್ | 0.74 | % |
| ಕಾರ್ಬೋಹೈಡ್ರೇಟ್ | 5.63 | % | ಕಾರ್ಬೋಹೈಡ್ರೇಟ್ | 4.15 | % |
| ಶಕ್ತಿಯ ಬೆಲೆ | 24.47.ಕಿಲೊ | ಕ್ಯಾಲೊರಿ/100ಗ್ರಾಂ | ಶಕ್ತಿಯ ಬೆಲೆ | 19.5.ಕಿಲೊ | ಕ್ಯಾಲೊರಿ/100 ಗ್ರಾಂ |
| ವಿಟಮಿನ್ ಸಿ | 14.90 | .ಮಿ.ಗ್ರಾಂ/100.ಗ್ರಾಂ | ವಿಟಮಿನ್ ಸಿ | 6.05 | ಮಿ.ಗ್ರಾಂ/100 .ಗ್ರಾಂ |

ಮೇಲಿನ ವಿಶ್ಲೇಷಣೆಯಿಂದ ಯೌಗಿಕ ಹಾಗೂ ನೈಸರ್ಗಿಕ ಕೃಷಿಯಲ್ಲಿ ನಡೆಸಿದ ಪ್ರಯೋಗದಿಂದ ಜೈವಿಕ ಅಥವಾ ರಾಸಾಯನಿಕ ಗೊಬ್ಬರದ ಹಾಗೂ ಕೀಟನಾಶಕ/ರೋಗನಾಶಕಗಳನ್ನು ಬಳಸದೇ ಇರುವುದರಿಂದ 14,769/– ರೂಗಳು ಪ್ರತಿ ಎಕರೆಗೆ ಖರ್ಚು ಉಳಿತಾಯವಾಗಿದೆ. ಹಾಗೂ ಈ ಯೌಗಿಕ ಕೃಷಿ ಪ್ರಯೋಗದಲ್ಲಿ ರಾಸಾಯನಿಕ ಕೃಷಿಯ ಪ್ರಯೋಗದಿಂದ ಬೆಳೆ ಕಡಿಮೆ ಕಂಡರೂ ಪ್ರತಿ ಎಕರೆಗೆ ಖರ್ಚಿನ ಅರ್ಧ ವೆಚ್ಚದಲ್ಲಿ ಉಳಿತಾಯ ಮಾಡಿರುವುದರಿಂದ ಪ್ರತಿ ಎಕರೆಗೆ ಲಾಭ ರೂ. 6290/– ಹೆಚ್ಚಾಗಿದೆ ಹಾಗೂ ಬೆಳೆಯ ಗುಣಮಟ್ಟ ರಾಸಾಯನಿಕ ಕೃಷಿಯಿಂದ ಬಂದ ಟೊಮಟೊಗಿಂತಲೂ ಉತ್ತಮವಾಗಿದೆ. ಆದುದರಿಂದ ಯೌಗಿಕ ಕೃಷಿಯು ಕಡಿಮೆ ಖರ್ಚಿನಲ್ಲಿ ಹೆಚ್ಚು ಲಾಭವನ್ನು ಕೊಡುತ್ತದೆ. ಆದುದರಿಂದ ಅಂತಹ ಕೃಷಿಗೆ ಸಣ್ಣ ಹಾಗೂ ಮಧ್ಯಮ ವರ್ಗದ ರೈತರುಗಳು ಸಾಲವನ್ನು ಪಡೆಯಬೇಕಾಗುವುದಿಲ್ಲ. ಎಲ್ಲದಕ್ಕಿಂತ ದೊಡ್ಡ ಲಾಭ ಅಂದರೆ ಯೌಗಿಕ ಕೃಷಿಯಿಂದ ಪ್ರಾಪ್ತಿಯಾಗುವ ಹಣ್ಣು ಅಥವಾ ತರಕಾರಿಗಳು ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಕಾಪಾಡುತ್ತದೆ.

# ಶಾಶ್ವತ ಯೌಗಿಕ ಬೇಸಾಯ ಮಾಡಿದ ರೈತರುಗಳ ಅನುಭವ



**ಬ್ರಹ್ಮಾಕುಮಾರ ತುಳಸಿ ಅಣ್ಣನವರು, (43 ವರ್ಷ)**
**ಬಾರ್ಶಿ (ಮಹಾರಾಷ್ಟ್ರ), ಫೋನ: 09405237774**

ನಾನು ಸನ್ 1983 ರಿಂದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬಾರ್ಶಿ(ಮಹಾರಾಷ್ಟ್ರ) ಸೇವಾ ಕೇಂದ್ರದ ವಿದ್ಯಾರ್ಥಿಯಾಗಿದ್ದೇನೆ. ವ್ಯವಸಾಯ ನಮ್ಮ ಪೂರ್ವಜರ ವೃತ್ತಿ. ತಂದೆಗೆ ವ್ಯವಸಾಯದಲ್ಲಿ ಸಹಕರಿಸಬೇಕಾದ್ದರಿಂದ ನನಗೆ 12ನೇ ತರಗತಿಯ ನಂತರ ಶಿಕ್ಷಣವನ್ನು ಮುಂದುವರೆಸಲು ಆಗಲಿಲ್ಲ. ತದನಂತರ ನಾನು ವ್ಯವಸಾಯವನ್ನು ಮಾಡುತ್ತಾ ನಾಸಿಕ್‌ನಲ್ಲಿರುವ ಯಶವಂತರಾವ್ ಚೌವ್ಹಾಣ್ ಮುಕ್ತ ವಿಶ್ವ ವಿದ್ಯಾಲಯದಿಂದ ವ್ಯವಸಾಯದಲ್ಲಿ ಪದವೀಧರನಾದೆನು. ಕೃಷಿ ಮಾಡಲು ನನಗೆ ಮೊದಲಿನಿಂದಲೂ ಆಸಕ್ತಿ ಇತ್ತು ಮತ್ತು ಕೃಷಿಗೆ ಸಂಬಂಧಿಸಿದ ಸಾಹಿತ್ಯಗಳ ಅಭ್ಯಾಸ ಮಾಡಿ ವಿವಿಧ ರೀತಿಯಲ್ಲಿ ಪ್ರಯೋಗಗಳನ್ನು ಮಾಡುತ್ತಿದ್ದೆ. ಯೋಗದ ಪ್ರಯೋಗ ಮತ್ತು ಬೆಳೆಗಳ ಮೇಲೆ ಟೇಪ್ ಮುಖಾಂತರ ಈಶ್ವರನ ಹಾಡುಗಳನ್ನು ನುಡಿಸುವುದರ ಪ್ರಯೋಗವನ್ನು ಮಾಡಿದೆ. ಜೊತೆಗೆ ರಾಸಾಯನಿಕ ಗೊಬ್ಬರ ಮತ್ತು ಔಷಧಿಗಳನ್ನು ಬಳಸುತ್ತಿದ್ದೆ. ಇದರಿಂದ ಸಾಕಷ್ಟು ಉತ್ತಮವಾದ ಬೆಳೆ ದೊರೆಯುತ್ತಿತ್ತು. 1993 ರಲ್ಲಿ ನನಗೊಂದು ಓದಲು ಪುಸ್ತಕವು ಸಿಕ್ಕಿತು, ಅದರಲ್ಲಿ ರಾಸಾಯನಿಕ ಗೊಬ್ಬರದ ದುಷ್ಪರಿಣಾಮಗಳನ್ನು ಓದಿ ಪರಮಾತ್ಮ 'ಶಿವನು ಆಶೀರ್ವಾದವನ್ನು ಕೊಡಿ ಮತ್ತು ಆಶೀರ್ವಾದವನ್ನು ಪಡೆಯಿರಿ' ಎಂದು ಹೇಳುತ್ತಿದ್ದಾರೆ. ಆದರೆ ನಾನು ಜಗತ್ತಿಗೆ ರಾಸಾಯನಿಕ ಗೊಬ್ಬರದಿಂದ ಬೆಳೆದ ವಿಷದ ಆಹಾರವನ್ನು ತಿನ್ನಿಸಿ ಎಲ್ಲರಿಂದಲೂ ಶಾಪವನ್ನು ಪಡೆಯುತ್ತಿದ್ದೇನೆಂದು ನಾನು ಇಡೀ ರಾತ್ರಿ ಕಣ್ಣೀರನ್ನು ಸುರಿಸಿದೆ. ತದನಂತರ ಪರಮಾತ್ಮ ಶಿವನ ಪ್ರೇರಣೆಗನುಸಾರವಾಗಿ ಜೈವಿಕ ಕೃಷಿ ಮಾಡಲು ನಿರ್ಧರಿಸಿದೆ ಮತ್ತು ಈ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದೆ. ವಿಚಾರ ಗೋಷ್ಠಿಗಳಲ್ಲಿ ಭಾಗವಹಿಸಿದೆ. ಜೈವಿಕ ಹಾಗೂ ಸೈಂದ್ರಿಯ ಕೃಷಿಯನ್ನು ಕೈಗೊಂಡಿದ್ದ ರೈತ ಸಹೋದರರುಗಳ ಅನುಭವವನ್ನು ಕೇಳಿದೆ. ಜೈವಿಕ ಹಾಗೂ ಸೈಂದ್ರಿಯ ಕೃಷಿಯ ಬಗ್ಗೆ ಕೆಲವೊಮ್ಮೆ ಉತ್ತಮವಾದ ಅನುಭವವವು ದೊರೆಯಿತು. ಮತ್ತೆ ಕೆಲವೊಮ್ಮೆ ಕೆಟ್ಟ ವಿಚಾರಗಳು ಬಂದವು. ಆದರೂ ಕೂಡ ಜೈವಿಕ ಹಾಗೂ ಸೈಂದ್ರಿಯ ಕೃಷಿ ಮಾಡುವುದನ್ನು ಬಿಡಲಿಲ್ಲ.

2003 ರಂದು ರಾಷ್ಟ್ರೀಯ ಮಟ್ಟದ ಪ್ರದರ್ಶನದಲ್ಲಿ ದಾಳಿಂಬೆಯ ಎರಡು ಜಾತಿಗಳಿಗೂ ಮೊದಲ ಮತ್ತು ಮೂರನೇ ಸ್ಥಾನವು ದೊರೆಯಿತು. ನಮ್ಮ ಬೊರೆಹಣ್ಣು, ಬದನೆ, ಜೋಳ, ಹಾಗಲಕಾಯಿ, ಟೊಮಟೊ, ತೊಗರಿ, ಮುಳ್ಳು ಸೌತೆಕಾಯಿ, ಕಲ್ಲಂಗಡಿ ಮತ್ತು ಸೌತೆ ಜಾತಿಯ ದೊಡ್ಡ ಕಾಯಿ ಎಲ್ಲಾ ಬೆಳೆಗಳಲ್ಲೂ ಮೊದಲಿನ ಸ್ಥಾನವನ್ನು ಪಡೆದುಕೊಂಡೆನು. ಇದರ ಫಲವಾಗಿ ಮಹಾರಾಷ್ಟ್ರ ಸರ್ಕಾರದ ಕೃಷಿ ವಿಭಾಗವು ನಮ್ಮ ತಂದೆಗೆ 'ಉದ್ಯಾನವನ ಪಂಡಿತ' ಪುರಸ್ಕಾರವನ್ನು ನೀಡಿ ಗೌರವಿಸಿತು. ಆದರೆ ನನಗೆ ಪರಮಾತ್ಮನು ಅವತರಿಸಿರುವ ಭೂಮಿಯಾದ ಅಬುಪರ್ವತದಲ್ಲಿ ಹೋಗಿ ಬೇಸಾಯ ಮಾಡಬೇಕೆಂಬ ಆಸೆಯಿತ್ತು. ಅಲ್ಲಿ ಅಷ್ಟು ಶುದ್ಧ, ಪವಿತ್ರ ತಪಸ್ವೀ ಅತ್ಮಗಳು ಇರುತ್ತಾರೆ. ಅವರು ರಾಸಾಯನಿಕ ಆಹಾರವನ್ನು ತಿನ್ನುತ್ತಿದ್ದಾರೆ. ಅವರಿಗೆ ಸಾತ್ವಿಕ, ಶುದ್ಧ ಆಹಾರವನ್ನು ಹೇಗೆ ಒದಗಿಸಬೇಕೆಂಬ ಸಂಕಲ್ಪವು ಬಂದಿತು. ಸುಮಾರು ಮೂರು ವರ್ಷಗಳಿಂದ ಅಂದರೆ ಸನ್ 2005 ರಿಂದ ನಾನು ಅಬು ಪರ್ವತದಲ್ಲಿ ಇದ್ದುಕೊಂಡು ವ್ಯವಸಾಯ ಮಾಡುತ್ತಿದ್ದೇನೆ.

ಸನ್ 2007ರಲ್ಲಿ ನಾವು ತಪೋವನದಲ್ಲಿ ಕಲ್ಲಂಗಡಿ ಹಣ್ಣನ್ನು ಬೆಳೆಸಿದ್ದೆವು. ಇದರ ಫಲಿತಾಂಶ ಮತ್ತು ಅನುಭವವು ಆಶ್ಚರ್ಯಕರವಾಗಿತ್ತು. ಅದಕ್ಕೆ ಯಾವುದೇ ಬಗೆಯ ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳನ್ನು ಬಳಸಿರಲಿಲ್ಲ. ಜಮೀನಿನಲ್ಲಿ ಜೀವಾಣುಗಳನ್ನು ವೃದ್ಧಿಗೊಳಿಸಲು ಸಗಣಿ ಗೊಬ್ಬರ, ಬೇವಿನ ಹಿಂಡಿ, ಅಮೃತ ಜಲ, ಜೀವಾಮೃತ, ಹಾಲು, ಬೆಲ್ಲ, ಗೋಮೂತ್ರ, ಸಪ್ತ ಧಾನ್ಯದ ದ್ರಾವಣಗಳನ್ನು ಬಳಸಿಕೊಳ್ಳಲಾಯಿತು. ರೋಗ ಕೀಟಗಳನ್ನು ನಿಯಂತ್ರಿಸಲು ಗೋಮೂತ್ರ, ಬೇವಿನ ಎಣ್ಣೆ, ಮಜ್ಜಿಗೆ, ದಶಪರ್ಣೀ ದ್ರಾವಣ, ಬಜೆ, ನಿಂಬೆರಸ, ಹುಣಸೇ ರಸ


ಮುಂತಾದವುಗಳನ್ನು ಪ್ರಯೋಗಿಸಿದೆವು. ಕಲ್ಲಂಗಡಿ ಬೆಳೆಗೆ ಬರುವ ವೈರಸ್‌ಗಳನ್ನು ನಿಯಂತ್ರಿಸಲು ನಾವು ಪ್ರತಿ ದಿನವೂ ಬೆಳಿಗ್ಗೆ ಮತ್ತು ಸಂಜೆ 20 ನಿಮಿಷಗಳ ಕಾಲ (ದೇವಾಲಯ) ಹಿತ್ತಾಳೆ ಗಂಟೆಯನ್ನು ಬಾರಿಸುತ್ತಿದ್ದೆವು. ಗಂಟೆಯ ಶಬ್ದದಿಂದ ವೈರಸ್‌ಗಳನ್ನು ನಿಯಂತ್ರಿಸಲಾಗುವುದು. ಜೊತೆಗೆ ಈಶ್ವರೀಯ ವಿಶ್ವ ವಿದ್ಯಾಲಯದ ಹಾಡು (ರೆಕಾರ್ಡ್) ಗಳನ್ನು ಕೇಳಿಸುತ್ತಿದ್ದೆವು. ಹಣ್ಣಿನ ಗಾತ್ರವನ್ನು ದಪ್ಪ ಮಾಡುವುದಕ್ಕಾಗಿ ಬೆಳಿಗ್ಗೆ ಮತ್ತು ಸಂಜೆ ನಾವು ಅದಕ್ಕೆ ಎಳ್ಳು , ತ್ರಿಫಲದ, ವಾಯುವಿಡಂಗದ  ದೂಪವನ್ನೀಯುತ್ತಿದ್ದೆವು. ಒಳ್ಳೆಯ ಸುಗಂಧವು ನಮ್ಮ ಮನಸ್ಸನ್ನು ಪ್ರಸನ್ನಗೊಳಿಸುತ್ತದೆ. ಹಾಗೆಯೇ ಬೆಳೆಗಳು ಉಸಿರಾಡುತ್ತವೆ. ಅವುಗಳಿಗೂ ಸಂತೋಷವಾಗುತ್ತದೆ. ಇದರಿಂದ ಬೆಳೆಯನ್ನು ವೃದ್ಧಿಗೊಳಿಸಲು ಸಹಾಯವಾಗುತ್ತದೆ. ಹಾಲು, ಎಳನೀರನ್ನು ಸಿಂಪಡಿಸಲಾಯಿತು ಇದರಿಂದ ವೈರಸ್‌ಗಳನ್ನು ತಡೆಹಿಡಿಯಬಹುದು. ಬೆಳೆಯ ಮಧ್ಯದಲ್ಲಿ ಪರಮಾತ್ಮ ಶಿವನ ಬಾವುಟವನ್ನು ನೆಡಲಾಯಿತು. ಅದರಲ್ಲಿ ಹಳದಿ ಹಾಗೂ ಕೆಂಪು ಬಣ್ಣವಿರುತ್ತದೆ. ಕೆಂಪು ಬಣ್ಣವು ಬೆಳೆಯನ್ನು ವೃದ್ಧಿಗೊಳಿಸಲು ಸಹಾಯ ಮಾಡುತ್ತದೆ. ಮತ್ತು ಹಳದಿ ಬಣ್ಣವನ್ನು ನೋಡಿ ಮೊಟ್ಟೆ ಇಡುವ ಪತಂಗಗಳು ಅದರ ಮೇಲೆ ಮೊಟ್ಟೆಗಳನ್ನಿಡುತ್ತವೆ. ಆದರೆ ಆ ಮೊಟ್ಟೆಗಳಿಗೆ ಬಾವುಟದಲ್ಲಿ ಯಾವುದೇ ಪೋಷಣೆಯು ಸಿಗದ ಕಾರಣ ಸತ್ತುಹೋಗುತ್ತವೆ. ಇದರಿಂದ ಬೆಳೆಯ ರಕ್ಷಣೆಯಾಗುತ್ತದೆ. ಈ ಎಲ್ಲಾ ಪ್ರಯೋಗಗಳಿಂದ ಬೆಳೆಯು ತುಂಬಾ ಚೆನ್ನಾಗಿತ್ತು. ಜೊತೆಗೆ ಬದನೆ, ಎಲೆಕೋಸು, ಹೂಕೋಸು, ಗೆಡ್ಡೆಕೋಸು, ಬಟಾಣಿ, ಟೊಮಟೊ, ಪರಂಗಿ, ಸೋರೆಕಾಯಿಯ ಮೇಲೂ ಪ್ರಯೋಗ ಮಾಡಲಾಯಿತು.

ನಾನು ಪ್ರಕೃತಿಯ ಮಾಲಿಕನಾಗಿದ್ದೇನೆ. ಸರ್ವಶ್ರೇಷ್ಠ (ಹೈಯೆಸ್ಟ್) ಪರಮ ಪವಿತ್ರ(ಹೋಲಿಯೆಸ್ಟ್) ಶ್ರೀಮಂತ (ರಿಚೆಸ್ಟ್) ಆತ್ಮನಾಗಿದ್ದೇನೆ. ನಮ್ಮ ಬೆಳೆಯ ಮೇಲೆ ಯಾವ ವೈರಸ್ಸು ಆಕ್ರಮಣ ಮಾಡುವುದಿಲ್ಲ. ಈ ಯೋಗಾಭ್ಯಾಸವನ್ನು ಬೆಳೆಯ ಮುಂದೆ ಮತ್ತು ಜಮೀನಿನ ಮಧ್ಯದಲ್ಲಿ ಕುಳಿತು ಮಾಡುತ್ತಿದ್ದೆನು. ಎಷ್ಟೆಷ್ಟು ಶಕ್ತಿಶಾಲಿ ಸಂಕಲ್ಪಗಳ ಪ್ರಕಂಪನಗಳನ್ನು ನಾವು ಬೆಳೆಗೆ ಕೊಡುತ್ತೇವೊ ಬೆಳೆಯು ಅಷ್ಟೇ ನಿರೋಗಿಯಾಗುತ್ತದೆ. ಇದು ನಮ್ಮ ಅನುಭವವಾಗಿದೆ. ಸ್ವಯಂ ಭಗವಂತನು ನಮ್ಮನ್ನು ನೋಡುತ್ತಿದ್ದಾನೆ, ಅವನು ನಮ್ಮ ಜೊತೆಯಲ್ಲಿದ್ದಾನೆ ಎಂಬ ಸಂಕಲ್ಪದಿಂದ ಖಂಡಿತವಾಗಿಯೂ ಸಫಲತೆಯು ದೊರೆಯುತ್ತದೆ.

ಕೆಲವೊಮ್ಮೆ ನಾನು ಪರಮಪಿತ ಶಿವ ಪರಮಾತ್ಮನನ್ನು ಜಮೀನಿಗೆ ಆಹ್ವಾನಿಸುತ್ತೇನೆ. ಸತ್ಯವಾಗಿಯೂ ಪರಮಾತ್ಮನು ಬಂದು ಪೂರ್ಣ ಬೆಳೆಯನ್ನು ನೋಡಿ ಮಗು ಇಲ್ಲಿ ಹೀಗೆ ಮಾಡು, ಹಾಗೆ ಮಾಡು ಎಂದು ಸೂಚಿಸುತ್ತಾನೆ. ಈ ರೀತಿ ಅವನ ಸೂಚನೆಗಳು ನನಗೆ ಅನುಭವವಾಗುತ್ತವೆ. ನಮ್ಮ ಸಂಬಂಧವು ಪರಮಾತ್ಮನ ಜೊತೆ ಇರುವುದರಿಂದ ಋತುಗಳು ಹೇಗೆ ಪರಿವರ್ತನೆಯಾಗುತ್ತವೆ ಅಥವಾ ಯಾವ ಬಗೆಯ ವೈರಸ್‌ಗಳು ಬರಲಿವೆ ಎನ್ನುವ ಸೂಚನೆ ಮೊದಲೇ ಗೊತ್ತಾಗಿಬಿಡುತ್ತಿತ್ತು ಮತ್ತು ನಾವು ಅದರಿಂದ ಸುರಕ್ಷಿತವಾಗಿರಲು ಸಾಧ್ಯವಾಗುತ್ತಿತ್ತು. ಪ್ರತಿಯೊಂದು ಬೆಳೆಯ ಬಗ್ಗೆ ಅಮೃತ ವೇಳೆ (ಬೆಳಗ್ಗಿನ 4 ರಿಂದ 5) ಯಲ್ಲಿ ಯೋಗಾಭ್ಯಾಸ ಮಾಡುತ್ತೇವೆ. ಹೀಗೆ ಮಾಡುವುದರಿಂದ ನಮಗೆ ನಿರೀಕ್ಷೆಗಿಂತ ಹೆಚ್ಚು ಸಫಲತೆಯನ್ನು ಪಡೆದುಕೊಳ್ಳುತ್ತೇವೆ. ಮತ್ತು ನಮಗೆ ಬೆಳೆಯ ಮೇಲೆ ಶುದ್ಧ, ಪವಿತ್ರ ಸಂಕಲ್ಪಗಳ ವಿಚಾರಗಳ ಸಕಾರಾತ್ಮಕ ಪ್ರಭಾವವು ಬೀಳುತ್ತದೆ. ಇದರಿಂದ ಬೆಳೆಯ ಉತ್ಪಾದನೆಯು ಅಧಿಕವಾಗುತ್ತದೆ. ಎಂಬ ವಿಶ್ವಾಸವು ಗಟ್ಟಿಯಾಗುತ್ತಾ ಹೋಯಿತು.

ಆದ್ದರಿಂದ ಪ್ರಿಯ ರೈತ ಸಹೋದರ ಸಹೋದರಿಯರೇ, ತಾವು ಕೂಡ ಈ ರಾಜಯೋಗದ ಅಭ್ಯಾಸ ಮಾಡಿ ಮನಸ್ಸಿನಲ್ಲಿ ಶುದ್ಧ, ಸಾತ್ವಿಕ ವಿಚಾರಗಳನ್ನು ಆಚರಣೆಯಲ್ಲಿ ತಂದುಕೊಂಡು ಶಾಶ್ವತ ಯೌಗಿಕ ಕೃಷಿ ಮಾಡಿರಿ. ಒಳ್ಳೆಯ ಬೆಳೆಯನ್ನು ಪಡೆಯಿರಿ. ಯಾವ ದೇಹದಿಂದ ನಾವು ಭೂಮಿಯ ಮೇಲೆ ಸ್ವರ್ಗವನ್ನು ತರುತ್ತಿದ್ದೇವೆಯೊ ಅದನ್ನು ನಿರೋಗಿ ಮಾಡಿ ಸುಖೀ ಜೀವನ ನಡೆಸೋಣ. ಓಂ ಶಾಂತಿ.

**ಬ್ರಹ್ಮಾಕುಮಾರ ಬಾಳಾಸಾಹೇಬ ಶ್ರೀಪಾಲರೂಗೆ, (37 ವರ್ಷ)**
**ಈಚಲಕರಂಜಿ, ಜಿ. ಕೊಲ್ಹಾಪುರ (ಮಹಾರಾಷ್ಟ್ರ).**



ನಾನು ಜೈನ ಧರ್ಮದಲ್ಲಿ ಜನ್ಮ ಪಡೆದುಕೊಂಡವನಾದ್ದರಿಂದ ನನಗೆ ಮಹಾವೀರನೇ ಭಗವಂತನಾಗಿದ್ದ. ನಾನು ಸನ್ 2001 ರಲ್ಲಿ ಈ ಸಂಸ್ಥೆಗೆ ಆಗಮಿಸಿದ ನಂತರ ಭಗವಂತನ ನಿಜವಾದ ಪರಿಚಯ ಮತ್ತು ಅವನಿಂದ ನಮಗೆ ಸಿಗುವ ಪ್ರಾಪ್ತಿಗಳ ಅರಿವಾಯಿತು. ನನ್ನ ತಾಯಿ ಹಾಗೂ ಧರ್ಮಪತ್ನಿ ವಿದ್ಯಾಲಯದ ನಿಯಮಿತ ವಿದ್ಯಾರ್ಥಿಗಳಾಗಿದ್ದರು. ನಾನು ಯೋಗದ ಮುಖಾಂತರ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಿರುತ್ತೇನೆ. ನಾನು ನನ್ನ ದೇಹದ ಮೇಲೂ ಯೋಗದ ಪ್ರಯೋಗವನ್ನು ಮಾಡಿದೆ. ನನಗೆ ಸೊಂಟದ ನೋವಿನ ತುಂಬಾ ತೊಂದರೆ ಇತ್ತು. ಯೋಗದಿಂದ ನನಗೆ ಪೂರ್ಣ ಲಾಭವಾಗಿದೆ. ಈಗ ನನಗೆ ಸೊಂಟದ ಯಾವ ನೋವಿನ ತೊಂದರೆಯೂ ಇಲ್ಲ. ನಮ್ಮ ಲೌಕಿಕ ತಾಯಿಯವರು ಮಂಡಿಯ ನೋವಿನಿಂದ ನರಳುತ್ತಿದ್ದರು ಮತ್ತು ನನ್ನ ಧರ್ಮಪತ್ನಿಯವರೂ ಕೂಡ ಒತ್ತಡದ ಜೀವನ ಸಾಗಿಸುತ್ತಿದ್ದರು. ಇವೆಲ್ಲವುಗಳ ಮೇಲೆ ನಾವು ನೂರರಷ್ಟು ವಿಜಯಿಗಳಾಗಿದ್ದೇವೆ. ನನಗೆ 9 ವರ್ಷದ ಮಗನಿದ್ದಾನೆ. ಅವನಿಗೆ ಹುಟ್ಟಿನಿಂದ ಅನೇಕ ಬಗೆಯ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಲಾಗಿದೆ. ಅವನೂ ಕೂಡ ಔಷಧಿಗಳ ಮೇಲೆ ಜೀವನವನ್ನು ನಡೆಸುತ್ತಿದ್ದನು. ಅವನು ಎರಡು ವರ್ಷದವನಾಗಿದ್ದಾಗಲೇ ಭಗವಂತನ ಮನೆ (ಮಧುವನ–ಅಬುಪರ್ವತ) ಗೆ ಕರೆದುಕೊಂಡು ಹೋಗಿದ್ದೆವು. ಎಂದು ಪರಮಾತ್ಮ ಶಿವನ ಮನೆಗೆ ಬಂದೆವೋ ಅಂದಿನಿಂದ ಅವನೂ ಕೂಡ ಎಲ್ಲಾ ಔಷಧಿಗಳಿಂದ ಮುಕ್ತನಾಗಿದ್ದಾನೆ. ಮತ್ತು ಸಂಪೂರ್ಣವಾಗಿ ಅರೋಗ್ಯವಂತನಾಗಿದ್ದಾನೆ. ವ್ಯವಸಾಯ ನಮ್ಮ ಪೂರ್ವಿಕರ ಉದ್ಯೋಗ. ನಾನು ಕೂಡ ವ್ಯವಸಾಯ ಮಾಡುತ್ತೇನೆ. ಎರಡು ವರ್ಷಗಳ ಹಿಂದೆ ಈಶ್ವರೀಯ ವಿಶ್ವವಿದ್ಯಾಲಯ ಹಾಗೂ ಗ್ರಾಮೀಣ ವಿಕಾಸ ವಿಭಾಗದ ಆಂದೋಲನದ ಒಂದು ಕಾರ್ಯಕ್ರಮದಲ್ಲಿ ರಾಜಯೋಗ ಪ್ರಯೋಗದ ಮುಖಾಂತರ ಬೇಸಾಯ ಮಾಡುವುದರ ಬಗ್ಗೆ ವಿಚಾರ ವಿಮರ್ಶೆ ನಡೆದಿತ್ತು. ನಾನು ಕೂಡ ಕಬ್ಬಿನ ಬೆಳೆಯ ಮೇಲೆ ಯೋಗದ ಪ್ರಯೋಗವನ್ನು ಏಕೆ ಮಾಡಬಾರದು? ಎಂದೆನಿಸಿತು. ನಾನು ನಿಶ್ಚಯ ಮಾಡಿಕೊಂಡು ಯೋಗದ ಪ್ರಯೋಗವನ್ನು ಆರಂಭಿಸಿದೆ. ಮೊದಲನೇ ವರ್ಷ ಕಬ್ಬಿನ ಬೆಳೆಗೆ ರಾಸಾಯನಿಕ ಗೊಬ್ಬರ ಹಾಗೂ ಕೆಲವು ಔಷಧಿಗಳನ್ನು ಬಳಸಿ ಬೆಳೆಯನ್ನು ತೆಗೆದುಕೊಂಡೆನು. ಆದರೆ ಅದೇ ಜಮೀನಿಗೆ ಎರಡನೇ ಬಾರಿ ಕಬ್ಬನ್ನು ನಾಟಿ ಮಾಡಿದೆನು. ಆಗ ನಾನು ಜೈವಿಕ ಗೊಬ್ಬರವನ್ನೇ ಬಳಸಿದ್ದೆನು ಹಾಗೂ ನಮ್ಮ ಶಿಕ್ಷಿಕಿ ಸಹೋದರಿಯವರ ಮಾರ್ಗದರ್ಶನಕ್ಕನುಸಾರವಾಗಿ ಯೋಗದ ಪ್ರಯೋಗವನ್ನು ಮಾಡಲು ಆರಂಭಿಸಿದೆನು. ಸನ್ 2006 ರಲ್ಲಿ ಕಬ್ಬಿನ ಬೆಳೆಯನ್ನು ನೆಡಲಾಯಿತು. ಜೈವಿಕ ಬೆಳೆಯಲ್ಲಿ ಜೀವಾಮೃತ ಹಾಗೂ ಸಗಣಿ ಗೊಬ್ಬರವನ್ನು ಬಳಸಿದೆನು. ಮುಕ್ಕಾಲು ಎಕರೆ ಜಮೀನಿಗೆ ನಾಲ್ಕು ಟನ್ ಗೊಬ್ಬರ ಹಾಗೂ ಜೀವಾಮೃತವನ್ನು ಆರು ಸಾರಿ ಬಳಸಿದೆನು. ಎಜಟೋಬೈಕ್ಟರ್ ಹಾಗೂ ಫಾಸ್ಫರಸ್‌ನ ಮಿಶ್ರಣದ ಜೀವಾಣುವನ್ನು ಬಳಸಿಕೊಂಡೆನು. ಮೊದಲನೇ ತಿಂಗಳಲ್ಲಿಯೇ ಬೆಳೆಯಲ್ಲಿ ವ್ಯತ್ಯಾಸವು ಕಂಡು ಬಂದಿತು. ಮೊದಲು ಬೆಳೆಸಿದ್ದ ಕಬ್ಬಿಗಿಂತಲೂ ಇಂದಿನ ಕಬ್ಬಿನಲ್ಲಿ ತುಂಬಾ ಪ್ರಗತಿಯು ಗೋಚರಿಸಿತು. ಪ್ರತಿದಿನ ಅಮೃತವೇಳೆ ಕಬ್ಬಿನ ಬೆಳೆಯಲ್ಲಿ ಕುಳಿತು ಯೋಗ ಮಾಡುತ್ತಿದ್ದೆ. ಪರಮಾತ್ಮನ ಶಕ್ತಿಗಳು ನನ್ನ ಮುಖಾಂತರ ಭೂಮಿಯ ಮೇಲೆ ಇಳಿಯುತ್ತಿವೆ ಮತ್ತು ಅದರ ಪ್ರಭಾವವು ಬೆಳೆಯ ಮೇಲೆ ಬೀಳುತ್ತಿದೆ ಎಂದು ಸಂಕಲ್ಪವನ್ನು ನೀಡುತ್ತಿದ್ದೆ. ಯಾವ ರಾಸಾಯನಿಕ ಗೊಬ್ಬರಗಳಿಂದ ಜಮೀನಿನ ಶಕ್ತಿಯು ಕುಸಿದುಹೋಗಿತ್ತೊ ಅದು ಮತ್ತೆ ಬರಲಾರಂಭಿಸಿದೆ ಮತ್ತು ಕಬ್ಬಿನ ಬೆಳೆ ನಿರೋಗಿಯಾಗಿ ಚೆನ್ನಾಗಿ ಬೆಳೆಯುತ್ತಿದೆ ಈ ದೃಢವಾದ ಸಂಕಲ್ಪಗಳ ಪ್ರಕಂಪನದ ಮುಖಾಂತರ ಕಬ್ಬಿನ ಬೆಳೆಯು ಇನ್ನೂ ಚೆನ್ನಾಗಿ ಬೆಳೆಯಲಾರಂಬಿಸಿತು ನೀವು ಯಾವ ಗೊಬ್ಬರವನ್ನು ಬಳಸಿದ್ದೀರಿ? ಏಕೆಂದರೆ ಇದು ಮೊದಲಿನ ಕಬ್ಬಿನ ಬೆಳೆಗಿಂತ ಅನೇಕ ಪಟ್ಟು ಹೆಚ್ಚಿನ ಕಬ್ಬನ್ನು ಬೆಳೆಯಲಾಗಿದೆ ಎಂದು ನೋಡಿದವರೆಲ್ಲರೂ ಕೇಳಲಾರಂಬಿಸಿದರು. ನಾನು ನನ್ನ ಯೋಗದ ಪ್ರಯೋಗವನ್ನು ಮುಂದುವರಿಸಿದೆನು. ಮತ್ತೆ ಏಪ್ರಿಲ್ ತಿಂಗಳಲ್ಲಿ ಬೆಳೆಯ ಬಣ್ಣವು ಹಳದಿಗೆ ತಿರುಗಲಾರಂಭಿಸಿತು. ಈಗ ಏನು ಮಾಡುವುದೆಂದು ಮನೆಯವರೆಲ್ಲರೂ ಗಾಬರಿಗೊಂಡರು. ಮತ್ತೆ ಅವರೆಲ್ಲರೂ ನನಗೆ ಈ ಬೆಳೆಗೆ ಯೂರಿಯಾವನ್ನು ಬಳಸು ಇಲ್ಲವೆಂದರೆ ಇಷ್ಟು ಉತ್ತಮವಾದ ಬೆಳೆಯು ಕೈಗೆ

ಸಿಗದಂತಾಗಿಬಿಡುತ್ತದೆ ಎಂದು ಸಲಹೆ ನೀಡಿದರು. ನಾನು ಕೂಡ ಗೊಂದಲಕ್ಕೊಳಗಾದೆನು. ಮತ್ತೆ ಯೋಚಿಸಿದೆ. ನೋಡೋಣವೆಂದು ನಮ್ಮ ಸೇವಾಕೇಂದ್ರಕ್ಕೆ ಹೋಗಿ ಸಹೋದರಿಯವರ ಜೊತೆ ಮಾತನಾಡಿದೆನು. ಶಿಕ್ಷಕಿ ಸಹೋದರಿಯವರೇ ಬಂದು ಬೆಳೆಯನ್ನು ನೋಡಿದರು. ಮತ್ತು ನಾವೆಲ್ಲರೂ ಇಲ್ಲೇ ಕುಳಿತು ಯೋಗ ಮಾಡೋಣ ಎಂದರು. ಸಹೋದರಿಯವರು ಯೋಗ ಮಾಡಲು ಎಲ್ಲರಿಗೂ ಪವಿತ್ರ ಸಾಗರ ಪರಮಾತ್ಮನಿಂದ ಪವಿತ್ರತೆಯ ಕಿರಣಗಳು ಬೆಳೆಯ ಮೇಲೆ ಹರಿದು ಬರುತ್ತಿವೆ ಮತ್ತೆ ಕಬ್ಬಿನ ಬೆಳೆಯು ಹಸಿರಾಗುತ್ತಿದೆ ಎಂಬ ಸಂಕಲ್ಪವನ್ನು ನೀಡಿದರು. ಈ ಪ್ರಯೋಗದಿಂದ ಕಬ್ಬು ಮತ್ತೆ ಹಸಿರಾಗಿ ಕಾಣಲಾರಂಭಿಸಿತು. ಹಾಗೆ ಮುಂದುವರಿದಂತೆ ಜೂನ್ ತಿಂಗಳು ಬಂತು. ನಾವು ಮತ್ತಷ್ಟು ಜೈವಿಕ ಗೊಬ್ಬರವನ್ನು ಬಳಸಿದೆವು. ಈ ಗೊಬ್ಬರದಲ್ಲಿರುವ ಜೀವಾಣುಗಳು ಯೋಗದ ತರಂಗಗಳನ್ನು ಸ್ವೀಕರಿಸುತ್ತವೆ. ನಾವು ಹೇಗೆ ಶ್ರೇಷ್ಠ ಸಂಕಲ್ಪಗಳನ್ನು ನೀಡುತ್ತೇವೊ ಹಾಗೆ ಜೀವಾಣುಗಳು ಸ್ವೀಕರಿಸಲಾರಂಭಿಸಿದವು. ಜೂನ್ ತಿಂಗಳಲ್ಲಿ ಚೆನ್ನಾಗಿ ಮಳೆ ಬಿದ್ದ ಕಾರಣ ಕಬ್ಬಿನ ಬೆಳೆಯು ತೀವ್ರವಾಗಿ ಬೆಳೆಯಲಾರಂಭಿಸಿತು. ಹಾಗೆಯೇ ಕಾಲ ಕಳೆದಂತೆ ಸೆಪ್ಟಂಬರ್ ತಿಂಗಳು ಬಂತು. ಈ ತಿಂಗಳಲ್ಲಿ ಎಲ್ಲಾ ಕಡೆಯಲ್ಲೂ ಇರುವ ಕಬ್ಬಿನ ಬೆಳೆಗೆ ಲೋಕರಿ ಮಾವಾ (Woly aphid) ಎಂಬ ರೋಗವು ಹರಡಲಾರಂಭಿಸಿತು.. ಆದರೆ ನಾವು ಸಂಕಲ್ಪ ಶಕ್ತಿಯ ಮೂಲಕ ಎಲ್ಲಾ ರೋಗಗಳಿಂದ ಮುಕ್ತರಾದೆವು. ಪವಿತ್ರ ಸಾಗರ ಪರಮಾತ್ಮನಿಂದ ಪವಿತ್ರತೆಯ ಕಿರಣಗಳು ಬರುತ್ತಿವೆ ಮತ್ತು ಕಬ್ಬಿನ ಜಮೀನಿನ ಮೇಲೆಲ್ಲಾ ಹರಿಯುತ್ತಿದೆ ಮತ್ತು ಎಲ್ಲಾ ಮಾವಾ ರೋಗವೂ ಕೂಡ ಸುಟ್ಟು ನಾಶವಾಗುತ್ತಿದೆ. ಈ ಅಭ್ಯಾಸವನ್ನು ಕೇವಲ ಎರಡು ದಿನಗಳ ಕಾಲ ಮಾಡಿದೆವು. ಎರಡು ದಿನಗಳೊಳಗೆ ಎಲ್ಲಾ ರೋಗಗಳು ದೂರವಾದವು. ಬೇರೆ ರೈತರು ವಿಷಮಯ ರಾಸಾಯನಿಕ ದ್ರಾವಣವನ್ನು ಪ್ರಯೋಗಿಸಲಾರಂಭಿಸಿದರು. ಇದರಿಂದ ಕಬ್ಬಿನ ರೋಗವು ಪೂರ್ಣವಾಗಿ ನಾಶವಾಗಲಿಲ್ಲ. ಆದರೆ ಯೋಗದ ಪ್ರಯೋಗದಿಂದ ನೂರರಷ್ಟು ನಾಶವಾಯಿತು. ಹೀಗೆ ಪ್ರಯೋಗ ಮಾಡುತ್ತಾ ಯಾವ ಅನುಭವವು ಬರಲಾರಂಭಿಸಿತೊ ಅದರಿಂದ ಅಂತರಂಗದಲ್ಲಿ ನಮ್ಮ ಸಂಕಲ್ಪಗಳಿಗೆ ಪರಮಾತ್ಮನ ಸಂಕಲ್ಪವು ಸೇರಿದಾಗ ಆ ಸಂಕಲ್ಪವು ಎಷ್ಟು ಶಕ್ತಿಶಾಲಿಯಾಗುತ್ತದೆ ಎಂಬ ಆತ್ಮ ವಿಶ್ವಾಸವು ಬೆಳೆಯಲಾರಂಭಿಸಿತು. ಬೆಳೆಯ ರಕ್ಷಣೆಗಾಗಿ ಗೋಮೂತ್ರ, ಹಾಲು ಹಾಗೂ ಎಳನೀರನ್ನು ಬಳಸಿದೆವು. ಈ ಪ್ರಯೋಗದಿಂದ ಮೊದಲು ರಾಸಾಯನಿಕವಾಗಿ ಬೆಳೆಸಿದ ಕಬ್ಬಿನ ಜಮೀನಿನಲ್ಲಿ ಮುಕ್ಕಾಲು ಎಕರೆಯಲ್ಲಿ 28 ಮೆಟ್ರಿಕ್ ಟನ್ (28000ಕಿ.ಲೋ.) ಕಬ್ಬಿನ ಬೆಳೆಯು ಪ್ರಾಪ್ತಿಯಾಯಿತು. ಹಾಗೂ ಈ ಯೋಗದ ಪ್ರಯೋಗದ ನಂತರ ನನಗೆ ಇದೇ ಜಮೀನಿನಲ್ಲಿ 32 ಮೆಟ್ರಿಕ್ ಟನ್ (32000 ಕಿ.ಲೋ.) ಬೆಳೆಯು ಪ್ರಾಪ್ತಿಯಾಯಿತು. ಹಾಗೂ 2000 ರೂಗಳು ಖರ್ಚಿನಲ್ಲಿ ಉಳಿತಾಯವಾಯಿತು.


ಎರಡನೇ ಸಾರಿ ನಾವು ಬೇರೆ ರೀತಿ ಪ್ರಯೋಗ ಮಾಡಿದೆವು. ಈ ಸಾರಿ ಗೋಧಿಯ ಬೆಳೆಯನ್ನು ಎರಡು ಪ್ಲಾಟುಗಳಲ್ಲಿ ಬೆಳಸಲಾಯಿತು. ಎರಡರಲ್ಲೂ ಒಂದೇ ರೀತಿಯಲ್ಲಿ ಜೈವಿಕ ಗೊಬ್ಬರವನ್ನು ಬಳಸಿದೆವು. ಆದರೆ ಪ್ರಯೋಗವನ್ನು ಒಂದೇ ಪ್ಲಾಟಿನ ಮೇಲೆ ಪ್ರಯೋಗ ನಡೆಸಿದೆವು. ಪ್ರಯೋಗ ಮಾಡಿದ ಗೋಧಿಯನ್ನು ಪರೀಕ್ಷೆಗಾಗಿ ಕಳುಹಿಸಿಕೊಟ್ಟೆವು. ಯೋಗದ ಪ್ರಯೋಗ ಮಾಡಿದ ಗೋಧಿಯಲ್ಲಿ ಪ್ರೋಟೀನ್, ಫ್ಯಾಟ್, ಕಾರ್ಬೋಹೈಡ್ರೇಟ್ ಕಲರಿಕ ಬೆಲೆಯ ಪ್ರಮಾಣವು ಕಡಿಮೆಯಾಗಿತ್ತು. ಹಾಗೂ ಅದರಲ್ಲಿ ಫೈಬರ್‌ನ ಪ್ರಮಾಣವು ಹೆಚ್ಚಾಗಿರುವುದು ಗೋಚರಿಸಿತು. ಧಾನ್ಯದ ಗಾತ್ರವು ದಪ್ಪವಾಗಿರುವುದು ಗೋಚರಿಸಿತು. ಈ ಫೈಬರ್‌ಉಳ್ಳ ಧಾನ್ಯವು ದೇಹಕ್ಕೆ ತುಂಬಾ ಲಾಭದಾಯಕವಾಗಿರುತ್ತದೆ. ಉತ್ಪಾದನೆಯ ಮಟ್ಟವು ಹೆಚ್ಚಾಗಿತ್ತು.

ಇಂತಹ ಪ್ರಯೋಗದಿಂದ ಅನೇಕ ರೀತಿಯ ಲಾಭಗಳು ಗೋಚರಿಸಲಾರಂಭಿಸಿದವು. ಜಮೀನಿನೊಳಗೆ ರೋಗ ಪ್ರತಿಕಾರಕ ಶಕ್ತಿ ಹೆಚ್ಚುವುದರಿಂದ ಅದರ ಶಕ್ತಿಯು ಹೆಚ್ಚಿತು. ರಾಸಾಯನಿಕ ಗೊಬ್ಬರಗಳ ಪ್ರಯೋಗದಿಂದ ಜಮೀನಿನೊಳಗಿರುವ ಜೀವಾಣುಗಳು ಸಾಯುತ್ತವೆ. ಹಾಗೂ ಜೈವಿಕ ಗೊಬ್ಬರದ ಬಳಕೆಯಿಂದ ಜೀವಾಣುಗಳ ಪ್ರಮಾಣವು ಹೆಚ್ಚುತ್ತವೆ. ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕಗಳ ಪ್ರಯೋಗದಿಂದ ಜೀವಾಣುಗಳು ಸಾಯುತ್ತವೆ. ಇದು ಪಾಪ ಕರ್ಮವಾಗಿದೆ. ಇಂತಹ ಧಾನ್ಯವನ್ನು ಸೇವಿಸುವುದರಿಂದ ದೇಹದ ಸ್ಥಿತಿಯು ನಿರೋಗಿಯಾಗುತ್ತದೆ. ಏಕೆಂದರೆ ಇದರಲ್ಲಿ ಪರಮಾತ್ಮನ ಶಕ್ತಿ ಹಾಗೂ ಪವಿತ್ರತೆಯ ತರಂಗಗಳಿರುತ್ತವೆ. ಆದರೆ ಇದು ರಾಸಾಯನಿಕ ಗೊಬ್ಬರ ಹಾಗೂ ಕೀಟನಾಶಕ ದ್ರವ್ಯದಿಂದ ಬೆಳೆದ ಬೆಳೆಗಳಿಂದ ಸಿಗುವುದಿಲ್ಲ.

ಯಾವಾಗ ಯೋಗದ ಪ್ರಯೋಗವನ್ನು ಬೆಳೆಗಳ ಮೇಲೆ ನಡೆಸುತ್ತೇವೆಯೋ ಅದರ ಪ್ರಭಾವವು ಭೂಮಿ, ನೀರು ಹಾಗೂ ಗಾಳಿಯ ಮೇಲೆ ಬೀಳುತ್ತದೆ. ಏಕೆಂದರೆ ಈ ತತ್ವಗಳಲ್ಲೂ ಜೀವಾಣುಗಳಿವೆ. ಅವು ಕೂಡ ಬದುಕುತ್ತವೆ. ನಮ್ಮ ಯೋಗದ ಪ್ರಕಂಪನಗಳು ಅವುಗಳ ಮೇಲೂ ಬೀಳುತ್ತವೆ. ಉದಾಹರಣೆಗೆ ದೇವಾಲಯದ ಶಾಂತಿ ಹಾಗೂ ಸ್ಮಶಾನದ ಶಾಂತಿಗೂ ತುಂಬಾ ವ್ಯತ್ಯಾಸವಿದೆ. ಅಲ್ಲಿಗೆ ಹೋದ ಜನರು ಆ ಘಟನೆ ಅಥವಾ ಸ್ಥಳಕ್ಕನುಸಾರವಾಗಿ ಹೇಗೆ ಯೋಚಿಸುತ್ತಾರೋ ಹಾಗೆ ಅಲ್ಲಿಯ ವಾತಾವರಣವು ನಿರ್ಮಾಣವಾಗುತ್ತದೆ. ಯಾರಾದರೂ ಹೊಸಬರು ಅಲ್ಲಿಗೆ ಬಂದರೆ ಅಲ್ಲಿಗೆ ಅನುಗುಣವಾಗಿಯೇ ಆ ಸ್ಥಿತಿಯನ್ನು ಅನುಭವ ಮಾಡುತ್ತಾರೆ. ಹಾಗೆ ಪರಮಾತ್ಮ ಶಿವನ ನೆನಪಿನಲ್ಲಿ ಬೇಸಾಯ ಮಾಡಿದ್ದಾದರೆ ಆ ಭೂಮಿ, ಗಾಳಿ, ನೀರಿಗೂ ಶಾಂತಿ, ಪವಿತ್ರತೆ ಹಾಗೂ ಶಕ್ತಿಗಳ ಪ್ರಕಂಪನೂ ದೊರಕುತ್ತದೆ. ಈ ತತ್ವಗಳೊಳಗೆ ಇರುವ ಜೀವಾಣುಗಳು ಆ ಪ್ರಕಂಪನದ ಜೊತೆ ಬೆಳೆಗೆ ಸೇರುತ್ತವೆ. ಹಾಗೂ ಸೂರ್ಯನ ಕಿರಣಗಳು ಬೆಳೆಯ ಮೇಲೆ ಬೀಳುತ್ತಿದ್ದಂತೆ ಆಹಾರ ತಯಾರಾಗುತ್ತದೆ. ನಾವು ಯೋಗದಲ್ಲಿ ಯಾವ ಶ್ರೇಷ್ಠ ವಿಚಾರಗಳನ್ನು ಮಾಡುತ್ತೇವೋ ಅದೂ ಕೂಡ ಆ ಧಾನ್ಯದಲ್ಲೂ ಬರುತ್ತದೆ. ಯೋಗದ ಪ್ರಯೋಗದಿಂದ ಜೀವಾಣುಗಳ ಸಂಖ್ಯೆಯು ಹೆಚ್ಚಾಗುತ್ತದೆ. ಹಾಗೂ ಧಾನ್ಯದ ಉತ್ಪಾಧನೆಯೂ ಹೆಚ್ಚುತ್ತದೆ. ಬೆಳೆಗಳ ಮೇಲೆ ಬರುವ ಅನೇಕ ಬಗೆಯ ರೋಗಗಳನ್ನು ಅಥವಾ ಕೀಟಗಳನ್ನು ತಡೆಯಬಹುದು. ಅಥವಾ ನಾಶ ಮಾಡಬಹುದು,

ಈ ಪ್ರಯೋಗವನ್ನು ನೋಡಿ ಈಗ ಅನೇಕ ರೈತ ಸಹೋದರ ಸಹೋದರಿಯರೂ ಕೂಡ ತಮ್ಮ ಜಮೀನಿನಲ್ಲಿ ಇದೇ ರೀತಿ ಪ್ರಯೋಗವನ್ನು ಮಾಡುತ್ತಿದ್ದಾರೆ. ಇದರಲ್ಲಿ ಪ್ರತಿಯೊಬ್ಬರದ್ದು ಅವರವರದ್ದೇ ಅನುಭವವಿದೆ.

**ಬಿ.ಕೆ. ಭೋಲಾನಾಥ್ ಶಿವಲಿಂಗಾ ಚೌಗುಲೆ, (36 ವರ್ಷ)**
**ಮು. ಟಾಕವಡೆ, ತಾ. ಈಚಲಕರಂಜಿ**
**ಜಿ. ಕೊಲ್ಹಾಪುರ (ಮಹಾರಾಷ್ಟ್ರ)**



ನಾನು 8 ವರ್ಷಗಳಿಂದ ಈಶ್ವರೀಯ ವಿಶ್ವವಿದ್ಯಾಲಯದ, ಇಚಲಕಾರಂಜಿ ಸೇವಾ ಕೇಂದ್ರದ ನಿಯಮಿತ ವಿದ್ಯಾರ್ಥಿಯಾಗಿದ್ದೇನೆ. ನನಗೆ 4 ಎಕರೆ ಜಮೀನಿದೆ. ಇದರಿಂದ ಕೇವಲ 13 ಗುಂಟೆ ಜಾಗದಲ್ಲಿ 5 ಸೆಪ್ಟೆಂಬರ್ 2006 ರಲ್ಲಿ ಕಬ್ಬಿನ ಬೆಳೆಯನ್ನು ಆರಂಭಿಸಿದೆ. ರಾಜಯೋಗದ ಅಭ್ಯಾಸ ಮತ್ತು ಪ್ರಯೋಗವನ್ನು ಈ ಜಮೀನಿನ ಮೇಲೆ ಮಾಡಲು ಪ್ರೇರಣೆ ಹಾಗೂ ಮಾರ್ಗದರ್ಶನವನ್ನು ಸೇವಾಕೇಂದ್ರದ ಶಿಕ್ಷಕಿ ಸಹೋದರಿಯವರು ನೀಡಿದರು. ನಾನು ಬೆಳೆಯ ಮೇಲೆ ಪ್ರತಿದಿನವೂ ರಾಜಯೋಗದ ಪ್ರಯೋಗ ಮಾಡಲು ಆರಂಭಿಸಿದೆ.. ರಾಜಯೋಗದ ಅಭ್ಯಾಸವನ್ನು ಮಾಡುತ್ತಾ, ಪರಮಪಿತ ಶಿವಪರಮಾತ್ಮನು ಜ್ಞಾನ, ಶಾಂತಿ, ಪ್ರೀತಿ, ಪವಿತ್ರತೆ, ಸುಖ ಆನಂದ ಹಾಗೂ ಶಕ್ತಿಗಳ ಸಾಗರನಾಗಿದ್ದಾನೆ ಅವನನ್ನು ನೆನಪು ಮಾಡಿದಾಗ ಎಲ್ಲಾ ಪ್ರಕಂಪನಗಳು ಪರಮಾತ್ಮ ಶಿವನಿಂದ ನಮ್ಮೆಡೆಗೆ ಬರುತ್ತಿವೆ ಮತ್ತು ಆ ಪ್ರಕಂಪನಗಳು ನಿಧಾನವಾಗಿ ನನ್ನ ಮುಖಾಂತರ ಬೆಳೆಯ ಮೇಲೂ ಹರಿಯುತ್ತಿವೆ ಎಂಬ ಅನುಭವ ಮಾಡಿದೆನು. ನಾನು ನನ್ನ ಜಮೀನನ್ನು ಬೆಳಗಿನ 4.30 ರಿಂದ 5.00 ರವರೆಗೆ ಮುಂದಕ್ಕೆ ತಂದುಕೊಂಡು ಅಭ್ಯಾಸ ಮಾಡುತ್ತಿದ್ದೆ. ಹಾಗೂ ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಜಮೀನಿನ ಮೇಲೆ ರಾಜಯೋಗದ ಪ್ರಯೋಗವನ್ನು ಮಾಡುತ್ತಿದ್ದೆ ಬೆಳಗಿನ ಅಮೃತವೇಳೆ 4.30 ಗಂಟೆಗೆ ಬೆಳೆಯನ್ನು ಮುಂದಿಟ್ಟುಕೊಂಡು ಆತ್ಮದ ಅನಾದಿ ಗುಣ (ಶಾಂತಿ, ಪ್ರೀತಿ, ಪವಿತ್ರತೆ) ಗಳ ಕಿರಣಗಳ ಪ್ರಕಂಪನ ಹರಿಸುತ್ತಿದ್ದೆ ಹಾಗೂ ಪ್ರಕೃತಿಯ ಸಾತ್ವಿಕ ಗುಣವನ್ನು ಮುಂದಿಟ್ಟುಕೊಳ್ಳುತ್ತೇನೆ. ಜಮೀನಿನಲ್ಲಿ

ಕೆಲಸ ಮಾಡುವಾಗ ಕರ್ಮಯೋಗ ಅಂದರೆ ಪರಮಾತ್ಮ ಶಿವನ ನೆನಪು ಮಾಡುತ್ತಿದ್ದೆನು. ಟಾಕವಡೆ ಗೀತಾ ಪಾಠಶಾಲೆಯ 8 ಜನ ಸಹೋದರ ಸಹೋದರಿಯರು ಬೆಳೆಯನ್ನು ಮುಂದಿಟ್ಟುಕೊಂಡು ಸಂಘಟನೆಯಲ್ಲಿ ಅರ್ಧ ಗಂಟೆ ಕಾಲ ಸಾಮೂಹಿಕವಾಗಿ ರಾಜಯೋಗದ ಅಭ್ಯಾಸವನ್ನು ತಿಂಗಳಲ್ಲಿ ಒಂದು ದಿನ ಮಾಡುತ್ತೇವೆ. ಈ ರಾಜಯೋಗದ ವಿಧಿಯಿಂದ ಕಬ್ಬಿನ ಬೆಳೆ ಅತ್ಯುತ್ತಮವಾಗಿ ಬೆಳೆಯಲಾರಂಭಿಸಿತು. ಹಿಂದಿನ ವರ್ಷ ರಾಸಾಯನಿಕ ಗೊಬ್ಬರದ ಬಳಕೆಯಿಂದ ಬೆಳೆದ ಕಬ್ಬಿಗಿಂತಲೂ ಹೋಲಿಸಿ ನೋಡಿದ್ದಾದರೆ ತುಂಬಾ ಚೆನ್ನಾಗಿ ಬಂದಿತ್ತು. ಈ ಪ್ರಯೋಗದ ಫಲವಾಗಿ ನಾನು ರಾಸಾಯನಿಕ ಗೊಬ್ಬರವನ್ನು ಬಳಸುವುದಕ್ಕೆ ಬದಲಾಗಿ ಗೋಮೂತ್ರ ಮತ್ತು ಹಸುವಿನ ಗೊಬ್ಬರ, ಅಜೋಟೊಬಕ್ಟರ್ ಹಾಗೂ ಪಿ.ಎಸ್.ಬಿ ಕಲ್ಚರ್ ಅನ್ನು ಬಳಸಿದೆನು. ನಾನು ಧಾನ್ಯದ ಸ್ಲರಿಯನ್ನು 3 ಸಾರಿ ಹಾಗೂ ಧಾನ್ಯದ ಕ್ಷೀರವನ್ನು ಒಂದು ಸಾರಿ ಬಳಸಿದೆನು.

ಕಬ್ಬಿಗೆ ಲೋಕರಿಮಾವಾದಿಂದ ರಕ್ಷಿಸಲು ನಾನು ರಾಸಾಯನಿಕ ಕೀಟಕ್ಕೆ ಬದಲಾಗಿ ಒಂದು ಕಿ.ಲೋ ಹಸುವಿನ ಗೊಬ್ಬರವನ್ನು ಒಂದು ಲೀಟರ್ ನೀರಿನಲ್ಲಿ ನೆನಸಿ ಮರುದಿನ ಜರಿಡಿಸಿ ಅದಕ್ಕೆ 75 ಮಿ.ಲೀ. ನೀರು ಹಾಗೂ 50 ಮಿ.ಲೀ ಗೋಮೂತ್ರವನ್ನು ಮಿಶ್ರಣ ಮಾಡಿ 2007 ಜೂನ್ ಮತ್ತು ಆಗಸ್ಟ್‌ನಲ್ಲಿ 2ಸಾರಿ ಸಿಂಪಡಿಸಿದೆ. ಈ ಬೆಳೆಯನ್ನು 2008 ಜನವರಿಯಲ್ಲಿ ಕಟಾವು ಮಾಡಿದೆನು. ಇದರಲ್ಲಿ ನನಗೆ 21 ಮೆಟ್ರಿಕ್ ಟನ್(21000ಕಿ.ಲೋ.) ಬೆಳೆ ಸಿಕ್ಕಿತು. ನನಗೆ ಉಳುಮೆ, ಬೀಜ ಮೇಲೆ ತಿಳಿಸಿದ ಜೈವಿಕ ಗೊಬ್ಬರ ಹಾಗೂ ಸಂರಕ್ಷಣೆಯ ಜೈವಿಕ ಕ್ರಿಯೆಗೆ 2964/- ರೂಗಳು ವೆಚ್ಚವಾದವು. ಇದಕ್ಕೆ ಮೊದಲು ಇದೇ ಜಮೀನಿನಲ್ಲಿ ಕಬ್ಬಿನ ಬೆಳೆಗೆ ಸುಮಾರು 16 ಮೆಟ್ರಿಕ್ ಟನ್ (16000ಕಿ.ಲೋ.)ದೊರೆತ್ತಿತ್ತು. ರಾಸಾಯನಿಕ ಗೊಬ್ಬರದ ಬಳಕೆ ಇತ್ಯಾದಿಗಳಿಗೆ ಒಟ್ಟು 5900/- ವೆಚ್ಚವಾಗಿತ್ತು. ಇದೇ 13 ಗುಂಟೆ ಜಮೀನಿನಲ್ಲಿ ಯೋಗಿಕ ಮತ್ತು ಸಾವಯವ ಕೃಷಿ ಮಾಡಿದ್ದರಿಂದ ಒಟ್ಟು ಖರ್ಚಿನಲ್ಲಿ 3000/- ರೂಗಳು ಉಳಿತಾಯವಾಯಿತು. ಹಾಗೂ 5 ಮೆಟ್ರಿಕ್ ಟನ್ ಕಬ್ಬು ಹೆಚ್ಚಾಗಿ ಬೆಳೆಯಿತು.

ಶಾಶ್ವತ ಯೋಗಿಕ ಕೃಷಿ ಒಂದು ಅತ್ಯುತ್ತಮವಾದ ವಿಧಾನವಾಗಿದೆ ಎಂದು ನನ್ನ ವ್ಯಕ್ತಿಗತ ಅಭಿಪ್ರಾಯ. ಬಹಳ ಕಾಲದಿಂದಲೂ ಸಾಗಿಬಂದ ಜೀವನ ಚಕ್ರ 'ಜೀವೋ ಜೀವಸ್ಯ ಜೀವನಂ, ಜೀವ ಜೀವಾತ್ ಜಾಯತೆ' ಈ ಮಾತಿಗನುಗುಣವಾಗಿ ಈ ಚಕ್ರವು ನಡೆಯುತ್ತಾ ಬಂದಿದೆ. ಆದ್ದರಿಂದ ಈ ಪದ್ಧತಿಯಿಂದ ಕೀಟಾಣುಗಳನ್ನು ನಾಶಮಾಡಬೇಕಾಗಿಲ್ಲ. ಇದರಿಂದ ಉತ್ತಮವಾದ ಬೆಳೆಯು ಪ್ರಾಪ್ತಿಯಾಗುತ್ತದೆ. ಮತ್ತು ಉನ್ನತ ಮಟ್ಟದ ಬೆಳೆಯು ಸಿಗುತ್ತದೆ. ರಾಜಯೋಗದ ಅಭ್ಯಾಸದಿಂದ ಮನಸ್ಸು ಆರೋಗ್ಯಕರವಾಗಿರುತ್ತದೆ ಮತ್ತು ಬೆಳೆಯಲ್ಲೂ ಸುಧಾರಣೆಯಾಗುತ್ತದೆ. ಇದು ನನ್ನ ಸ್ವಂತ ಅನುಭವವಾಗಿದೆ.